ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 52


ಡಿಸೆಂಬರ್ 29, 2013

ಪುಟ 16 ರೂ. 10/-




ನೂರು ದಿನಗಳ 'ಉದ್ಯೋಗ ಖಾತ್ರಿ'ಯಾಗಲಿ ಕಾಯಕ ಬಂಧುಗಳ ಸಮಾವೇಶದ ಆಗ್ರಹ





ಸಿಇಟಿ- ಸಾಮಾಜಿಕ ನ್ಯಾಯಕ್ಕೆ ಸಂಚಕಾರ ತರವೇ ?






ಲೋಕಪಾಲ ಸ್ಥಾಪನೆ ಮಾತ್ರ ಸಾಲದು



ಅರಣ್ಯ ಅತಿಕ್ರಮಣ ಭೂಮಿ ಹಕ್ಕಿಗಾಗಿ ಹೆದ್ದಾರಿ ತಡೆ

ಶಿಕ್ಷಣ ಸಮಾನತೆಯೊಳಗಿನ ಅಸಮಾನತೆ

ಭಾಗ – 7



ಚೋಮನ ದುಡಿ

ಜಿ. ಎನ್. ನಾಗರಾಜ್

"ಸರ್ವರಿಗೆ ಸಮಪಾಲು, ಸಮಬಾಳು
ಎಂದು ನವಯುಗ ವಾಣಿ ಘೋಷಿಸಿದೆ ಕೇಳಿ"

ಇದು ರಾಷ್ಟ್ರಕವಿ ಕುವೆಂಪುರವರು ಆಧುನಿಕ ಕರ್ನಾಟಕದ ಮುಂದೆ ಮಂಡಿಸಿದ ಪ್ರಣಾಳಿಕೆ. ಶಿಕ್ಷಣ ಸಮಾನತೆಯ ಒಂದು ಮುಖ್ಯ ಸಾಧನ, ಜಾತಿ ವ್ಯವಸ್ಥೆಯನ್ನು ತೊಡೆಯಲು ಪ್ರಧಾನ ಸಾಧನ ಎಂದು ಭಾವಿಸಲಾಗಿತ್ತು. ಸ್ವಾತಂತ್ರ್ಯದ ಮೊದಲ ದಶಕದಲ್ಲಿ ಸರ್ಕಾರಿ ಶಾಲೆಗಳನ್ನು ಹೊಸದಾಗಿ ಆರಂಭಿಸುತ್ತಿರುವಾಗ ಇದು ನಿಜ ಎಂಬಂತೆ ಕಾಣಿಸುತ್ತಿತ್ತು. ಇದ-ರಿಂದ ಕೆಳ ಜಾತಿಗಳು ಹಾಗೂ ದಲಿತರಲ್ಲಿ ಮೊದಲ ತಲೆಮಾರಿನ ಅನೇಕ ಬಾಲಕರು ವಿದ್ಯಾಭ್ಯಾಸ ಪಡೆದರು. ಈ ಬೆಳವಣಿಗೆ ದಲಿತ ಸಾಹಿತ್ಯಕ್ಕೆ ಹಾಗೂ ಚಳುವಳಿಗೆ ಪ್ರೇರಕ ಶಕ್ತಿಯಾಯಿತು. ಶಿಕ್ಷಣದ ಬಗ್ಗೆ ಒಂದು ಉತ್ಸಾಹದ ಭಾವನೆ ವ್ಯಕ್ತವಾಯಿತು. ಆದರೆ ಈ ಸಂದರ್ಭದಲ್ಲಿ ಬಹುಭಾಗದ ದಲಿತರು, ಇತರ ಕೆಳ ಜಾತಿಗಳು, ಮುಸ್ಲಿಮರು ಶಿಕ್ಷಣದಿಂದ ವಂಚಿತರಾದ ಬಗ್ಗೆ ಗಮನ ಕೊಡಲಿಲ್ಲ. ಆಳುವ ಸರ್ಕಾರಗಳು ಕೊಟ್ಟ ಅಲ್ಪ ಸ್ವಲ್ಪ ಶಿಕ್ಷಣವನ್ನು ದಲಿತರ ಉದ್ಧಾರದ ಬಹು ದೊಡ್ಡ ಸಾಧನೆ ಎಂದು ಬಿಂಬಿಸಿದುವು. ದಲಿತ-ಬಂಡಾಯ ಚಳುವಳಿ ಕೂಡ ತನ್ನ ಅತ್ಯುತ್ಸಾಹದಲ್ಲಿ ದಲಿತರ, ಕೆಳ ಜಾತಿಗಳ ಬಹುಭಾಗದ ಜನರು ಶಿಕ್ಷಣ ವಂಚಿತರಾಗಿರುವ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಅದರ ಬಗ್ಗೆ ವಿಶ್ಲೇಷಣೆ, ಆಂದೋಲನಗಳ ನಡೆಸುವ ಕಡೆ ಗಮನ ಕೊಡಲಿಲ್ಲ. ಹಂಪಿ ವಿಶ್ವ ವಿದ್ಯಾಲಯದ ಡಾ.ಟಿ. ಆರ್. ಚಂದ್ರಶೇಖರ್ ರವರ ಹೊರತಾಗಿ ನಮ್ಮ ಹೆಚ್ಚಿನ ಸಂಶೋಧಕರು ಕೂಡ ಶಿಕ್ಷಣದಿಂದ ಹೊರ ಹಾಕಲ್ಪಟ್ಟ ದಲಿತ, ಕೆಳಜಾತಿಗಳ ಪರಿಸ್ಥಿತಿಯ ಶೋಧ ನಡೆಸಲಿಲ್ಲ.



ದಲಿತ, ಕೆಳಜಾತಿಗಳ ಶಿಕ್ಷಣದ ಪರಿಸ್ಥಿತಿ ಕೆಲವು ಅಂಕಿ ಅಂಶಗಳು

ಸಾಕ್ಷರತೆ:

ಇತ್ತೀಚೆಗೆ ಎಂದರೆ 2001 ರ ಜನಗಣತಿಯ ವರದಿಯಂತೆ ಕೇವಲ ಸಾಕ್ಷರತೆಯಲ್ಲಿ (ಅಂ-ದರೆ ಹೇಗೋ ಮಾಡಿ ತನ್ನ ಹೆಸರಿನ ಸಹಿ ಮಾಡುವುದನ್ನು ಕಲಿತುಕೊಂಡಿದ್ದಾರೆ ಎಂಬುದೇ ಸಾಕ್ಷರತೆಯ ವ್ಯಾಖ್ಯೆ. ಸಾಕ್ಷರರು ಎಂದರೆ ಓದು ಬರಹ ಬಲ್ಲವರು ಎಂದಲ್ಲ ಎಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು.) ದಲಿತೇತರರ ಪ್ರಮಾಣ ಶೇ.70.94. ದಲಿತರಲ್ಲಿ ಅದು ಶೇ. 50.55. ಅಂತರ ಶೇ 19.39 ರಷ್ಟು. ದಲಿತ ಮಹಿಳೆಯರಲ್ಲಿ ಶೇ. 40.26. ದಲಿತೇತರ ಮಹಿಳೆಯರಲ್ಲಿ 61.66. ಅಂತರ 21.40. ಗ್ರಾಮೀಣ ದಲಿತ ಮಹಿಳೆಯರ ಸಾಕ್ಷರತೆ ಕೇವಲ ಶೇ. 37.86. ದಶಕದಿಂದ ದಶಕಕ್ಕೆ ದಲಿತ ಅನಕ್ಷರಸ್ಥರ ಪ್ರಮಾಣ ಹೆಚ್ಚುತ್ತಾ ನಡೆದಿದೆ. ರಾಯಚೂರು, ಕೊಪ್ಪಳದಂತಹ ಜಿಲ್ಲೆಗಳಲ್ಲಿ ಗ್ರಾಮೀಣ ದಲಿತ ಮಹಿಳೆಯರ ಸಾಕ್ಷರತೆ ಕೇವಲ ಶೇ, 9 ರಿಂದ 10 ರಷ್ಟಿದೆ.

ಸಾಕ್ಷರತೆಯಲ್ಲಿ ದಲಿತರು ಎರಡು ದಶಕಗಳಷ್ಟು ದೂರ ಇದ್ದಾರೆ. ಇಂದು ಓದು ಬರಹ ಸಾಧಾರಣ ಉದ್ಯೋಗಗಳಿಗೂ ಅವಶ್ಯವೆನ್ನಿಸುವಾಗ ಸಹಿ ಹಾಕಲೂ ಬರದ ದಲಿತರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿದ್ದಾರೆ. ಅವರಿಗೆ ಸಿಗಬಹುದಾದ ಕೆಳ ಹಂತದ ಕೆಲಸಗಳನ್ನೂ ಕಳೆದುಕೊಳ್ಳುವ ಪರಿಸ್ಥಿತಿಗೆ ಅವರು ದೂಡಲ್ಪಡುತ್ತಿದ್ದಾರೆ. ಮಹಿಳೆಯರು ಇಂದು ಶಿಕ್ಷಣದಲ್ಲಿ ಬಹಳ ಮುಂದೆ ಸಾಗುತ್ತಿದ್ದಾ-ರೆ ಎನ್ನುವಾಗ ದಲಿತ ಗ್ರಾಮೀಣ ಮಹಿಳೆಯರ ಸಾಕ್ಷರತೆಯ ಪ್ರಮಾಣ ಅವರನ್ನು ಕೇವಲ ಕೂಲಿ ಕೆಲಸಗಳಿಗೆ ದೂಡುತ್ತದೆ. ಈ ಸಂಗತಿಗಳು ಯಾರನ್ನಾದರೂ ಬೆಚ್ಚಿ ಬೀಳಿಸಬೇಕು. ಆದ-ರೆ ಅಂತಹ ಪರಿಣಾಮಗಳನ್ನೇನೂ ಕಾಣುತ್ತಿಲ್ಲ ಎನ್ನುವುದೇ ಆತಂಕದ ವಿಷಯ.

ಎಸ್ಸೆಸೆಲ್ಸಿ ಹಂತ:

ಉದ್ಯೋಗದ ಬೇಟೆಯಲ್ಲಿ ಇನ್ನು ಮುಂದಿನ ಮುಖ್ಯ ಹಂತ ಎಸ್ಸೆಸ್ಸೆಲ್ಸಿ. ಇಂದು ಕನಿಷ್ಟ ಮಟ್ಟದ ಸರ್ಕಾರೀ ಅಥವಾ ಖಾಸಗೀ ಹುದ್ದೆಗಳನ್ನು ಪಡೆಯಬೇಕಾದರೆ ಎಸ್ಸೆಸ್ಸೆಲ್ಸಿ ಪಾಸಾಗಿರಲೇಬೇಕು. ಆಟೋ ಚಾಲಕರ ಲೈಸೆನ್ಸ್ ಪಡೆಯಬೇಕಾದರೂ ಇಂದು ಎಸ್ಸೆಸ್ಸೆಲ್ಸಿ ಪಾಸಾಗಿರಬೇಕು. ಅಂತಹ ಸನ್ನಿವೇಶದಲ್ಲಿ ಕರ್ನಾಟಕ ಸರ್ಕಾರ ನೇಮಿಸಿದ ಎರಡನೇ ಹಿಂದುಳಿದ ಆಯೋಗದ ಸಂಗ್ರಹಿಸಿದ ಮಾಹಿತಿಯಂತೆ 1985ರಲ್ಲಿ ವಿವಿಧ ಜಾತಿಗಳ ಜನಸಂಖ್ಯೆಗೆ ಹೋಲಿಸಿದರೆ ಎಸ್ಸೆಸ್ಸೆಲ್ಸಿ ಪಾಸಾದವರ ಪ್ರಮಾಣ ಈ ರೀತಿ ಇದೆ.


ಬ್ರಾಹ್ಮಣರು------	1.064
ಕುರುಬರು-------	0.148
ವೈಶ್ಯರು-------	0.874
ಬೆಸ್ತರು---------	0.141
ಕ್ರಿಶ್ಚಿಯನ್ನರು-----	0.714
ಬೇಡರು--------	0.120
ಲಿಂಗಾಯತರು----	0.431
ಎಸ್. ಸಿ. ------	0.211
ಒಕ್ಕಲಿಗರು-------	0.334
ಎಸ್. ಟಿ.------	0.154
ನಾಯಿಂದರು-----	0.326
ಈಡಿಗರು-------	0.255
ಮುಸ್ಲಿಮರು-----	0.241

ಬ್ರಾಹ್ಮಣರು ತಮ್ಮ ಜನ ಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಎಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಾಸಾದರೆ ವೈಶ್ಯರು ತಮ್ಮ ಜನಸಂಖ್ಯೆಯ ಪ್ರಮಾಣದ ಶೇ.87 ರಷ್ಟು ಪಾಸಾಗಿದ್ದಾರೆ. ಲಿಂಗಾಯತರು ಕೂಡ ತಮ್ಮ ಜನಸಂಖ್ಯೆಯ ಅರ್ಧಕ್ಕಿಂತ ಕಡಿಮೆ ಪ್ರಮಾಣದಲ್ಲಿ, ಒಕ್ಕಲಿಗರೂ ತಮ್ಮ ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಮಾತ್ರ ಪಾಸಾಗಿದ್ದಾರೆ. ಇನ್ನು ಕುರುಬರು, ಬೇಡರು, ಬೆಸ್ತರು ಮೊದಲಾದ ಹಿಂದುಳಿದ ಜಾತಿಗಳಂತೂ ದಲಿತರಿಗಿಂತ ಕಡಿಮೆ ಪ್ರಮಾಣದಲ್ಲಿ ಶೇ. 15 ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಪಾಸಾಗಿದ್ದಾರೆ. ದಲಿತರು ಕೇವಲ ಶೇ.21 ರಷ್ಟು, ಗಿರಿಜನರು ಶೇ.15 ರಷ್ಟು. ಸ್ವಾತಂತ್ರ್ಯ ಬಂದ ನಾಲ್ಕು ದಶಕಗಳ ನಂತರದ ಪರಿಸ್ಥಿತಿ ಹೀಗಿದ್ದರೆ ಅವರಿಗೆ ನೌಕ-ರಿಯ ಕಥೆ ಏನಾಗಿರಬಹುದು ?

ಉತ್ತಮ ಆದಾಯ ತರುವಂತಹ ವೈದ್ಯ, ಇಂಜನಿಯರಿಂಗ್, ಕೃಷಿ ಪದವಿಗಳಿಗೆ ಪ್ರವೇಶದ ಕಥೆ ಏನಾಗಿರಬಹುದು ? ಅದೇ ಅಯೋಗದ ವರದಿ ವೈದ್ಯ ಪದವಿ ಹಾಗೂ ಇಂಜನಿಯರಿಂಗ್ ಪದವಿಗಳಿಗೆ ಪ್ರವೇಶ ಪಡೆದವರ ಜಾತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದೆ. ಆ ಅಂಕಿ ಅಂಶಗಳನ್ನು ನೋಡಿದರೆ ಶಿಕ್ಷಣದಲ್ಲಿ ಬ್ರಾಹ್ಮಣೇತರ ಜಾತಿಗಳು 1985 ರವರೆಗೂ ಎಷ್ಟು ಹಿಂದುಳಿದಿದ್ದವೆಂಬುದು ಕಣ್ಣಿಗೆ ಹೊಡೆಯುವಂತೆ ಕಾಣುತ್ತದೆ.

ಜಾತಿ	**77 ರಿಂದ 83ರವರೆಗೆ ವೈದ್ಯ ಪದವಿಗೆ ಪ್ರವೇಶ ಪಡೆದವರಲ್ಲಿ ಪ್ರಮಾಣ**	**ಜನಸಂಖ್ಯೆಯಲ್ಲಿ ಪ್ರಮಾಣ**
ಬ್ರಾಹ್ಮಣರು	ಶೇ 21.53	3.81
ಲಿಂಗಾಯತರು	ಶೇ. 7.10	16.92
ಒಕ್ಕಲಿಗರು	ಶೇ. 9.37	11.68
ದಲಿತರು	ಶೆ. 12.32	15.86
ಕುರುಬರು	ಶೇ. 2.16	6.92
ಬೇಡರು	ಶೇ. 0.52	2.75
ಈಡಿಗರು	ಶೇ. 1.72	2.54

ಇಂಜನಿಯರಿಂಗ್ ಪದವಿಯಲ್ಲೂ ಇಂತಹದೇ ಪರಿಸ್ಥಿತಿಯನ್ನು ಕಾಣುತ್ತೇವೆ. ಆಸ್ಥಿವಂತರು ಗಣನೀಯವಾಗಿರುವ ಜಾತಿಗಳಾದ ಲಿಂಗಾಯತರು, ಒಕ್ಕಲಿಗರೂ ಕೂಡ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಪ್ರವೇಶ ಪಡೆಯಲು ಸೋತಿದ್ದಾರೆ ಎಂದರೆ ಇನ್ನುಳಿದವರ ಪಾಡೇನು? ಅದರಲ್ಲಿಯೂ ಕುರುಬರ, ಬೇಡರ ಸ್ಥಿತಿ ಇನ್ನೂ ಕೆಟ್ಟದು.



ದಲಿತರ ಶಿಕ್ಷಣದ ಬಗ್ಗೆ 2004ರಲ್ಲಿ ಸರ್ಕಾರದ ಅಂಕಿ-ಅಂಶ ಇಲಾಖೆ ತಯಾರಿಸಿದ ವರದಿ ಚಿತ್ರಣವನ್ನು ನೀಡುತ್ತದೆ.

ಅನಕ್ಷರಸ್ಥರು	ಶೇ. 50
4ನೇ ತರಗತಿ ಮತ್ತು ಕೆಳಗೆ	ಶೇ. 29
ಹಿರಿಯ ಪ್ರಾಥಮಿಕ ಶಾಲೆ ಮಟ	ಶೇ. 10
ಪ್ರೌಢ ಶಾಲೆ ಹಂತ	ಶೇ. 7
ಪಿಯುಸಿ	ಶೇ. 2.3
ಪದವೀಧರರು	ಶೇ. 1

ಶೇ. 1 ರಷ್ಟು ಪದವೀಧರರಲ್ಲಿಯೂ ವಿಜ್ಞಾ ವೈದ್ಯ, ಇಂಜನಿಯರಿಂಗ್ ಮೊದಲಾದ ಪ ಪದವಿಧರರು ಕಡಿಮೆ. ಆರ್ಟ್ಸ್ ಪದವೀಧ ಹೆಚ್ಚು. ಕೇವಲ 3 ರಷ್ಟು ಮಾತ್ರ ಪಿಯು ಹಂತ ತಲುಪಿರುವಾಗ ಇನ್ನೆಂತಹ ನೌಕರಿಗ ದೊರೆಯಲು ಸಾಧ್ಯ?

ಆದರೆ ಈ ಕನಿ ಪ್ರಮಾಣದಲ್ಲಿಯೂ ಸರ್ಕಾ ನೌಕರಿಗಳಲ್ಲಿ ದಲಿತರೇ ಮೇ ಹಂತದ ಹುದ್ದೆಗಳಲ್ಲಿ ತು ಹೋಗಿದ್ದಾರೆ ಎಂಬ ಕೂಗು ಎದ್ದಿ ದಲಿತರ ಬಗ್ಗೆ ಅಸೂಯೆಯಿ 'ಸರ್ಕಾರೀ ಬ್ರಾಹ್ಮಣರು', ಇತ್ಯಾ ಮಾತುಗಳಿಂದ ಹಂಗಿಸುವು ಸಾಮಾನ್ಯವಾಗಿದೆ.

ನಮ್ಮ ಪ್ರಮ ಸಾಹಿತಿಗಳಲ್ಲೊಬ್ಬರಾ ದೇವನೂರು ಮಹದೇವರು ತ ಸಾಹಿತ್ಯದ ಬಗ್ಗೆ ಬರೆದುಕೊಳ್ಳು ಹೀಗೆ ಹೇಳಿದ್ದಾರೆ:

"ನಾನು ಕತ್ತಲ ರಾಜ್ಯದಿ ಬಂದವನು. ಕಲಾ ಮಾಧ್ಯಮದು ನಾನು ಕಂಡುಕೊಳ್ಳುತ್ತಿರುವು ಒಂದು ಆಕಸ್ಮಿಕವೇ. ನಾ ಇದುವರೆಗೂ ಬರೆದಿರುವುದು. ನ ರಾಜ್ಯದ ಮನುಷ್ಯನ ಆರೇಳು ಬೆರಳುಗಳ ಹೆಚ್ಚೆಂದರೆ ಒಂದು ಹಸ್ತ ಇದ್ದೀತು. ಅದ ಕನ್ನಡ ಸಾಹಿತ್ಯದ ಗತಿಯನ್ನು ತನ್ನ ಪ್ರಮಾಣಕ್ಕಿ ಹೆಚ್ಚಾಗಿ ಅಲ್ಲಾಡಿಸಿದೆ. ಕತ್ತಲ ರಾಜ್ಯದ ಇಡ ಮನುಷ್ಯ ಮಾತನಾಡುವುದಾದರೆ ಒಂದ ಸಮುದಾಯವೇ ಮಾತಾಡಿದಂತಾಗಬಹುದು."

ಇದನ್ನೇ ದಲಿತರ ಶಿಕ್ಷಣಕ್ಕ ಅನ್ವಯಿಸಬಹುದು ದಲಿತ ಸಮುದಾಯ ಕೇವಲ ಒಂದು ಹಸ್ತದ ಪ್ರ ಮಾತ್ರ ವಿ ಪಡೆದಿದ ಇದರಿಂದಲೇ ಈ ಬೆಳವಣಿಗೆಗಳು ದಲಿತ ಸಾಹಿತ್ಯ ಚಳುವಳಿ ಹುದ್ದೆಗಳಲ್ಲಿ ಪಾಲ ಆಗಬಹುದಾದರ ಇನ್ನು ದಲಿತ ಕೆಳ ಜಾತಿಗ ಲೋಕವೆಲ್ಲ ಶಿಕ್ಷಣ ಲೋಕವನ್ನ ಪ್ರವೇಶಿಸಿದರ ಇನ್ನೆಂತಹ ಊಹಿಸಲೂ ಆಗದ ಸಾಮಾಜಿಕ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿ ಬೆಳವಣಿಗೆಗಳು ಸಾಧ್ಯವಾಗಬಲ್ಲುದು ಊಹಿಸಲೂ ಕೂಡ ಸಾಧ್ಯವಿಲ್ಲ. ಅ ಸಮಾಜದ ಸೃಷ್ಟಿಗೆ ದಲಿತ ಸಾಹಿತ್ಯ, ಚಳುವಳಿಗ ಎಲ್ಲಾ ಪ್ರಗತಿಪರರ ಗಮನ ಹರಿಯಬೇಕಾಗಿದೆ.

ಕೃಪೆ : ಅಗ್ನಿ ವಾರಪತ್ರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಸಿದ್ದರಾಮಯ್ಯ ಆಡಳಿತದಲ್ಲಿಯೂ ನಿಲ್ಲದ ಸಾಮಾಜಿಕ ಬಹಿಷ್ಕಾರ

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಗದ್ಯಾಳ ಗ್ರಾಮದ ದಲಿತರಿಗೆ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ ಎಂಬ ಅಮಾನವೀಯ ಘಟನೆ ವರದಿಯಾಗಿದೆ. ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧ ದೊಡ್ಡ ಸಮರವನ್ನೇ ನಡೆಸಿದ ವಚನಕಾರರು ನಡೆದಾಡಿದ ಈ ಪ್ರದೇಶದಲ್ಲಿ ತಳ ಸಮುದಾಯಗಳು ಇಂದಿಗೂ ಜಾತಿ ದೌರ್ಜನ್ಯವನ್ನು ಅನುಭವಿಸುತ್ತಿರುವುದು ಖೇದದ ಸಂಗತಿಯಾಗಿದೆ. ಜಾತಿ ಅಸಹನೆಯನ್ನು ಕಾನೂನುಬಾಹಿರಗೊಳಿಸಿರುವ ಸಂವಿಧಾನವನ್ನು ಅಂಗೀಕರಿಸಿ ಆರು ದಶಕಗಳೇ ಕಳೆದರೂ ನಮ್ಮ ಜನರ ಮನೋಧರ್ಮ ಬದಲಾಗಿಲ್ಲ ಎಂಬುದಕ್ಕೆ ಇದೂ ಒಂದು ನಿದರ್ಶನವಾಗಿದೆ. ಇಂತಹ ಘಟನೆಗಳು ನಮ್ಮ ಗ್ರಾಮೀಣ ಸಮಾಜದಲ್ಲಿ ನಡೆಯುತ್ತಲೇ ಇವೆ. ಕೆಲವೊಂದು ಮಾತ್ರ ಸುದ್ದಿ ಆಗುತ್ತವೆ. ಬಹುತೇಕ ಸಂದರ್ಭದಲ್ಲಿ ಕ್ರೌರ್ಯಕ್ಕೆ ಒಳಗಾದ ದಲಿತ ಸಮುದಾಯಗಳು ಅನ್ಯಾಯವನ್ನು ಬಯಲಿಗೆಳೆಯಲು ಇಷ್ಟಪಡದೆ ಸವರ್ಣೀಯರಿಗೆ ಶರಣಾಗಿ ಬದುಕು ಸಾಗಿಸಲು ಯತ್ನಿಸುತ್ತಾರೆ. ಪರಂಪರಾಗತವಾಗಿ ದಲಿತರಿಗೆ ಆಸ್ತಿಯ ಹಕ್ಕನ್ನು, ವಿದ್ಯೆಯನ್ನು ನಿರಾಕರಿಸುತ್ತಾ ಬಂದುದರಿಂದಾಗಿ ಆ ಸಮುದಾಯಗಳಿಗೆ ಗುಲಾಮಗಿರಿ ಅಲ್ಲದೆ ಬೇರೆ ಆಯ್ಕೆ ಇಲ್ಲದಂತಾಗಿದೆ.

ನಾವು ಯಾರೂ ಹುಟ್ಟುವಾಗ ಇಂತಹ ಜಾತಿಯಲ್ಲಿ ಹುಟ್ಟಬೇಕು ಎಂದು ಅರ್ಜಿ ಹಾಕಿಕೊಂಡು ಹುಟ್ಟಿರುವುದಿಲ್ಲ. ಹುಟ್ಟು ಆಕಸ್ಮಿಕ, ಹುಟ್ಟಿನ ಆಧಾರದಲ್ಲಿ ಕೆಲವರನ್ನು ಪಶುಗಳಿಗಿಂತ ಕೀಳಾಗಿ ಕಾಣುವ ಈ ಜಾತಿ ಪದ್ಧತಿಯನ್ನು ಸಮರ್ಥಿಸುವುದು ಸಾಧ್ಯವೇ? ದಲಿತರು ಸವರ್ಣೀಯರೆಂದು ಕರೆದುಕೊಳ್ಳುವವರಿಗಿಂತ ಯಾಕೆ ಕೀಳು? ದಲಿತರು ಎಂದು ಗುರುತಿಸಲ್ಪಡುವವರು ಸವರ್ಣೀಯರಿಗಿಂತ ದೈಹಿಕವಾಗಿಯಾಗಲಿ, ಬೌದ್ಧಿಕವಾಗಿಯಾಗಲಿ ಭಿನ್ನವಾಗಿದ್ದಾರಾ? ದಲಿತರು ದಾನಮಾಡಿದ ರಕ್ತವನ್ನು ಬಳಸಿಕೊಂಡು ಸವರ್ಣೀಯರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳುವುದಿಲ್ವಾ?

ಹೋಗಲಿ, ನಮ್ಮ ಮೂಲದಲ್ಲಿ ಜಾತಿ ಆಧಾರಿತ ಭಿನ್ನತೆ ಇದೆಯಾ? ಮಾನವರೆಲ್ಲರೂ ಒಂದೇ ಮೂಲದಿಂದ ಬಂದವರಲ್ಲವೆ? ಮಂಗನಿಂದಲ್ಲವೆ ಮಾನವ ಕುಲ ವಿಕಾಸಗೊಂಡಿದ್ದು? ಮಂಗನಿಂದ ಮಾನವ. ನಾವೆಲ್ಲರೂ ಮಂಗನ ಕುಲದಿಂದ ಬಂದವರು. ಮಾನವರಾಗಿ ವಿಕಾಸಗೊಂಡ ಮಂಗಗಳಲ್ಲಿ ಬ್ರಾಹ್ಮಣ ಮಂಗಗಳು, ಕ್ಷತ್ರೀಯ ಮಂಗಗಳು, ಶೂದ್ರ ಮಂಗಗಳು ಎಂಬುದು ಇತ್ತಾ? ಅತಿ ಹೆಚ್ಚು ಅಭಿವೃದ್ಧಿ ಹೊಂದಿದ ಒಂದು ಮಂಗನ ತಳಿಯಿಂದ ಮಾನವನ ವಿಕಾಸವಾಯಿತು. ಹಾಗಿರುವಾಗ ನಮ್ಮೆಲ್ಲರ ಮೂಲ ಒಂದೇ. ಅಲ್ಲವೇ?

ಮೂಲವೂ ಒಂದೇ, ರಕ್ತವೂ ಒಂದೇ ಆಗಿರುವಾಗ ಏಕೆ ಈ ಜಾತಿ ಬೇದ? ಯಾಕೆ ಈ ಕ್ರೌರ್ಯ? ಯಾಕೆ ಈ ಅವಮಾನ?

ನಮ್ಮ ದಲಿತ ಬಂಧುಗಳು ಕಷ್ಟಪಟ್ಟು ಸ್ವಲ್ಪ ಭೂಮಿಯನ್ನು ಸಂಪಾದಿಸಿ, ಬೇಸಾಯ ಮಾಡಿಕೊಂಡು ಬದುಕಲು ಪ್ರಯತ್ನ ಪಟ್ಟರೆ ನಮ್ಮ ಸವರ್ಣೀಯ ಬಂಧುಗಳು ಏಕೆ ಹೊಟ್ಟೆಕಿಚ್ಚು ಪಡಬೇಕು? ನಮ್ಮ ದಲಿತ ಯುವಜನರು ಮೀಸಲಾತಿ ಪ್ರಯೋಜನ ಪಡೆದು. ವಿದ್ಯಾವಂತರಾಗಿ, ತಮ್ಮ ಪ್ರತಿಭೆಯನ್ನು ಬೆಳೆಸಿಕೊಂಡು ನೌಕರಿ ಮಾಡಲು ಸಾಧ್ಯವಾದಾಗ ನಮ್ಮ ಸವರ್ಣೀಯ ಬಂಧುಗಳು ಅಸೂಯೆ ಪಡುವುದು ಸಣ್ಣತನವಲ್ಲವೇ? ಸತ್ತ ದನಗಳನ್ನು ಸಾಗಿಸುವುದು, ಮಲ ಎತ್ತುವುದು, ತಮಟೆ ಬಾರಿಸುವುದು ಮುಂತಾದ ಹಿಂದಿನಿಂದ ಮಾಡಿಕೊಂಡು ಬರಲಾದ ವೃತ್ತಿ ಕೆಲಸಗಳನ್ನು ಇಂದಿನ ವಿದ್ಯಾವಂತ ಯುವಕರು ಇಷ್ಟಪಡದಿರಬಹುದು. ಅಂತಹ ಅವಮಾನದ ಕೆಲಸಗಳನ್ನು ತಿರಸ್ಕರಿಸಲು ಅವರಿಗೆ ಹಕ್ಕಿದೆ. ದಲಿತರು ಇಂತಹ ಕೆಲಸಗಳನ್ನು ಈಗಲೂ ಮಾಡುತ್ತಿರಬೇಕು ಎಂದು ಒತ್ತಾಯಿಸುವುದು ಜಾತಿ ಅಹಂಕಾರದ ಪರಮಾವಧಿ. ನಾಗರಿಕ ಸಮಾಜ ತಲೆತಗ್ಗಿಸುವಂತಹದು.

ದಲಿತರ ಮೇಲಿನ ದೌರ್ಜನ್ಯ ತಡೆಗೆ ಕಾನೂನುಗಳಿವೆ. ಅವೆಲ್ಲವೂ ಕಾಗದದಲ್ಲೇ ಧೂಳು ತಿನ್ನುತ್ತವೆ. ದಲಿತರ ರಕ್ಷಣೆಗೆ ನಿಲ್ಲಬೇಕಾದ ಪೊಲೀಸ್ ವರಿಷ್ಠರೇ ದೌರ್ಜನ್ಯವೆಸಗುವವರ ಬೆಂಬಲಕ್ಕೆ ನಿಲ್ಲುತ್ತಾರೆ. ಯಾಕೆಂದರೆ ಅವರು ಸವರ್ಣೀಯರೇ ಆಗಿರುತ್ತಾರೆ ಅಥವ ಸವರ್ಣೀಯ ಪುಡಾರಿಗಳು ಚೆಲ್ಲುವ ಎಂಜಲಿಗೆ ಕೈವೊಡ್ಡುವವರಾಗಿರುತ್ತಾರೆ. ಕೇವಲ ಕಾನೂನುಗಳಿಂದ ದಲಿತರಿಗೆ ನ್ಯಾಯ ಸಿಗಲಾರದು ಎಂಬುದು ಸಂಶಯಾತೀತವಾಗಿ ಸಾಬೀತಾಗಿದೆ. ಒಂದು ದೊಡ್ಡ ಜನಾಂದೋಲನದಿಂದ ಮಾತ್ರ ಜಾತಿ ಪೂರ್ವಾಗ್ರಹಗಳಿಂದ ಮುಕ್ತವಾದ ಮನಸ್ಸುಗಳನ್ನು ಸೃಷ್ಟಿಸಬಹುದು. ಅನ್ಯಾಯಕ್ಕೆ, ಅವಮಾನಕ್ಕೆ ಗುರಿಯಾಗುತ್ತಿರುವ ತಳ ಸಮುದಾಯಗಳ ಜನ ಈ ಆಂದೋಲನದ ಮುಂಚೂಣಿಯಲ್ಲಿರಬೇಕು, ತಮ್ಮ ಆರ್ಥಿಕ ಸಬಲೀಕರಣದ ಪ್ರಶ್ನೆಗಳೊಂದಿಗೆ ಸಾಮಾಜಿಕ ದಮನದ ಪ್ರಶ್ನೆಯನ್ನು ಎತ್ತಿಕೊಳ್ಳಬೇಕು. ದಲಿತರ ಈ ವಿಮೋಚನಾ ಹೋರಾಟದಲ್ಲಿ ದಲಿತೇತರರನ್ನೂ ಒಳಗೊಳಿಸಬೇಕು.

ಎಲ್ಲಾ ಸವರ್ಣೀಯರು ಜಾತಿವಾದಿಗಳಾಗಿರುವುದಿಲ್ಲ. ಜಾತಿವಿನಾಶದ ಹೋರಾಟದಲ್ಲಿ ದಲಿತರಲ್ಲದ ಎಲ್ಲರನ್ನೂ ಸಂಶಯದಿಂದ ನೋಡಿ ದೂರ ಇಟ್ಟದ್ದು ಇತಿಹಾಸದಲ್ಲಾದ ತಪ್ಪು. ಅದನ್ನು ಈಗಲಾದರೂ ಸರಿಪಡಿಸಬೇಕು. ಜಾತಿ ಅಸ್ಪೃಶ್ಯತೆಯನ್ನು ತೊಡೆದು ಹಾಕಬೇಕೆಂದು ಬಯಸುವ ಸವರ್ಣೀಯರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಜಾತಿ ದೌರ್ಜನ್ಯ, ಜಾತಿ ಬಹಿಷ್ಕಾರದಂತಹ ಎಲ್ಲಾ ಸಂದರ್ಭಗಳಲ್ಲಿ ದಲಿತರು ಮತ್ತು ದಲಿತೇತರರು ಒಟ್ಟಾಗಿ ಹೋರಾಟಕ್ಕಿಳಿಯುವುದು ಸಾಧ್ಯವಾಗಬೇಕಾಗಿದೆ. ■

ವೃತ್ತಿ ಶಿಕ್ಷಣ: ಖಾಸಗಿ ಆಡಳಿತ ಮಂಡಳಿಗಳ ಲಾಬಿಗೆ ಮಣಿ ಸಿಇಟಿಯನ್ನೇ ರದ್ದು ಮಾಡುವ ಹುನ್ನಾರ

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ(ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ಕಾಯ್ದೆ) ಹೆಸರಿನಲ್ಲಿ ಇಡೀ ವೃತ್ತಿ ಶಿಕ್ಷಣವನ್ನು ಮಾರಾಟದ ಸರಕನ್ನಾಗಿಸಲು ಸರ್ಕಾರ ಹೊರಟಿದೆ. ಕಾಯ್ದೆಯನ್ನು ಜಾರಿ ಮಾಡುವ ಕ್ರಮದ ಮೂಲಕ ರಾಜ್ಯ ಸರಕಾರ ವೃತ್ತಿಶಿಕ್ಷಣದ ಕನಸು ಹೊತ್ತ ವಿದ್ಯಾರ್ಥಿಗಳ ಕನಸಿಗೆ ಭಂಗ ತಂದಿದೆ. ಇಂಜನಿಯರಿಂಗ್ ಮತ್ತು ಮೆಡಿಕಲ್ ಕೋರ್ಸ್‌ಗಳಿಗೆ ಶುಲ್ಕವನ್ನು ಹೆಚ್ಚಿಸುವುದಕ್ಕೆ ಅವಕಾಶ ಮಾಡಿಕೊಡುವ ಜೊತೆಯಲ್ಲಿ ಖಾಸಗಿ ಕಾಲೇಜುಗಳಿಗೆ ಸಿಇಟಿ ಮೂಲಕ ಪ್ರವೇಶ ಪ್ರಕ್ರಿಯೆ ಕೈ ಬಿಡಲು ರಾಜ್ಯ ಸರ್ಕಾರ ಮುಂದಾಗಿದೆ. ಸರ್ಕಾರದ ಈ ನೀತಿಯಿಂದಾಗಿ ಶಿಕ್ಷಣಾಸಕ್ತರಾದ ಪ್ರತಿಭಾನ್ವಿತ ಲಕ್ಷಾಂತರ ದಲಿತ–ಹಿಂದುಳಿದ–ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯದ ವಂಚನೆಯಾಗಿದೆ ಮತ್ತು ಇದರಿಂದ ಸಾಮಾನ್ಯ ವಿಭಾಗದ ಬಡ ವಿದ್ಯಾರ್ಥಿಗಳಿಗೂ ಅನ್ಯಾಯವಾಗಿದೆ.

ಇದೇ ಶೈಕ್ಷಣಿಕ ವರ್ಷದಿಂದ ಈ ಕಾಯ್ದೆಯನ್ನು ಜಾರಿ ಮಾಡಲು ರಾಜ್ಯ ಸರಕಾರ ಮುಂದಾಗಿದೆ. ಕಾಯ್ದೆ ಪ್ರಕಾರ ಶುಲ್ಕ ನಿಗದಿ ಮತ್ತು ಪ್ರವೇಶಕ್ಕೆ ಸಂಬಂಧಿಸಿದಂತೆ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಯು ಕಾಲೇಜಿನ ಮೂಲಭೂತ ಸೌಲಭ್ಯಗಳ ಆಧಾರದಲ್ಲಿ ಶುಲ್ಕವನ್ನು ನಿಗದಿ ಮಾಡುತ್ತದೆ. ರಾಜ್ಯದಲ್ಲಿ 10 ಸರಕಾರಿ, ಮತ್ತು 13 ಖಾಸಗಿ ವೈದ್ಯಕೀಯ ಕಾಲೇಜುಗಳಿವೆ. 09 ಡೀಮ್ಡ್ ವಿ.ವಿ.ಗಳಿವೆ. 12. ಸರಕಾರಿ, 9 ಅನುದಾನಿತ, 177 ಖಾಸಗಿ ಇಂಜನಿಯರಿಂಗ್ ಕಾಲೇಜುಗಳಿವೆ. ರಾಜ್ಯದಲ್ಲಿ ಖಾಸಗಿ ಕಾಲೇಜುಗಳೇ ಹೆಚ್ಚಿರುವುದರಿಂದ ಈ ಕಾಯ್ದೆಯಿಂದಾಗಿ ವಿದ್ಯಾರ್ಥಿಗಳು ಖಾಸಗಿ ಸಂಸ್ಥೆಗಳು ನಿಗದಿ ಪಡಿಸುವ ಶುಲ್ಕವನ್ನು ಭರಿಸಬೇಕಾಗುತ್ತದೆ. ಉದಾ ಕಳೆದ ಬಾರಿ ವೈದ್ಯಕೀಯ ಖಾಸಗಿ ಕಾಲೇಜಿನ ಸರಕಾರಿ ಕೋಟಾ ಸೀಟಿಗೆ ರೂ.46 ಸಾವಿರ ಶುಲ್ಕ ಪಡೆಯಲಾಗುತ್ತಿತ್ತು. ಆದರೆ ಈ ಕಾಯ್ದೆಯಿಂದಾಗಿ ಖಾಸಗಿ ಕಾಲೇಜುಗಳು 1ರಿಂದ 2 ಲಕ್ಷ ರೂ.ಗಳನ್ನು ನಿಗದಿ ಮಾಡುವ ಸಾಧ್ಯತೆಗಳಿವೆ. ಈ ಕಾಯ್ದೆಯು ಖಾಸಗಿ ಕಾಲೇಜುಗಳನ್ನು ನಿಯಂತ್ರಿಸುವ ಬದಲು ವ್ಯಾಪಕ ಹಣ ವಸೂಲಿ ಮಾಡಿಕೊಳ್ಳಲು ಅವಕಾಶ ನೀಡುತ್ತಿದೆ. ಈಗಿರುವ ಸರಕಾರಿ ಸಿಇಟಿ ಪ್ರವೇಶ ಪರೀಕ್ಷೆಯಿಂದ ಒಂದಿಷ್ಟು ಬಡ–ದಲಿತ–ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುತಿದೆ. ಸರಕಾರಿ ಸಿಇಟಿ ವ್ಯವಸ್ಥೆಯನ್ನೇ ನಾಶ ಮಾಡುವ ಈ ಕಾಯ್ದೆ ಖಾಸಗಿ ಕಾಲೇಜುಗಳಿಗೆ ಪರೀಕ್ಷೆ ಹೆಸರಲ್ಲಿ ಅನೇಕ ಅಕ್ರಮಗಳಿಗೆ ಅವಕಾಶ ಕಲ್ಪಿಸಲಿದೆ.

"ಈ ಕಾಯ್ದೆಯಲ್ಲಿ ಯಾವುದೇ ತಪ್ಪುಗಳಿಲ್ಲ, ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಲಿದೆ" ಎಂದು ವೈದ್ಯಕೀಯ ಶಿಕ್ಷಣ ಸಚಿವರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಮುಂದಿನ ವರ್ಷದಿಂದ 6 ಸರಕಾರಿ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸುತೇವೆ. ಅದ–ರಿಂದ 900 ಸೀಟುಗಳು ಹೆಚ್ಚಳವಾಗುತ್ತವೆ. ಹೀಗಾಗಿ ಸೀಟುಗಳು ಖೋತಾ ಆಗಲಿವೆ ಎಂದು ಭಯಪಡುವ ಅವಶ್ಯಕತೆ ಇಲ್ಲ" ಎಂದು ಹೇಳಿಕೆ ನೀಡುತ್ತಿದ್ದಾರೆ. ಸರ್ಕಾರ ಹೊಸ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸುವುದಾದರೆ ಅದು ಸ್ವಾಗತಾರ್ಹವಾದ ವಿಷಯ. ಆದರೆ ಪ್ರಸಕ್ತ ಬಿಕ್ಕಟ್ಟಿನ ಎಲ್ಲ ಸಮಸ್ಯೆಗಳಿಗೆ ಇದಿಷ್ಟೇ ಕ್ರಮ ಸಾಕೇ? ಇದಿಷ್ಟ ಕ್ರಮ ಪರಿಹಾರ ಒದಗಿಸುತದೆಯೇ ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ, ವೃತ್ತಿ ಶಿಕ್ಷಣವನ್ನು ಖಾಸಗಿಯವರಿಗೆ ಮಾರಾಟ ಮಾಡಲು ಮತ್ತು ಕಾಮೇಡ್–ಕೆ ತಾಳಕ್ಕೆ ತಕ್ಕಂತೆ ಸರಕಾರ ಕುಣಿಯುತ್ತಿದೆ.

ಕಾಲೇಜುವಾರು ಶುಲ್ಕ ನಿಗದಿ ಮಾಡಲು ಹೊರಟಿರುವುದು ಸಾಮಾಜಿಕ, ಶೈಕ್ಷಣಿಕ ಅಸಮಾನತೆಗೆ ದಾರಿ ಮಾಡಿಕೊಡಲಿದೆ. ಸಾಮಾಜಿಕ ನ್ಯಾಯ ಎತ್ತಿ ಹಿಡಿಯುವುದಾಗಿ ಹೇಳುತ್ತಿರುವ ಸಿದ್ದರಾಮಯ್ಯನವರ ಸರ್ಕಾರ ವೃತ್ತಿ ಶಿಕ್ಷಣವನ್ನು ಉಳ್ಳವರಿಗೆ ಮಾತ್ರ ಮೀಸಲು ಮಾಡಲು ಮುಂದಾಗಿರುವುದು ಶಿಕ್ಷಣ ವಿರೋಧಿ ನೀತಿಯಾಗಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಖಂಡಿಸಿದೆ. ಈಗಿರುವ ಶುಲ್ಕಗಳನ್ನು ಭರಿಸಲಾಗದೆ ವಿದ್ಯಾರ್ಥಿಗಳು ಹಿಂದೇಟು ಹಾಕುತ್ತಿದ್ದಾರೆ. ಪ್ರಸಕ್ತ ವರ್ಷದಲ್ಲಿ ಸುಮಾರು 22 ಸಾವಿರ ಇಂಜನಿಯರಿಂಗ್–ಮೆಡಿಕಲ್ ಸೀಟುಗಳು ಖಾಲಿ ಬಿದ್ದಿವೆ. ಈಗ ಮತ್ತೆ ಶುಲ್ಕ ಏರಿಸಲು ಹೊರಟಿರುವ ಸರ್ಕಾರದ ನಿರ್ಧಾರ ಭಾರೀ ಅಪಾಯಕಾರಿಯಾಗಿದೆ. ಸರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಒತ್ತಡ–ಕ್ಕೆ ಮಣಿಯದೆ ವಿದ್ಯಾರ್ಥಿಗಳ ಹಿತ ಕಾಪಾಡಲು ಮುಂದಾಗಬೇಕೆಂದು ಎಸ್‌ಎಫ್‌ಐ ಆಗ್ರಹಿಸಿದೆ. ಸರ್ಕಾರ ಈ ಕೂಡಲೇ ಕೆಳಗಿನ ಬೇಡಿಕೆಗಳನ್ನು ಈಡೇರಿಸದಿದ್ದರೆ ತೀವ್ರ ಸ್ವರೂಪದ ಚಳುವಳಿಗೆ ಇಳಿಯಬೇಕಾಗುತ್ತದೆ ಎಂದು ಎಸ್‌ಎಫ್‌ಐ ಪ್ರತಿಭಟನೆ ಮೂಲಕ ಎಚ್ಚರಿಸಿದೆ.

ಸಿಇಟಿ ಮೂಲಕವೇ ವೃತ್ತಿ ಶಿಕ್ಷಣ ಸೀಟು ಹಂಚಿಕೆ ಹಾಗೂ ಶುಲ್ಕ ನಿಗದಿ ಮಾಡಲು ಆಗ್ರಹಿಸಿ ಎಸ್‌ಎಫ್‌ಐ ಪ್ರತಿಭಟನೆ– ಸಚಿವರ

ಪುಟ 14 ಕ್ಕೆ


ಸಿಇಟಿ ರದ್ದು ತೀರ್ಮಾನ ತಾತ್ಕಾಲಿಕ ವಾಪಸ್ ಒಂದು ಹಂತದ ಗೆಲುವು

ರಾಜ್ಯದಾದ್ಯಂತ ನಡೆದ ವಿದ್ಯಾರ್ಥಿಗಳ ಪ್ರತಿಭಟನೆಗೆ ಮಣಿದಿರುವ ಸರ್ಕಾರ ಮುಂದಿನ 2014–15 ರ ಶೈಕ್ಷಣಿಕ ವರ್ಷಕ್ಕೆ ಸಿಇಟಿ ರದ್ದು ತೀರ್ಮಾನವನ್ನು ಅನ್ವಯಿಸುವುದಿಲ್ಲ ಎಂದು ತೀರ್ಮಾನಿಸಿದೆ. ಈ ನಿರ್ಧಾರವನ್ನು ಸ್ವಾಗತಿಸಿರುವ ಎಸ್‌ಎಫ್‌ಐ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸುವ ನಿಟ್ಟಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸಾಮಾಜಿಕ ನಿಯಂತ್ರಣಕ್ಕೆ ಪೂರಕವಾಗಿ ಸೂಕ್ತ ಕೇಂದ್ರೀಯ ಶಾಸನ ತರುವ ಮತ್ತು ಟಿಎಂಎ ಪೈ ಪ್ರಕರಣದ ಸುಪ್ರಿಂ ಕೋರ್ಟ್ ತೀರ್ಪನ್ನು ಶೂನ್ಯಗೊಳಿಸುವ ಕ್ರಮಗಳಿಗೆ ಒತ್ತಾಯಿಸಿ ಹೋರಾಟ ಮುಂದುವರಿಸುವುದಾಗಿ ತಿಳಿಸಿದೆ.



ಜಗತ್ತನ್ನು ಇಪ್ಪತ್ತೊಂದನೇ ಶತಮಾನಕ್ಕೆ ಒಯ್ಯುವ ಪ್ರಕ್ರಿಯೆಯನ್ನು ನಿರ್ವಹಿಸಿದವರಲ್ಲಿ ಅಗ್ರಗಣ್ಯನಾಯಕ ಮಂಡೇಲ – ಸೀತಾರಾಮ ಯೆಚೂರಿ

ಒಂದು. ಎರಡು. ಮೂರು. ನಾಲ್ಕು.. ಐದು....ಸಾವಿರ.... ಹತ್ತು ಸಾವಿರ..... ಹೌದು ಹತ್ತು ಸಾವಿರಕ್ಕೂ ಹೆಚ್ಚು ನೀರವ ಶೀತಲ ರಾತ್ರಿಗಳನ್ನು ಆ ಮನುಷ್ಯ ಆ ನೀಳ ಬೋಳು ಜೈಲು ಗೋಡೆಗಳ ನಡುವೆ ಏಕಾಂಗಿಯಾಗಿ ಕಳೆದ. ಇದರಲ್ಲಿ ಹಗಲು ಸುಮಾರು ಹದಿನೆಂಟು



ವರ್ಷಗಳ ಕಾಲ ಸುಣ್ಣದಕಲ್ಲುಗಣಿಯಲ್ಲಿ ಕಲ್ಲು ಚಚ್ಚುವ ಕಠಿಣ ದುಡಿಮೆಯ ಶಿಕ್ಷೆ: 1990 ರವರೆಗೆ ಆತ ಅಮೆರಿಕ ದೇಶ ಗುರುತಿಸಿಟ್ಟ 'ಭಯೋತ್ಪಾದಕ'ರ ಪಟ್ಟಿಯಲ್ಲಿದ್ದ ಅಗ್ರಗಣ್ಯನಾಗಿದ್ದ. ಆತ ಇತ್ತೀಚೆಗೆ ಅಂದರೆ ಡಿಸೆಂಬರ್ 5 2013 ರ ರಾತ್ರಿ ತನ್ನ ತೊಂಭತ್ತೈದನೇ ವಯಸ್ಸಿನಲ್ಲಿ ತೀರಿಹೋದ. ರೋಲಿಹ್ಲಾಹ್ಲಾ ಮಂಡೇಲ

ಆತನ ಮೂಲ ಹೆಸರು ರೋಲಿಹ್ಲಾಹ್ಲಾ ಮಂಡೇಲ. ರೋಲಿಹ್ಲಾಹ್ಲಾ ಅಂದರೆ ತಂಟೆಕೋರ ಅಂತ ಅರ್ಥವಂತೆ. ಆತ ದಕ್ಷಿಣ ಆಫ್ರಿಕಾದ ಬುಡಕಟ್ಟಿಗೆ ಸೇರಿದ ರಾಜಕುಟುಂಬದ ಅಂದರೆ ಬುಡಕಟ್ಟು ಮುಖ್ಯಸ್ಥರ ಕುಟುಂಬದ ಮಗನಾಗಿದ್ದ. ಸಾಂಪ್ರದಾಯಿಕ ಕ್ರಮದಂತೆ ನಡೆದುಕೊಂಡು ಹೋಗಿದ್ದರೆ ಆತ ಆ ಬುಡಕಟ್ಟಿನ ಮುಖ್ಯಸ್ಥನಾಗಿ ಜೀವ ಕಳೆಯುತ್ತಿದ್ದ.

ಮಹಾತ್ಮ ಗಾಂಧಿ ಮತ್ತು ಮಂಡೇಲ

ಗಾಂಧೀಜಿಯವರು ದಕ್ಷಿಣ ಆಫ್ರಿಕಾದ ಪ್ರಥಮ ರಾಜಕೀಯ ಸಂಘಟನೆ ಸ್ಥಾಪಿಸಿದ್ದು, ಅವರ ವರ್ಣಬೇಧ ನೀತಿಯ ವಿರುದ್ಧದ ಹೋರಾಟ ಜನಜನಿತ. ಮಂಡೇಲ ಅವರ ಬಗೆಗೆ ಮಾತನಾಡುವ ಬಹಳಷ್ಟು ಜನ ಮಹಾತ್ಮ ಗಾಂಧಿಯನ್ನು ನೆನಸಿಕೊಳ್ಳುತ್ತಿದ್ದಾರೆ. ಅದರಲ್ಲಿ ತಪ್ಪೇನು ಇಲ್ಲ. ನೆನಸಿಕೊಳ್ಳಬಹುದು. ಆದರೆ ಆತ ಗಾಂಧಿವಾದಿಯೇ ? ಮಹಾತ್ಮ ಗಾಂಧೀಜಿಯವರು ಪ್ರತಿಪಾದಿಸಿದ ಅಹಿಂಸಾವಾದಿಯೇ ? ಕ್ರಾಂತಿಕಾರಿಯೇ ? ಅಥವಾ ತಾವು ರಾಜಿರಹಿತ ಕ್ರಾಂತಿಕಾರಿಗಳು ಎಂದು ಕರೆದುಕೊಳ್ಳುವವರು ಟೀಕಿಸುತ್ತಿರುವಂತೆ ಅತ ಮೊದಲು ಒಬ್ಬ ಕ್ರಾಂತಿಕಾರಿ, ನಂತರದ ಹಂತದಲ್ಲಿ 'ರಾಜಿವಾದಿ'ಯೇ ? ಇಂತಹ ಅನೇಕ ಪ್ರಶ್ನೆಗಳು ಈಗ ಎದ್ದಿವೆ.

'ನಾಯಿಗಳು ಮತ್ತು ಕರಿಯರಿಗೆ ಇಲ್ಲಿ ಪ್ರವೇಶವಿಲ್ಲ'

'ನಾಯಿಗಳು ಮತ್ತು ಕರಿಯರಿಗೆ ಇಲ್ಲಿ ಪ್ರವೇಶವಿಲ್ಲ'. ಇದು ದಕ್ಷಿಣ ಆಫ್ರಿಕಾದ ದರ್ಬಾನ್‌ನ ಸಮುದ್ರ ತೀರದಲ್ಲಿ ಹಾಕಲಾಗಿದ್ದ ಒಂದು ಬೋರ್ಡು ಹೊತ್ತಿದ್ದ ಬರಹ.

ವರ್ಣ ಬೇಧ ಎಂದರೆ ಏನೆಂದು ಪರಿಚಯಿಸಲು ಇಷ್ಟು ಸಾಕು ಅನಿಸುತ್ತದೆ. ಇನ್ನು ಯುರೋಪಿನಿಂದ ವಲಸೆ ಬಂದು ಸಮೃದ್ಧ ನಿಸರ್ಗ ಸಂಪತ್ತು, ಕರಿಯರ ಶ್ರಮವನ್ನು ಕೊಳ್ಳೆ ಹೊಡೆಯುವ ಡಚ್ಚರು, ನಂತರ ಬಂದ ಬ್ರೀಟಿಷ್ ಮುಂತಾದ ಯೂರೋಪಿನ ವಸಾಹತುಶಾಹಿ ಬಿಳಿಯರ ದರ್ಪ ದಬ್ಬಾಳಿಕೆ ಕುರಿತು ಹೆಚ್ಚಿನ ವಿವರಣೆ ಬೇಕಿಲ್ಲ.

ಅಪಮಾನ ಮತ್ತು ನಿರ್ದಯ ಶೋಷಣೆ-ಕ್ರೌರ್ಯದ ವಿರುದ್ಧ ನಿಂತ ತಪ್ಪಿಗೆ, ಚಳುವಳಿ ರೂಪಿಸಿದ ತಪ್ಪಿಗೆ ಆತ ಬರೋಬ್ಬರಿ 27 ವರ್ಷಗಳನ್ನು ಬಂಧಿಖಾನೆಯೊಳಗೆ ಕಳೆಯಬೇಕಾಯಿತು. ಒಂದರ ಮೇಲೊಂದು ಶಿಶಿರಗಳು. ಆದ-ರೆ ಆತನ ಮನಸ್ಸಿನಲ್ಲಿ ಸದಾ ನಿರೀಕ್ಷೆಗಳ ಹಸಿರು ವಸಂತ. ಕುಗ್ಗಲಿಲ್ಲ. ಜಗ್ಗಲಿಲ್ಲ. ಹೋರಾಟದ ಕೆಚ್ಚು ಬಿಟ್ಟುಕೊಡಲಿಲ್ಲ.

ಕಪ್ಪು ಚರ್ಮದವರು ಮನುಷ್ಯರಲ್ಲ. ಅವರು ಬಿಳಿಯರಿಗೆ ಸಮಾನರಲ್ಲ. ಅವರಿಗೆ ಓಟಿನ ಅಧಿಕಾರವಿಲ್ಲ. ಅವರು ತಮ್ಮ ಬಂಟುಸ್ಥಾನ ಎನ್ನುವ ಪ್ರದೇಶ ಬಿಟ್ಟು ಬಿಳಿಯರ ವಾಸಸ್ಥಾನಗಳಿಗೆ ಬರುವಂತಿಲ್ಲ. ಬಂದರೆ ಬಿಳಿಯರ ಸಲುವಾಗಿ ಅವರ ಸೇವೆಗಾಗಿ ಅವರ ಅಗತ್ಯಗಳಿಗಾಗಿ ಬರಬೇಕು. ಬರುವವರಿಗೆ ಗುರುತಿನ ಪತ್ರ ಇರಲೇ ಬೇಕು. ಕೇಳಿದಾಗ ತೋರಿಸಬೇಕು. ಹೆಚ್ಚು ಮಾತನಾಡಿದರೆ ಬಿಳಿಯರ ಬಂದೂಕು ಸಿಡಿಸುವ ಗುಂಡುಗಳಿಗೆ ಸಿಲುಕಿ ಛಿದ್ರವಾದಲು ಸಿದ್ದವಾಗಬೇಕು. ಕಡಿಮೆ ಎಂದರೆ ಬಾಯಿಮುಚ್ಚಿಕೊಂಡು ಬಂಧಿಖಾನೆಯ ದಾರಿ ಹಿಡಿಯಬೇಕು.

ಜಗದುದ್ದ ಶೋಕ

ಈ ಮನುಷ್ಯ ತೀರಿಕೊಂಡಾಗ ಬಂದು ನೆರೆದ ಗಣ್ಯರಲ್ಲಿ ಯಾರ್ಯಾರು ಇದ್ದರು. ಒಂದು ಹಂತದಲ್ಲಿ 53 ದೇಶಗಳ ಸರ್ಕಾರದ ಮುಖ್ಯಸ್ಥರು, ಒಬ್ಬ ರಾಜ ಮತ್ತು ರಾಣಿ ಇದ್ದರು ಎಂದು ಘೋಷಿಸಲಾಗಿತ್ತಂತೆ. ಆಗ ಗಣ್ಯರು ಇನ್ನೂ ಬರುತ್ತಲೇ ಇದ್ದರು. ಜಗತ್ತಿನ ಇತ್ತೀಚಿನ ಇತಿಹಾಸದಲ್ಲಿ ಎಂದೂ ಇಲ್ಲದ ಜನ ಸಾಗರ-ಗಣ್ಯರ ಮಹಾಪೂರ ಅನ್ನುತ್ತಾರೆ ಸೀತಾರಾಮ ಯೆಚೂರಿ. ಮಂಡೇಲ ಅವರಿಗೆ ಅಂತಿಮ ಗೌರವ ಸಲ್ಲಿಸಲು ಭಾರತದಿಂದ ತೆರಳಿದ ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರ ನೇತೃತ್ವದ ಐದು ಜನರ ನಿಯೋಗದಲ್ಲಿ ಸಿಪಿಐ(ಎಂ) ನಾಯಕ ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಮ್ ಯೆಚೂರಿಯವರೂ ಒಬ್ಬರು.


ಸೀತಾರಾಮ ಯೆಚೂರಿಯವರು ಹಲವಾರು ಸಂದರ್ಭಗಳಲ್ಲಿ ನೆಲ್ಸನ್ ಮಂಡೇಲಾ ಅವರನ್ನು ಖುದ್ದು ಕಂಡವರು. ಚಳುವಳಿಯ ಸವಾಲುಗಳು ಅದರ ಒಳಸುಳಿಗಳು- ಕಾರ್ಯತಂತ್ರಗಳು ಮುಂತಾದವುಗಳ ಕುರಿತು ಅವರೊಂದಿಗೆ ಮುಖಾಮುಖಿ ಚರ್ಚಿಸಿದವರು. ಕಾಲ ದೇಶಗಳಿಗೆ ತಕ್ಕಂತೆ ಭಿನ್ನ ಭಿನ್ನವಾಗಿರುವ ಸಮಾಜ ಬದಲಾವಣೆಯ ಚಳುವಳಿಯ ಸಂಕೀರ್ಣತೆಗಳ ಆಳವಾದ ಪರಿಚಯ ಉಳ್ಳವರು.

ಅವರು ಮಂಡೆಲಾ ಅವರ ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ತಾವು ಕಂಡದ್ದನ್ನು ಮತ್ತು ಸಂಕ್ರಮಣಾವಸ್ಥೆಯಲ್ಲಿರುವ ದಕ್ಷಿಣ ಆಫ್ರಿಕಾದ ಸಮಾಜದ ಮತ್ತು ಚಳುವಳಿಯ ತಲ್ಲಣಗಳನ್ನು ತಮ್ಮ ಇತ್ತೀಚಿನ ಲೇಖನದಲ್ಲಿ ವಿವರಿಸಿದ್ದಾರೆ. ಅದರ ಮುಖ್ಯಸಾರ ಹೀಗಿದೆ.

ಇಪ್ಪತ್ತೊಂದನೆ ಶತಮಾನಕ್ಕೆ ಜಗತ್ತನ್ನು ಕೊಂಡೊಯ್ದ ಪ್ರಕ್ರಿಯೆಯನ್ನು ನಿರ್ವಹಿಸಿದ ಅಗ್ರಗಣ್ಯ ನೇತಾರ.

ಮಂಡೇಲ ಅವರ ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ಜಗತ್ತಿನಾದ್ಯಂತ ಬಂಡವಾಳಶಾಹಿ ಮಾಧ್ಯಮದಲ್ಲಿ ಹೆಚ್ಚು ಸುದ್ದಿಯಾಗಿದ್ದು ಅಮೆರಿಕದ 'ದೊರೆ' ಒಬಾಮ, ಡೆನ್ಮಾರ್ಕ್ 'ದೊರೆ' ... ಮುಂತಾದವರ ಶ್ರಧ್ಧಾಂಜಲಿ ಸಭೆಯ ಗಂಭೀರತೆ ಮರೆತ ತಲೆಹರಟೆ ಕೇಕೆಗಳು. ಮತ್ತು ಒಬಾಮ, ಕ್ಯಾಮರೂನ್ ಮುಂತಾದ ಗಣ್ಯರಿಗೆ ದೊರೆತ ಸ್ವಾಗತ ಇತ್ಯಾದಿಗಳು.

ಆರಂಭದಲ್ಲಿ ಸ್ವಲ್ಪ ಸ್ವಾಗತ ಬಿಟ್ಟರೆ ಜೋಹನ್ಸ್‌ಬರ್ಗ್‌ನ ಆ ಬೃಹತ್ ಸ್ಟೇಡಿಯಂನಲ್ಲಿ ಸೇರಿದ್ದ ಜನಸ್ತೋಮ ತನ್ನ ದೇಶದಲ್ಲಿ ಕ್ರಾಂತಿಕಾರಿ ಭೂ ಸುಧಾರಣೆಯ ಮೂಲಕ ಬಿಳಿಯ ಮಾಲಿಕರ ವಶದಲ್ಲಿದ್ದ ಲಕ್ಷಾಂತರ ಎಕರೆ ಭೂಮಿಯನ್ನು ಭೂಹೀನ ಕರಿಯರಿಗೆ ಹಂಚಿಕೆ ಮಾಡಿದ ಜಿಂಬಾಬ್ವೆ ಅಧ್ಯಕ್ಷ ರಾಬರ್ಟ್ ಮುಗಾಬೆ ಅವರ ಕಡೆ ಕೈತೋರಿ ಅವರ ಪರವಾಗಿ ಬಾರಿ ಹರ್ಷೋದ್ಗಾರ ಮಾಡಿದರಂತೆ. ಕ್ಯಾಬಾ ದೇಶದ ನಾಯಕ ರೌಲ್ ಕ್ಯಾಸ್ಟ್ರೋ ಅವರಿಗೂ ಅದೇ ರೀತಿಯ ಸ್ಪಂದನೆ. ಆದರೆ ಅದೇ ಜನಸಮೂಹ ಒಬಾಮ, ಅಮೆರಿಕಾದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್ ಮುಂತಾದವರ ಕಡೆ ಕೈ ತೋರಿ ಹೇ ಹೇ ಅಂತ ಗೇಲಿ ಮಾಡುತ್ತಿತ್ತಂತೆ. ಬಂಡವಾಳಗಾರ ಮಾಧ್ಯಮಗಳಿಗೆ ಇವೆಲ್ಲಾ ಬೇಕಿಲ್ಲದ ವಿಷಯಗಳು. ಇಷ್ಟು ಮಾತ್ರವಲ್ಲ ಮಂಡೇಲ ಅವರ ಬಗೆಗೆ ಇನ್ನೂ ಎಷ್ಟೋ ವಿಷಯಗಳು ಚರ್ಚೆಗೆ ಮತ್ತು ಪ್ರಚಾರದ ಮುಂಚೂಣಿಗೆ ಬರದಂತೆ ಅವರು ನೋಡಿಕೊಳ್ಳಲು ಹವಣಿಸಿದರು.



ಅವರು ಮರೆಮಾಚ ಬಯಸುವುದೇನು ?

ಸಂಗಾತಿಗಳಿಂದ ಜನರಿಂದ ಪ್ರೀತಿ ಪೂರ್ವಕವಾಗಿ 'ಮಬಿದಾ' ಎಂದು ಕರೆಸಿಕೊಳ್ಳುತ್ತಿದ್ದ ಮಂಡೇಲ ಖ್ಯಾತಿಗೆ ಬಂದದ್ದು 'ರಿವೋನಿಯಾ' ಮೊಕದ್ದಮೆಯಲ್ಲಿ. ಈ ಪ್ರಕರಣದಲ್ಲಿ ಮಂಡೇಲ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. 1962 ರಲ್ಲಿ ಮಂಡೇಲ ಅವರನ್ನು ಬಂಧಿಸಲು ಕಾರಣವಾದ ಅವರ ಮೇಲಿನ ಒಂದು ಪ್ರಮುಖ ಆಪಾದನೆ ಎಂದರೆ ಅವರು ಕಮ್ಯೂನಿಸ್ಟರು ಎಂಬುದು. ಮಂಡೇಲ ದಕ್ಷಿಣ ಆಫ್ರಿಕಾ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿದ್ದರು. ಮತ್ತು ಅವರು ವರ್ಣಬೇಧದ ವಿರುದ್ಧ ಸೆಣಸುವ 'ಎಎನ್‌ಸಿ'ಯ ಶಸಸ್ತ್ರ ದಳ ಮುಖ್ಯಸ್ಥರಾಗಿದ್ದರು.

ಮಂಡೇಲ ಅವರು ಈ ಪ್ರಕರಣದ ವಿಚಾರಣೆಯ ಕೊನೆಯ ಹಂತದಲ್ಲಿ ನೀಡಿದ ಹೇಳಿಕೆ ಅವರ ಕ್ರಾಂತಿಕಾರಿ ವ್ಯಕ್ತಿತ್ವ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ.

"ನನ್ನ ಜೀವಿತಾವಧಿಯಲ್ಲಿ ನಾನು ನನ್ನನ್ನು ಆಫ್ರಿಕಾದ ಜನತೆಯ ಹೋರಾಟಕ್ಕಾಗಿ ಅರ್ಪಿಸಿಕೊಂಡಿದ್ದೇನೆ. ನಾನು ಬಿಳಿ
ದಬ್ಬಾಳಿಕೆಯ ವಿರುದ್ಧ ಹೋರಾಡಿದ್ದೇನೆ. ಮ
ನಾನು ಕರಿಯರ ದಬ್ಬಾಳಿಕೆಯ ವಿರುದ್ಧ
ಹೋರಾಡಿದ್ದೇನೆ. ಕರಿಯರು ಬಿಳಿಯರು ಎಲ್ಲ
ಸೌಹಾರ್ದತೆ ಮತ್ತು ಸಮಾನ ಅವಕಾಶಗಳೊಂ
ಬದುಕುವ ಪ್ರಜಾಪ್ರಭುತ್ವ ಮತ್ತು ಸ್ವತ
ಸಮಾಜದ ಕನಸನ್ನು ಎತ್ತಿಹಿಡಿದಿದ್ದೇನೆ. ಇಂ
ಕನಸಿನ ಸಾಕಾರಕ್ಕಾಗಿ ನಾನು ಬದುಕಿದ್ದೇನೆ ಮ
ಇಂತಹ ಉದ್ದೇಶಕ್ಕಾಗಿ ನಾನು ಸಾಯ
ಸಿದ್ದನಿದ್ದೇನೆ."

ಬಿಳಿಯ ದುಷ್ಟ ಸರ್ಕಾರದ ಎಣಿಕೆ ತಪ್ಪಾಗಿ
ಜೈಲಿನ ಒಳಗಿದ್ದೂ ಮಂಡೇಲ ಹೊರಗೆ ನಡೆಯ
ಚಳುವಳಿಗಳ ಪ್ರೇರಣೆ-ಸ್ಪೂರ್ತಿಯಾಗಿದ್ದ
ಕಮ್ಯೂನಿಸ್ಟ್ ಪಕ್ಷ-ಎಎನ್‌ಸಿ-ಕಾರ್ಮಿ
ಸಂಘಟನೆ 'ಕೊಸೊಟೋ'ಗಳ ತ್ರಿಪಕ್ಷೀಯ ಮ
ಚಳುವಳಿಯನ್ನು ಮುನ್ನಡೆಸಿ ಆಳುವರಿಗೆ
ತಿರುಗೇಟು ನೀಡುತ್ತಿದ್ದವು. ಇಂತಹ ತಿರುಗೇಟು
ಫಲವಾಗಿಯೇ ಮಂಡೇಲ ಅವರು ರೊ
ದ್ವೀಪದ ಭಯಾನಕ ಜೈಲಿನಲ್ಲಿ ಕಾಲಕಳೆಯು
ದೀರ್ಘ ಅವಧಿಯಲ್ಲಿ ಸರ್ಕಾರದ ಕಡೆಯಿಂ
ಒಟ್ಟು ಆರು ಬಾರಿ ಅವರ ಮುಂದೆ ಬಿಡುಗಡೆ
'ಕೊಡುಗೆ'ಯನ್ನು ಒಡ್ಡಲಾಗಿತ್ತು. ಮಂಡೇಲಾ
ಕೊಡುಗೆಯನ್ನು ಕೈಗೆ ಎತ್ತಿಕೊಳ್ಳಲಿಲ್ಲ. ಏಕೆಂ
ಅದು ಬೇಷರತ್ ಬಿಡುಗಡೆ ಆಗಿರಲಿಲ್ಲ. ಅವೆ
'ಷರತ್ತುಬದ್ಧ' ಬಿಡುಗಡೆಗಳಾಗಿದ್ದವು. ಮಂಡೆ
ರಾಜಕೀಯ ಹೋರಾಟ ಕೈಬಿಟ್ಟು ಟ್ರಾನ್ಸ್‌ಕೇ
ಬಂಟುಸ್ತಾನದಲ್ಲಿ ವಾಸಿಸಬೇಕು.

ಕೊನೆಯ ಬಾರಿ 'ಬಿಡುಗಡೆ
ಯ ಕೊಡುಗೆ' ಅವರ ಮುಂ
ಬಂದಾಗ ಅವರು ಹೇಳಿದರು. "ನ
ಜನರ ಸಂಘಟನೆಯನ್ನು ನಿಷೇ
ಮಾಡಿರುವಾಗ ನೀವು ನನ
ಯಾವ ಸ್ವಾತಂತ್ರ್ಯವನ್ನು ನೀಡುವಿ
? ನನ್ನನ್ನು ಹಳೆಯ ಅಪರಾಧಕ
ಮತ್ತೆ ಬಂಧಿಸುವ ಸಂಭವವಿರುವಾ
ನೀವು ನನಗೆ ಯಾವ ಸ್ವಾತಂತ್ರ್ಯವ
ನೀಡುವಿರಿ? ನನ್ನ ಹೆಂಡ
ಗಡಿಪಾರಾಗಿ 'ಬ್ಯಾಂಡಿಪೋರ್ಥ'ನ
ದಿಗ್ಬಂಧನದಲ್ಲಿರುವಾಗ ನೀವು
ಯಾವ ಸ್ವಾತಂತ್ರ್ಯವನ್ನು ನೀಡು
? ನಾನು ನಗರದಲ್ಲಿ ವಾ
ಮಾಡಬೇಕಾದರೆ ನಿಮ್ಮ ಅನುಮ
ಪಡೆದುಕೊಳ್ಳಬೇಕಿರುವಾಗ ನೀವು ನನ
ಯಾವ ಸ್ವಾತಂತ್ರ್ಯವನ್ನು ನೀಡುವಿರಿ. ?..... ನಾ
ಕೆಲಸ ಕೇಳಲು ಗುರುತಿನ ಚೀಟಿಗೆ ನಿಮ್ಮ ಸ್ಟಾಂ
ಹಾಕಿಸಿಕೊಳ್ಳಬೇಕಾದರೆ ನೀವು ನನಗೆ ಯಾ
ಸ್ವಾತಂತ್ರ್ಯವನ್ನು ನೀಡುವಿರಿ ? ನೀವು ನನ್ನ ದಕ್ಷಿ
ಆಫ್ರಿಕಾದ ನಾಗರೀಕತ್ವವನ್ನೇ ಗೌರವಿಸದಿರುವಾ
ನನಗೆ ಯಾವ ಸ್ವಾತಂತ್ರ್ಯವನ್ನು ನೀಡುತ್ತೀ
? ಒಬ್ಬ ಸ್ವತಂತ್ರ ವ್ಯಕ್ತಿ ಮಾತ್ರ ಸಂಧಾನ
ಮಾತುಕತೆ ನಡೆಸಬಲ್ಲ. ನಾನು ಮತ್ತು ನ
ಜನತೆ ಬಂಧಿಗಳಾಗಿರುವ ಈ ಹೊತ್ತಿನಲ್ಲಿ ನಾ
ಯಾವ ಮುಚ್ಚಳಿಕೆಯನ್ನೂ ಬರೆದುಕೊಡಲಾ
ಬರೆದುಕೊಡುವುದಿಲ್ಲ.. .."

ಪರಸ್ಪರ ಅವರ ಗುರುತೇ ಸಿಗುವುದೇ ಕಷ್ಟವಾಗಿ

ಎಎನ್‌ಸಿ ಪಕ್ಷದ 48 ನೇ ಮಹಾಧಿವೇಶ
ಜುಲೈ 1991 ರಲ್ಲಿ ನಡೆದಾಗ ಸಿಪಿಐ(ಎ
ಪಕ್ಷದ ನೇತಾರ ಸೀತಾರಾಮ ಯೆಚೂರಿ
ಆ ಸಂದರ್ಭಕ್ಕೆ ಸಾಕ್ಷಿಯಾಗಿದ್ದರು. 19
ರಲ್ಲಿ ಎಎನ್‌ಸಿಯನ್ನು ನಿಷೇಧಿಸಿದ ನಂತ

ಜನಶಕ್ತಿ
ಕನ್ನಡ ವಾರಪತ್ರಿಕೆ

ದು ಸ್ವತಂತ್ರ ಆಫ್ರಿಕಾದಲ್ಲಿ ನಡೆದ ಮೊದಲ ಧಿವೇಶನವಾಗಿತ್ತು. ಸುಮಾರು ಮೂವತ್ತು ರ್ಷಗಳ ಸುದೀರ್ಘ ಅವಧಿಯ ನಂತರ ಳುವಳಿಯ ಸಂಗಾತಿಗಳು ಒಂದೆಡೆ ೇರಿದಾಗ ಎಷ್ಟೋ ಜನ ಒಬ್ಬರನ್ನು ಒಬ್ಬರು ುರುತಿಸುವುದಕ್ಕೂ ಕಷ್ಟಪಡಬೇಕಾಗಿತ್ತಂತೆ. ಷ್ಟೋ ಜನ ಬಿಳಿಯರ ಜೈಲಿನಲ್ಲೇ ಪ್ರಾಣವನ್ನು ದು ಕೊಂಡಿದ್ದರು. ಉಳಿದವರು ವಯಸ್ಸಾಗಿ ುರುತು ಸಿಗದಂತಾಗಿದ್ದರು.

ಶಸ್ತ್ರ ಹೋರಾಟ ಕೈಬಿಟ್ಟಿಲ್ಲ

ಮಂಡೇಲ ಮಹಾಧಿವೇಶನವನ್ನು ುದ್ದೇಶಿಸಿದರಂತೆ. "ನಾವು ಸಶಸ್ತ್ರ ಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ್ದೇವೆ. ದರೆ ಸಶಸ್ತ್ರ ಹೋರಾಟವನ್ನೇ ಕೈಬಿಟ್ಟಿಲ್ಲ. ಜಾಪ್ರಭುತ್ವ ಸಮಾಜದ ಕಡೆಗಿನ ಶಾಂತಿಯುತ ರಿವರ್ತನೆಗೆ ಕ್ರಾಂತಿವಿರೋಧಿ ಶಕ್ತಿಗಳು ಡ್ಡಿ ಮಾಡಿದಲ್ಲಿ ದೇಶದ ಒಳಗಿನ ಮತ್ತು ೊರಗಿನ ಯಾವುದೇ ಶಕ್ತಿಯನ್ನು ಎದುರಿಸಲು ುಮ್‌ಖೊಂಟೋ ವಿ ಸಿಜ್ವೆ' ('ಎಎನ್‌ಸಿ'ಯ ಸಸ್ತ್ರ ಪಡೆ)ಗೆ ಶಸ್ತ್ರವನ್ನು ಎತ್ತಲು ಸದಾ ದ್ಧವಿರಬೇಕಾದ ಹೊಣೆಗಾರಿಕೆ ಇದ್ದೇ ಇದೆ."

ದಲಾದ ಜಗತ್ತು

90 ರ ದಶಕದ ಕೊನೆಗೆ ಮಂಡೇಲ ಅವರ ುಡುಗಡೆ ಸನ್ನಿಹಿತವಾಗುತ್ತಿದೆ ಎನ್ನುವ ಹೊತ್ತಿಗೆ ತ್ತೇ ಸುದೀರ್ಘವಾದ ಅಮೆರಿಕ ಮತ್ತು ೋವಿಯತ್ ರಷ್ಯಾ ನೇತೃತ್ವದ ಶೀತಲ ಸಮರವು ಾನೆಯಾಗುತ್ತಿತ್ತು. ಸಮಾಜವಾದಿ ಸೋವಿಯತ್ ಕೂಟ ದುರ್ಬಲವಾಗಿತ್ತು. ಸೋವಿಯತ್ ಕೂಟ ಕುಸಿದು ಬೀಳುವುದರೊಂದಿಗೆ ಲ್ಲೆಲ್ಲೂ ಕಮ್ಯೂನಿಸ್ಟ್ ವಿರೋಧಿ ಅಪಪ್ರಚಾರಗಳ ಡೆದಿದ್ದವು. ಇತ್ತ ನೆಲ್ಸನ್ ಮಂಡೇಲ ಅವರು ತಂತ್ರ ದಕ್ಷಿಣ ಆಫ್ರಿಕಾವನ್ನು ಮುನ್ನಡೆಸುವ ೇತಾರರಾಗುತ್ತಾರೆಂಬುದು ಖಚಿತವಾಗುತ್ತಿದ್ದಂತೆ ಂಡೇಲ ಮತ್ತು ಕಮ್ಯೂನಿಸ್ಟ್ ೇಹದ ಅರಿವಿದ್ದ ಪಾಶ್ಚಿಮಾತ್ಯ ಮ್ಯೂನಿಸ್ಟ್ ವಿರೋಧಿ ಸಾಮ್ರಾಜ್ಯಶಾಹಿ ಕ್ತಿಗಳು ಮತ್ತೆ ಮಂಡೇಲ ಅವರ ಿ ಹಿನ್ನೆಲೆ-ಒಲವುಗಳ ಕುರಿತು ಎಚ್ಚರಿಕೆ' ನೀಡಿದ್ದವು. ಈ ಕುರಿತು ಂಡೇಲ ಆ ಅಧಿವೇಶನದಲ್ಲಿ ಈ ೀತಿ ಉತ್ತರಿಸಿದರಂತೆ. "ನಮ್ಮ ತ್ರರು ಯಾರು ಎಂಬುದನ್ನು ೀರ್ಮಾನಿಸುವುದು ನಮ್ಮ ಕೆಲಸ. ಮ್ಮ ಮಿತ್ರರು ಯಾರು ಎಂದು ೀರ್ಮಾನಿಸುವುದನ್ನು ನೀವು ೂಡಿಕೊಳ್ಳಿ."

ಮ್ಯೂನಿಸ್ಟ್ ಪಕ್ಷದ ಹಾಧಿವೇಶನದಲ್ಲಿ

ಂ'ಂ ಚ'ಊ ರಿ ಂ'ಂ ವ'ರ'ಂ ಮಂಡೇಲರನ್ನು ಮತ್ತೊಮ್ಮೆ ೇಟಿ ಮಾಡಿದ್ದು ಅದೇ 1991ರ ಡಿಸೆಂಬರ್‌ನಲ್ಲಿ ನಡೆದ ದಕ್ಷಿಣ ಆಫ್ರಿಕಾ ಕಮ್ಯೂನಿಸ್ಟ್ ಕ್ಷ(ಎಸ್‌ಎಸಿಪಿ)ದ ಮಹಾಧಿವೇಶನದಲ್ಲಿ. ಎಎನ್‌ಸಿ'ಯ ಶಸಸ್ತ್ರ ಪಡೆ 'ಉಮ್‌ಖೊಂಟೋ ಿ ಸಿಜ್ವೆ'ಗೆ ಮಂಡೇಲರ ನಂತರ ಮುಖ್ಯಸ್ಥರಾಗಿದ್ದ ಸ್ ಹನಿ(ಬಣ್ಣದಿಂದ ಬಿಳಿಯ ವ್ಯಕ್ತಿ) ಆ ಧಿವೇಶನದಲ್ಲಿ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಾರ್ಯದರ್ಶಿಯಾಗಿ ಆಯ್ಕೆಯಾದರು. ಆ ಂತರ ಕ್ರಿಸ್ ಹನಿಯವರನ್ನು ವರ್ಣಭೇದ ೀತಿಯ ಪ್ರತಿಪಾದಕರು ಕ್ರೂರವಾಗಿ ಕೊಂದು ಾಕಿದರು ಎನ್ನುವುದು ಈಗ ಇತಿಹಾಸ. ಆಫ್ರಿಕಾ ಖಂಡದಲ್ಲಿ ಯಾವುದೇ ಕಮ್ಯೂನಿಸ್ಟ್ ಮುಖಂಡ ರಾಷ್ಟ್ರೀಯ ವಿಮೋಚನಾ ಹೋರಾಟದ ೇತಾರನಾಗಿ ಮೂಡಿಬಂದರೆ ಅವರ ಗ್ಗೆಯ ಹತ್ಯೆ ಮಾಡಿ ಹೊಸಕಿ ಹಾಕುವುದು ಆಫ್ರಿಕಾ ಖಂಡದಲ್ಲಿ ನಾನಾ ದೇಶಗಳನ್ನು ವಸಾಹತುಗಳನ್ನಾಗಿ ಮಾಡಿಕೊಂಡು ಲೂಟಿ ಮಾಡುತ್ತಿದ್ದ ದುಷ್ಟ ಸಾಮ್ರಾಜ್ಯಶಾಹಿ ಆಡಳಿತಗಳ ೀತಿಯೇ ಆಗಿತ್ತು.

ಕಾಂಗೋ ದೇಶದ ನಾಯಕ ಪ್ಯಾಟ್ರಿಸ್ ಲುಮುಂಬಾ, ಅಂಗೋಲಾದ ನಾಯಕ ಆಗಸ್ತಿನೆ ನಾಟೋ, ಗಿನಿಯಾದ ನಾಯಕ ಅಮಿಲ್‌ಕರ್ ಕಾರ್ಬಲ್ .. .. ಹೀಗೆ ಹತ್ಯೆಯಾದ ನಾಯಕರ ದೊಡ್ಡ ಪಟ್ಟಿಯೇ ಇದೆ. 1980 ದಶಕದಲ್ಲಿ ತೀವ್ರಗೊಂಡ ವರ್ಣಭೇಧ ವಿರೋಧಿ ಚಳುವಳಿಯಲ್ಲಿ ಸುಮಾರು 6-7 ವರ್ಷಗಳಲ್ಲಿ ಬಿಳಿಯರ ಬಂದೂಕು, ಬಾಂಬ್‌ಗಳಿಗೆ ಬಲಿಯಾದ ಕರಿಯ ಮತ್ತು ಬಿಳಿಯ ಹೋರಾಟಗಾರರ ಸಂಖ್ಯೆ 13,000 ವನ್ನೂ ದಾಟಿತ್ತು ಎಂದರೆ ಯಾರಾದರೂ ದಕ್ಷಿಣ ಆಫ್ರಿಕಾದ ಫ್ಯಾಸಿಸ್ಟ್ ಸರ್ಕಾರದ ಕ್ರೌರ್ಯ ಎಂಥದ್ದು ಎಂದು ಅರ್ಥಮಾಡಿಕೊಳ್ಳಬಹುದು. ಕಾಣೆಯಾದವರ ಪಟ್ಟಿ ಬೇರೆ.

ಜಗತ್ತಿನಾದ್ಯಂತ ವರ್ಣಭೇಧ ನೀತಿ ವಿರುದ್ಧ ಜನಚಳುವಳಿಗಳು ಬೆಳೆದವು. ಅಮೆರಿಕವೂ ಕೂಡ ತನ್ನ ಹಳೆಯ ಆಟಗಳನ್ನು ಬಿಟ್ಟು ಆಫ್ರಿಕಾದ ಬಿಳಿಯ ಸರ್ಕಾರದ ಮೇಲೆ ಒತ್ತಡ ತರುವ ನಿರ್ಬಂಧಕ್ಕೆ ಒಳಗಾಯಿತು. ಇಷ್ಟಾದರೂ ಪ್ರತಿಗಾಮಿ ಬಿಳಿಯ ಆಡಳಿತಗಾರರ ಕೈಯಲ್ಲಿ ಅತ್ಯಾಧುನಿಕ ಕ್ರೂರ ಮಾರಕ ಶಕ್ತಿಶಾಲಿ ಆಯುಧಗಳಿದ್ದವು. ಸಾರಿಗೆ-ಸಂಪರ್ಕ, ಮಾಧ್ಯಮ, ಗಣಿ, ಉದ್ಯಮ ಎಲ್ಲವುಗಳ ಮೇಲೂ ತನ್ನ ಬಲಿಷ್ಠ ಮುಷ್ಟಿಯ ನಿಯಂತ್ರಣವನ್ನಿಟ್ಟುಕೊಂಡು ಉಸಿರೆತ್ತುವವರನ್ನು ಬೂಟುಗಾಲಿನಲ್ಲಿ ಹೊಸಕುವುದೇ ತನ್ನ ನಿರ್ಲಜ್ಜ ನೀತಿ ಎಂದು ಟೊಂಕಕಟ್ಟಿ ಸರ್ಕಾರ ನಿಂತುಬಿಟ್ಟಿತ್ತು. ಆಳುವವರು ಮನುಷ್ಯತ್ವವೇ ನಾಚುವಂತೆ ತಾವು ಯಾವ ರೀತಿಯ ರಕ್ತಪಾತ-ನರಮೇಧಗಳಿಗೂ ಸಜ್ಜು ಎನ್ನುವಂತಿದ್ದರು. ಸ್ಫೋಟಕ ಸನ್ನಿವೇಶದಲ್ಲಿ ರಕ್ತಪಾತ ಹಾಗೂ ಅಮೂಲ್ಯ ಜೀವಹಾನಿಗಳಿಗೆ ಕೊನೆ ಹಾಡುವುದು, ಒಂದು ಶಾಂತಿಯುತ




ವಿಧಾನದಲ್ಲಿ ದಕ್ಷಿಣ ಆಫ್ರಿಕಾದ ವರ್ಣಭೇದ ವ್ಯವಸ್ಥೆಯನ್ನು ಕಳಚಿ ಹಾಕುವುದು ಒಂದು ತುರ್ತು ಅಗತ್ಯತೆಯಾಗಿ ಮನಗಂಡ ಮಂಡೇಲಾ 'ಸತ್ಯ ಮತ್ತು ಸಂಧಾನ ಆಯೋಗ' - Truth and Reconciliation Commission- ದ ರಚನೆಗೆ ಸೂಚಿಸಿದರು. ಹೀಗೆ 'ಶಾಂತಿ-ಸಂಧಾನ'ದ ಕಡೆಗೆ ವ್ಯಕ್ತವಾದ ಇಂತಹ ಮಂಡೇಲ ಅವರ ಒಲವಿನ ಕುರಿತು ಸಹಜವಾಗಿಯೇ ವ್ಯಾಪಕವಾದ ಟೀಕೆ ಆಕ್ರೋಶಗಳೂ ವ್ಯಕ್ತವಾದವು. ಬಿಳಿಯರ ವಿರುದ್ಧ ಸೇಡು ಪ್ರತೀಕಾರದ ಒಳತುಡಿತ ಹೊಂದಿದ್ದವರಿಗೆ ಈ ನಡವಳಿಕೆಗಳು ಒಂದು ದ್ರೋಹದಂತೆಯೂ ಶರಣಾಗತಿಯಂತೆ-ಯೂ ಕಂಡಿರಬಹುದು.

ಮರೆಯದ ಎಚ್ಚರ

'ಭಾರತ ದಕ್ಷಿಣ ಆಫ್ರಿಕಕ್ಕೆ ಮೋಹನ ದಾಸ್‌ರನ್ನು ಕಳಿಸಿತು. ದಕ್ಷಿಣ ಆಫ್ರಿಕಾ ಭಾರತ-ಕ್ಕೆ ಮಹಾತ್ಮರನ್ನು ವಾಪಸ್ ಕಳಿಸಿತು' ಎಂದು ಮಂಡೇಲ ಅವರು ಯೆಚೂರಿಯವರಿಗೆ ಡರ್ಬಾನ್‌ನಲ್ಲಿ 1991 ರಲ್ಲಿ ಹೇಳಿದ್ದರಂತೆ. ಆ ಮಾತು ಈಗ ಬಳಸಿ ಬಳಸಿ ಬಹುತೇಕ ಒಂದು ಕ್ಲೀಷೆಯಂತಾಗಿದೆ.

ಅದೆಲ್ಲಾ ಏನೇ ಇದ್ದರೂ ಮಂಡೇಲ ಶತ್ರು ಪಾಳೆಯ ಮತ್ತೆ ಶಸಸ್ತ್ರ ಮರುದಾಳಿ ನಡೆಸುವ ಅಪಾಯಕಾರಿ ಸಾಧ್ಯತೆಗಳ ಬಗೆಗೆ ಮತ್ತು ಎಎನ್‌ಸಿ-ದಕ್ಷಿಣ ಆಫ್ರಿಕಾದ ಕಮ್ಯೂನಿಸ್ಟ್ ಪಕ್ಷ ಮತ್ತು ಕೊಸಾಟೋಗಳು ತಮ್ಮ ಸುದೀರ್ಘ ಮೈತ್ರಿ ಮತ್ತು ಐಕ್ಯತೆಯನ್ನು ಮುಂದುವರಿಸಿಕೊಂಡು ಹೋಗಬೇಕಾದ ಅಗತ್ಯದ ಬಗೆಗೆ ಪದೇ ಪದೇ ಎಚ್ಚರಿಕೆ ಕೊಡುತ್ತಿದ್ದರು. ಹೀಗಾಗಿ ಮಂಡೇಲಾ ಅವರಿಗೆ 'ಅಹಿಂಸೆ' ಎಂಬುದು ಆ ಸಂದರ್ಭಕ್ಕೆ ಅಗತ್ಯವಾದ ಒಂದು ತಂತ್ರಗಾರಿಕೆಯಾಗಿ-



ತ್ತು ಎಂಬುದು ಸ್ಪಷ್ಟ. ಮಹಾತ್ಮ ಗಾಂಧಿಯವರ ಅಹಿಂಸಾ ಧೋರಣೆಗೂ ಮಂಡೇಲ ಅವರ ಈ ಧೋರಣೆ ಒಂದೇ ಅಲ್ಲ ಅನ್ನುತ್ತಾರೆ ಸೀತಾರಾಮ ಯೆಚೂರಿ.

ಆರ್ಥಿಕ ನೀತಿಗಳ ವಿಮರ್ಶೆ

ದಕ್ಷಿಣ ಆಫ್ರಿಕಾ ಕಮ್ಯೂನಿಸ್ಟ್ ಪಕ್ಷದ 10ನೇ ಮಹಾಧಿವೇಶನದಲ್ಲಿ ಮತ್ತೆ ಯೆಚೂರಿಯವರು ಮಂಡೇಲಾ ಅವರನ್ನು ಕಂಡಾಗ ಅವರು ಮಹಾಧಿವೇಶನದಲ್ಲಿ ಎಎನ್‌ಸಿ ಸರ್ಕಾರದ ಆರ್ಥಿಕ ನೀತಿಗಳ ಬಗೆಗಿನ ಗಂಭೀರ ಚರ್ಚೆಯಲ್ಲಿ ತೊಡಗಿಕೊಂಡಿದ್ದರಂತೆ. ಆ ಅಧಿವೇಶನದಲ್ಲಿ ದಕ್ಷಿಣ ಆಫ್ರಿಕಾ ಕಮ್ಯೂನಿಸ್ಟ್ ಪಕ್ಷವು ಅಂದಿನ ಮೆಬೆಕಿ ನೇತೃತ್ವದ ದಕ್ಷಿಣ ಆಫ್ರಿಕಾ ಸರ್ಕಾರದ ನೀತಿಗಳು ಹೆಚ್ಚೆಚ್ಚು ಸಾಮ್ರಾಜ್ಯಶಾಹಿ ಜಾಗತೀಕರಣ ನೀತಿಗಳೊಂದಿಗೆ ಮೇಳೈಸುತ್ತಾ ಹೋಗುತ್ತಿರುವ ಬಗೆಗೆ ಮತ್ತು ದಕ್ಷಿಣ ಆಫ್ರಿಕಾ ಚಳುವಳಿಯ 'ಸ್ವಾತಂತ್ರ್ಯದ ಪಟ್ಟಿ'ಯಲ್ಲಿನ ಆರ್ಥಿಕ ಸಮಾನತೆಯ ಆಶಯಗಳ ಸಾಕಾರದ ಸಾಧ್ಯತೆಗಳು ದೂರವಾಗುತ್ತಿರುವ ಕುರಿತು ಕಟುವಾದ ವಿಮರ್ಶೆಗಳನ್ನು ಮಾಡಿತು. ಆದರೆ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ ಕಮ್ಯೂನಿಸ್ಟ್ ಪಕ್ಷವು ಎಎನ್‌ಸಿ ಮತ್ತು ಕೊಸೊಟೋ ಜೊತೆಗಿನ ತ್ರಿಪಕ್ಷೀಯ ಮೈತ್ರಿಯನ್ನು ಕಡಿದುಕೊಳ್ಳುವ ತೀರ್ಮಾನ ಕೈಗೊಳ್ಳಲಿಲ್ಲ. ಬದಲಿಗೆ ಸರ್ಕಾರದ ನೀತಿಗಳ ವಿಷಯದಲ್ಲಿ ಜನರ ಪರವಾಗಿ ತನ್ನ 'ಕಾವಲು ನಾಯಿ' ಪಾತ್ರವನ್ನು ಮುಂದುವರಿಸುವ ಮತ್ತು ಇನ್ನಷ್ಟು ತೀವ್ರಗೊಳಿಸುವ ತೀರ್ಮಾನವನ್ನು ಕೈಗೊಂಡಿತು. ಹಾಗು ಆ ನಿಟ್ಟಿನಲ್ಲಿ ಮೆಬೆಕಿ ಸರ್ಕಾರಕ್ಕೆ ಕಠಿಣ ಎಚ್ಚರಿಕೆ ನೀಡಿತು. ಡಿಸೆಂಬರ್ 2010ರ ವಿಶ್ವ ಸಾಮ್ರಾಜ್ಯಶಾಹಿ ವಿರೋಧಿ ವಿದ್ಯಾರ್ಥಿ-ಯುವಜನೋತ್ಸವವು ದಕ್ಷಿಣ ಆಫ್ರಿಕಾದ ಪ್ರಿಟೋರಿಯಾದಲ್ಲಿ ನಡೆದಾಗ ಉತ್ಸವದಲ್ಲಿ ಪಾಲ್ಗೊಂಡಿದ್ದ ಕಮ್ಯೂನಿಸ್ಟ್ ಪಕ್ಷದ ಯೂತ್ ಕಮ್ಯೂನಿಸ್ಟ್ ಲೀಗ್ ಕಾರ್ಯಕರ್ತರಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಇಲ್ಲದಂತಹ ಸ್ಪಷ್ಟತೆ ಈ ವಿಷಯದಲ್ಲಿ ಎದ್ದು ಕಾಣುತ್ತಿತ್ತು. ಭಾರತದಿಂದ ಮತ್ತು ಕರ್ನಾಟಕದಿಂದ ತೆರಳಿದ್ದ ವಿದ್ಯಾರ್ಥಿ-ಯುವಜನ ಪ್ರತಿನಿಧಿಗಳಿಗೂ ಇದು ಸ್ಪಷ್ಟವಾಗಿ ಎದ್ದು ಕಂಡಿತು. ಆ ಹೊತ್ತಿನಲ್ಲಿ ಅಲ್ಲಿ ದೇಶದ ಅಮೂಲ್ಯವಾದ ಮತ್ತು ಶ್ರೀಮಂತವಾದ ಗಣಿಗಳ ರಾಷ್ಟ್ರೀಕರಣದ ವಿಷಯವನ್ನು ಸಾರ್ವಜನಿಕ ಚರ್ಚೆಯ ಮುಂಚೂಣಿಗೆ ತರುವಲ್ಲಿ ಕಮ್ಯೂನಿಸ್ಟ್ ಪಕ್ಷ ಸಾಕಷ್ಟು ಯಶಸ್ವಿಯಾಗಿದೆ ನಮ್ಮೆಲ್ಲರ ಗಮನಕ್ಕೆ ಬಂತು. ಎಎನ್‌ಸಿ ಸರ್ಕಾರವೂ ಆ ವಿಷಯದಲ್ಲಿ ಒಂದು ನಿಲುವು ತೆಗೆದುಕೊಳ್ಳಬೇಕಾದ ಒತ್ತಡಕ್ಕೆ ಸಿಲುಕಿದಂತೆ ಕಾಣುತ್ತಿತ್ತು.

'ಎಎನ್‌ಸಿ'ಯ ಮೂಲ 'ಸ್ವಾತಂತ್ರ್ಯದ ಪಟ್ಟಿ' ಎನ್ನುವ ಸ್ವಾತಂತ್ರ್ಯದ ಆಶೋತ್ತರಗಳು ಮುಖ್ಯವಾಗಿ 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿ'ಯ ಪ್ರಮುಖಾಂಶಗಳ ಜಾರಿಗೆ ಮಂಡೇಲ ಬಯಸಿದ್ದರು. ಆದರೆ ಅದು ಜಾರಿಯಾಗಿಲ್ಲ. ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಚಳುವಳಿಯ ಒಂದು ಆಶೋತ್ತರವಾದ ಕ್ರಾಂತಿಕಾರಿ ಭೂ ಸುಧಾರಣೆ ಅಂದರೆ ಕರಿಯರಿಗೆ ಭೂಮಿಯ ಮೇಲಿನ ಒಡೆತನದಲ್ಲಿ ನ್ಯಾಯಬದ್ಧ ಪಾಲು ಇನ್ನೂ ಸಿಕ್ಕಿಲ್ಲ. ದೇಶದ ಆರ್ಥಿಕತೆ ಚುಕ್ಕಾಣಿಯನ್ನು ಈಗಲೂ ಹಿಡಿದಿರುವವರು ಬಹುತೇಕ ಅದೇ ಮಾಜಿ ವಸಾಹತುಶಾಹಿ ಆಡಳಿತಗಾರರರು-ಬಿಳಿಯ ಬಂಡವಾಳಿಗರು ಮತ್ತು ಇದೀಗ ಇವರೊಂದಿಗೆ ಸಹಯೋಗಕ್ಕೆ ಮುಂದಾಗಿರುವ, ಇತ್ತೀಚಿಗೆ ಬೆಳೆದು ಬಂದ ಸಣ್ಣ ಕರಿಯ ಬಂಡವಾಳಿಗರು. ಕಣ್ಣುಕುಕ್ಕುವ ವರ್ಣಭೇದ ವ್ಯವಸ್ಥೆಯನ್ನು ಕಳಚಿ ಹಾಕಿರುವುದಷ್ಟೆ ಪರಿಸ್ಥಿತಿಯಲ್ಲಿ ಆಗಿರುವ ಬದಲಾವಣೆ. ದೇಶದಲ್ಲಿ ಅಸಮಾನತೆ. ಒಂದೆಡೆ ಕಣ್ಣು ಚುಚ್ಚುವ ಬಿಳಿಯರ ವೈಭವ ಶ್ರೀಮಂತಿಕೆ. ಮತ್ತೊಂದೆಡೆ ನಿರುದ್ಯೋಗ, ಹಸಿವು, ಕೊಲೆ ಸುಲಿಗೆಗಳು, ವೇಶ್ಯಾವಾಟಿಕೆ, ಭಿಕ್ಷಾಟನೆ. ಮಂಡೇಲ ಅವರು 'ಎಎನ್‌ಸಿ'ಯ ಗುರಿಯಾದ 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿ'ಯ ಫಲವನ್ನು ಜನತೆ ಪಡೆಯುವುದನ್ನು ತಮ್ಮ ಜೀವಿತಾವಧಿಯಲ್ಲಿ ನೋಡುವುದಕ್ಕೆ ಆಗಲಿಲ್ಲ. ಆದರೆ ನ್ಯಾಯಯುತ ಸಮಾಜದ ಕನಸಿನ ಸಾಕಾರಕ್ಕಾಗಿ ನಡೆಯುವ ಹೋರಾಟ ನಿಲ್ಲುವುದಿಲ್ಲ. ದಕ್ಷಿಣ ಆಫ್ರಿಕಾ ಕಮ್ಯೂನಿಸ್ಟ್ ಪಕ್ಷದ 10ನೇ ಮಹಾಧಿವೇಶನ 'ಸಮಾಜವಾದವೇ ಭವಿಷ್ಯ' ಎಂದು ಘೋಷಿಸಿತು. ದಕ್ಷಿಣ ಆಫ್ರಿಕಾದ ದೇಶದ ಮುಂದಿನ ದಾರಿಯೇನು? ಅಲ್ಲಿನ ಜನಚಳುವಳಿಯ ಮುಂದಿನ ನಡೆಯೇನು? ಅದನ್ನು ಆ ದೇಶದ ಜನ ನಿರ್ಧರಿಸುತ್ತಾರೆ.

ಆದರೆ ಮಂಡೇಲ ಅವರು ಕೊನೆಯುಸಿರೆಳೆದ ಸಂದರ್ಭದಲ್ಲಿ ಜಗತ್ತು ಕೇವಲ ಇಸವಿಗಳ ಲೆಕ್ಕದಲ್ಲಿ ಮಾತ್ರವಲ್ಲ, ಮಾನವ ನಾಗರೀಕತೆಯ ವಿಕಾಸದ ಹಾದಿಯಲ್ಲಿ ಜಗತ್ತನ್ನು ಇಪ್ಪತ್ತೊಂದನೇ ಶತಮಾನಕ್ಕೆ ಕೊಂಡೊಯ್ಯುವ ಪ್ರಕ್ರಿಯೆಯನ್ನು ನಿರ್ವಹಿಸಿದ ಜಾಗತಿಕ ನೇತಾರರಲ್ಲಿ ನೆಲ್ಸನ್ ಮಂಡೇಲ ಅಂಗ್ರಪಂಕ್ತಿಯಲ್ಲಿ ನಿಲ್ಲುತ್ತಾ-ರೆ. ಅವರ ಸಾವು ಸಮಸ್ತ ಮನುಕುಲಕ್ಕೆ ಆದ ಒಂದು ದೊಡ್ಡ ನಷ್ಟ ಎನ್ನುತ್ತಾರೆ ಸೀತಾರಾಮ ಯೆಚೂರಿಯವರು.

ಡಿಸೆಂಬರ್ 6, 2013 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕಚೇರಿಯಲ್ಲಿ ಅಗಲಿದ ಮಹಾನ್ ಚೇತನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅಂದು ದೇಶದ ಎಲ್ಲ ಸಿಪಿಐ(ಎಂ) ಕಛೇರಿಗಳ ಮೇಲೆ ಕೆಂಬಾವುಟವು ಅರ್ಧಮಟ್ಟದಲ್ಲಿ ಹಾರಿತು. ಮಂಡೇಲ ಅವರ ಕುರಿತ ಇನ್ನೂ ಬಾಕಿ ಉಳಿದ ಪ್ರಶ್ನೆಗಳಿಗೆ ಕಾಲವೇ ಮುಂದೆ ಉತ್ತರಿಸುತ್ತದೆ ಅನಿಸುತ್ತದೆ. ಆದರೆ ಮನುಕುಲದ ಮುನ್ನಡೆಯ ಮಹಾ ಸಂಘರ್ಷದಲ್ಲಿ ನೆಲ್ಸನ್ ಮಂಡೇಲ ಅವರ ಕೊಡುಗೆ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯುತ್ತದೆ.

-ಆರ್. ರಾಮಕೃಷ್ಣ



ಅರಣ್ಯ ಅತಿಕ್ರಮಣ ಭೂಮಿ ಹಕ್ಕನ್ನು ನೀಡಲು ಒತ್ತಾಯಿಸಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ

ಅರಣ್ಯ ಅತಿಕ್ರಮಣ ಭೂಮಿ ಸಕ್ರಮಕ್ಕೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 4-5 ದಶಕಗಳಿಂದ ಹಲವಾರು ಹಂತದಲ್ಲಿ ಹೋರಾಟ ನಡೆಸಿ ಸರ್ಕಾರಕ್ಕೆ ಮನವಿ ನೀಡುತ್ತಾ ಬರಲಾಗುತ್ತಿದೆ. ಸರಕಾರದಿಂದಲೂ ಭರವಸೆ ಮೇಲೆ ಭರವಸೆಗಳು ಬಂದಿವೆ. ಆದರೆ ಇಲ್ಲಿಯವರೆಗೂ ಅರಣ್ಯ ಅತಿಕ್ರಮಣ ಸಕ್ರಮಗೊಂಡಿಲ್ಲ. ಭೂಮಿ ಬಡ ಜನತೆಗೆ ಸಿಕ್ಕಿಲ್ಲ.

ನವೆಂಬರ 7–8, 2013ರಂದು ರಾಜ್ಯದಾದ್ಯಂತ ಜಿಲ್ಲಾಧಿಕಾರಿ ಕಛೇರಿಗಳ ಎದುರು 48 ಗಂಟೆಗಳ ಅಹೋರಾತ್ರಿ ಧರಣಿ ನಡೆಸಿದಾಗ ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಿ ತೀರ್ಮಾನಿಸುವುದಾಗಿ ಭರವಸೆಯನ್ನು ಪ್ರಾಂತ ರೈತ ಸಂಘಕ್ಕೆ ಸರಕಾರದ ಪ್ರತಿನಿಧಿಗಳು ನೀಡಿದ್ದರು. ಮುಖ್ಯಮಂತ್ರಿಗಳು ರೈತ ಸಂಘದ ಪ್ರತಿನಿಧಿಗಳ ಜೊತೆ ಚರ್ಚಿಸುವುದಾಗಿ ಭರವಸೆ ಸಹ ನೀಡಿದ್ದರು.

ಶಾಂತರಾಮ್ ನಾಯಕ

ಆದರೆ ಲಕ್ಷಾಂತರ ಜನರ ಬೇಡಿಕೆಗಳ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಚರ್ಚೆಗೆ ಎತ್ತಿಕೊಂಡಿಲ್ಲ. ವಿರೋಧ ಪಕ್ಷದವರು ಪ್ರಶ್ನಿಸಿಲ್ಲ. ಮುಖ್ಯಮಂತ್ರಿಗಳು ಸಹ ರೈತ ಪ್ರತಿನಿಧಿಗಳ ಜೊತೆ ಇಲ್ಲಿಯವರೆಗೆ ಚರ್ಚೆ ನಡೆಸಿಲ್ಲ.

ಲಕ್ಷಾಂತರ ಬಡ ಜನರ ಜೀವನದ ಪ್ರಶ್ನೆಯನ್ನು ಸರಕಾರ ನಿರ್ಲಕ್ಷ್ಯ ಮಾಡುತ್ತಿರುವುದನ್ನು ಖಂಡಿಸಿ ಕೂಡಲೇ ಬೇಡಿಕೆಗಳನ್ನು ಈಡೇರಿಸಲು ರೈತ ಪ್ರತಿನಿಧಿಗಳ ಸಭೆ ಕರೆದು ಚರ್ಚಿಸಬೇಕು ಮತ್ತು ಅವಶ್ಯಬಿದ್ದರೆ ದೆಹಲಿಗೆ ನಿಯೋಗ ತೆಗೆದು- ಕೊಂಡು ಹೋಗಿ ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟು ಭೂಮಿ ಹಕ್ಕನ್ನು ನೀಡಬೇಕೆಂದು ಆಗ್ರಹಿಸಿ ರಾಜ್ಯಾದ್ಯಂತ ಡಿಸೆಂಬರ್ 16 ರಂದು ರೈತರಿಂದ ರಸ್ತೆ ತಡೆ ಚಳುವಳಿ ನಡೆಸಲಾಯಿತು. ಅಂಕೋಲಾದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ ಈ ಮನವಿ ನೀಡಲಾಯಿತು.

ಬೇಡಿಕೆಗಳು :

1) ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 ಮತ್ತು ನಿಯಮ 2008 ತಿದ್ದುಪಡಿ 2012ರಲ್ಲಿ ಒತ್ತಿ ಹೇಳಿರುವಂತಹ 3 ತಲೆಮಾರು ಅಂದರೆ 75 ವರ್ಷ ಜಮೀನು ಸ್ವಾಧೀನದಲ್ಲಿರುವ ಸಾಕ್ಷ್ಯ ಕೇಳಿರುವುದು ವಾಪಸ್ಸಾಗಬೇಕು. ಬುಡಕಟ್ಟು ಜನರಿಗೆ ಇರುವಂತೆ ಡಿಸೆಂಬರ 13, 2005ರ ವರೆಗೆ ವಶದಲ್ಲಿದ್ದ ಇತರೆ ಅರಣ್ಯವಾಸಿಗಳಿಗೂ ಹಕ್ಕುಪತ್ರ ನೀಡಬೇಕು. ಅವಶ್ಯವಿದ್ದರೆ ಅರಣ್ಯ ಕಾಯ್ದೆಗೆ ತಿದ್ದುಪಡಿ ತರಬೇಕು.
2) ಆದಿವಾಸಿ ಬುಡಕಟ್ಟು ಜನರ ಎಲ್ಲಾ ಅರಣ್ಯ ಅತಿಕ್ರಮಣ ಅರ್ಜಿಗಳನ್ನು ಮಾನ್ಯ ಮಾಡಬೇಕು. ಸ್ವಾಧೀನದಲ್ಲಿರುವಷ್ಟು ಭೂಮಿಗೆ ಹಕ್ಕುಪತ್ರ ನೀಡಬೇಕು.
3) ಬಗರ್ ಹುಕುಂ ಸಾಗುವಳಿದಾರರು ಅಕ್ರಮ-ಸಕ್ರಮ ಕಾನೂನಿನ ಪ್ರಕಾರ ಫಾರಂ 50 ಹಾಗೂ 53ರಲ್ಲಿ ಅರ್ಜಿ ಹಾಕಿಕೊಂಡವರ ಅರ್ಜಿ ಕೂಡಲೇ ಪರಿಶೀಲಿಸಿ ಅಂಗೀಕರಿಸಬೇಕು.
4) ಬಡವರಿಗೆ ಮನೆ ನಿವೇಶನ ನೀಡಿ ಮನೆ ಕಟ್ಟಿಸಿಕೊಡಬೇಕು.
5) ಅಂಕೋಲಾ ನಗರ ವಾರ್ಡ್ ವ್ಯಾಪ್ತಿಯಲ್ಲಿ ಅರಣ್ಯ ಹಕ್ಕು ಸಮಿತಿ ರಚಿಸಿ ಅರ್ಜಿ ಸ್ವೀಕರಿಸಬೇಕು.
6) ಪಶ್ಚಿಮ ಘಟ್ಟದ ಭಾಗವಾಗಿರುವ ಉತ್ತರ ಕನ್ನಡ ಜಿಲ್ಲೆಯ 630 ಗ್ರಾಮಗಳಲ್ಲಿ ಕೃಷಿ ಮತ್ತು ಇತರೆ ಮೂಲಭೂತ ಅಭಿವೃದ್ಧಿ ಕಾರ್ಯಗಳನ್ನು ನಿಯಂತ್ರಿಸುವ ಡಾ। ಕಸ್ತೂರಿ ರಂಗನ್ ವರದಿ ತಿರಸ್ಕರಿಸಬೇಕು.
7) ಜನತಾ ಮನೆವಾಸಿಗರ ಹೆಸರು ಪಹಣಿ ಪತ್ರಿಕೆ (ಆರ್.ಟಿ.ಸಿ.)ಯಲ್ಲಿ ನೊಂದಣಿಯಾಗಬೇಕು.

ಹೆದ್ದಾರಿ ತಡೆ ಕಾರ್ಯಕ್ರಮದಲ್ಲಿ ರೈತ ಸಂಘದ ಮುಖಂಡರಾದ ಶಾಂತರಾಮ ನಾಯಕ್, ರಮಾನಂದ ನಾಯಕ ಅಚವೆ, ಶಾಂತಾರಾಮ ಗಾಂವಕರ ಕುಂಟಕಣಿ, ನಾಗೇಶ ಗೌಡ ಬೇಲೆಕೇರಿ, ರಾಜು ಗೌಡ ಶಿರಕುಳಿ, ಸುಧಾಕರ ಬಾನಾವಳಿಕರ ಬೇಲೆಕೇರಿ, ಸಂತೋಷ ನಾಯ್ಕ ಬಾಳೇಗುಳಿ, ರಮಾನಂದ ಕೆ. ನಾಯಕ ಹಿಲ್ಲೂರು, ಗ್ರಾ.ಪಂ. ಅಧ್ಯಕ್ಷರಾದ ರಮೇಶ ನಾಯಕ ಹಿಲ್ಲೂರು, ಶಿವಪ್ಪ ನಾಯಕ ಸುಂಕಸಾಳ, ಬಾಲಚಂದ್ರ ನಾಯಕ ಅಗಸೂರು, ಸಂಜೀವ ನಾಯ್ಕ ಅಲಗೇರಿ ಮತ್ತು ಸದಸ್ಯರಾದ ದೇವಿ ಗೌಡ, ಮಂಗಲಾ ನಾಯ್ಕ, ವಸಂತ ನಾಯ್ಕ, ನಾಗೇಶ ನಾಯ್ಕ, ಅಂಕೋಲೆಕರ, ಆನಂದು ದೇಸಾಯಿ ಬೇಲೆಕೇರಿ, ಉದಯ ಗುನಗ ಅಚವೆ, ಬಾಲಚಂದ್ರ ಶೆಟ್ಟಿ ಕುಂಟಕಣಿ, ಸಚಿತ ನಾಯಕ ಹಿಲ್ಲೂರು, ಶಿವಾನಂದ ನಾಯಕ ಅಗಸೂರು, ಶೋಭಾ ಗೌಡ ಸರಳೆಬೈಲ ಮುಂತಾದವರು ಹಾಜರಿದ್ದರು.

ಕಾರವಾರದಲ್ಲಿ ರಸ್ತೆ ತಡೆ

ಗ್ರಾಮೀಣ ಜನತೆಯ ಹಾಗೂ ರೈತರ ಬದುಕನ್ನು ಅಭಿವೃದ್ಧಿಹೀನಗೊಳಿಸುವ ಪಶ್ಚಿಮ ಘಟ್ಟ ರಕ್ಷಣೆ ಕುರಿತ ಕಸ್ತೂರಿ ರಂಗನ್ ವರದಿ ತಿರಸ್ಕರಿಸಲು, ಅರಣ್ಯ ಮತ್ತು ಸರ್ಕಾರಿ ಅತಿಕ್ರಮಣ ಭೂಮಿ ಸಕ್ರಮಕ್ಕೆ, ಜನತಾ ಮನೆಗಳ ಮಾಲಿಕರ ಹೆಸರನ್ನು ಆರ್.ಟಿ.ಸಿ. ಯಲ್ಲಿ ದಾಖಲಿಸಲು, ಎಲ್ಲಾ ಬಡವರಿಗೆ ಮನೆ-ನಿವೇಶನ ನೀಡಲು, ಹಳ್ಳಿಗಳಿಗೆ ಮೂಲಸೌಕರ್ಯ ಒದಗಿಸಲು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್ಎಸ್) ಕಾರವಾರ ತಾಲೂಕಾ ಸಮಿತಿ ನೇತೃತ್ವದಲ್ಲಿ ಅಂಬ್ರಾಯ್ ಕ್ರಾಸ್ ನಲ್ಲಿ ರಸ್ತೆ ತಡೆ ನಡೆಸಲಾಯಿತು.

ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡಿದ ರೈತ ಸಂಘದ ತಾಲೂಕಾ ಅಧ್ಯಕ್ಷರಾದ ವಿಷ್ಣು ಶಂಕರ ನಾಯ್ಕ, ಅನ್ನ ನೀಡುವ ರೈತಾಪಿ ಜನರ ಬೆನ್ನು ಮುರಿಯಲು ಕಾಯ್ದೆ ತರುತ್ತಿರುವ ಸರ್ಕಾರಗಳಿಗೆ ಬುದ್ಧಿ ಕಲಿಸಬೇಕು. ತಲೆತಲಾಂತರದಿಂದ ಬದುಕಲು ತುಂಡು ಭೂಮಿ ಬಳಸುತ್ತಿದ್ದವರನ್ನು ಒಕ್ಕಲೆಬ್ಬಿಸುವ ಅಧಿಕಾರಶಾಹಿ ಸರ್ಕಾರ ತನ್ನ ಚುನಾವಣಾ ಆಶ್ವಾಸನೆ ಮರೆತಿದೆ. ಕೂಡಲೇ ಬಡ ರೈತ-ಕೂಲಿಕ ಕಾರ್ಮಿಕರನ್ನು ಉಳಿಸಲು ಭೂಮಿ ಕೊಡಬೇಕು ಎಂದರು.

ಸಿಐಟಿಯು ತಾಲೂಕಾ ಸಮಿತಿ ಅ ಧ್ಯಕ್ಷ ಜೋಸ್ ವಕೀಲರು ಮಾತನಾಡಿ ಈಗಾ ಕಾಡಿನ ಮಕ್ಕಳನ್ನು ಹೊರಗೆಡವಿ, ಬಹುರಾಷ್ಟ್ರ ಕಂಪನಿಗಳಿಗೆ ಮಾರಾಟ ಮಾಡಲು ಹು ನಡೆಸಿದ್ದರಿಂದಲೇ ಪಶ್ಚಿಮ ಘಟ್ಟ ಉಳಿವಿ ನೆಪದಲ್ಲಿ ಕಸ್ತೂರಿ ರಂಗನ್ ವರದಿ ಮಾಡಲಾಗುತ್ತಿದೆ, ಇದನ್ನು ರಾಜ್ಯ ಸರ ವಿರೋಧಿಸಿ ನಿರ್ಣಯ ಕೈಗೊಂಡು ಕೇಂ ಕಳಿಸಬೇಕೆಂದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದ ಯಮುನಾ ಗಾಂವ್ಕರ್ ಹೋರಾಟ ಬೆಂಬ ಮಾತನಾಡಿ ನಾಡಿನ ಜನತೆ ಭೂಮಿ ಹಕ್ಕಿನಿ ವಂಚಿತರಾಗುತ್ತಿದ್ದರೂ ರಾಜ್ಯ ವಿಧಾನ ಸ ಅಧಿವೇಶದಲ್ಲಿ ಬಡ ರೈತಾಪಿಕೂಲಿಕಾ ಭೂಮಿ ಸಕ್ರಮ ಕುರಿತು ನಿಲುವಳಿ ಸ್ವೀಕರಿ, ಜಿಲ್ಲೆಯ ಉಸ್ತುವಾರಿ ಸಚಿವರು ವ ನಿಶ್ಚಿಂತೆಯಿಂದ ಕೇವಲ ಹೇಳಿಕೆ ನೀ ಇದ್ದಾರೆ; ಕಾರ್ಯರೂಪದಲ್ಲಿ ಅತಿಕ್ರಮಣದಾ ಅರಣ್ಯವಾಸಿಗಳ, ಜನತಾ ಮನೆವಾಸಿಗರ ಹ ರಕ್ಷಿಸುತ್ತಿಲ್ಲ. ಜಿಲ್ಲೆಯ ಸಹಸ್ರಾರು ಕುಟುಂ ಹುಲಿ ಯೋಜನೆ, ಕಸ್ತೂರಿ ರಂಗನ್ ವರ ಬಲಿಯಾಗುತ್ತಿದ್ದುದನ್ನು ತಪ್ಪಿಸಲು ಮುಂದಾಗು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಾ ಕಾರ್ಯದರ್ಶಿ ಶಾಮನ ನಾಯ್ಕ ಸ್ಥಳಕ್ಕೆ ಆಗಮಿಸಿದ ತಹಶಿಲ್ದಾರ ಮನವಿ ನೀಡಿ ಸಮಸ್ಯೆಗಳನ್ನು ವಿವರಿಸಿದ ಆದಿವಾಸಿ ಬುಡಕಟ್ಟು ಜನರಿಗೆ ಅರಣ್ಯಕಾ ಸಡಿಲಿಸಿದಂತೆ ಇತರೇ ಅರಣ್ಯವಾಸಿಗಳಿ ಭೂಮಿ ನೀಡಿ, ನಗರ ಪ್ರದೇಶದಲ್ಲಿ ತ ಅತಿಕ್ರಮಣ ಭೂಮಿ ಸಕ್ರಮ ಮಾಡುವ ಸ ರಚಿಸಬೇಕು ಎಂದು ಒತ್ತಾಯಿಸಿದರು.

ಕದ್ರಾ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಅ ಪೆಡ್ನೇಕರ್, ದತ್ತಾರಾಮ ನಾಯ್ಕ, ಬೊ ಗೋವಿಂದ ನಾಯ್ಕ, ಬಾಳ್ನಿ, ಜೂಲಿ ಬ್ರಿಟೆ ಕಸ್ತೂರಿ ನಿಮಾನಿ, ಬರ್ಗಲ್, ಬಸವ್ವ ಹೋಟೆಗಾ ಉಲ್ಲಾಸ ನಾಯ್ಕ, ಅರ್ಜುನಕೋಟ್, ನಾಯ್ಕ, ಕೆರವಡಿ, ಪ್ರೇಮಾ ಉಳ ವಿನೋದ್ ಸಾತ್ಗಿರಿ, ಆನಂದು ವಿಶ್ರಾಮ ನಾ ಸಂತೋಷ ನಾಯ್ಕ, ಜರಡಿ, ಮಹೇಶ ಹೊಸ ಮುಂತಾದವರು ನೇತೃತ್ವ ವಹಿಸಿದ್ದರು.



ಜನಶಕ್ತಿ
ಕನ್ನಡ ವಾರಪತ್ರಿಕೆ

ಲೋಕಪಾಲ ಸ್ಥಾಪನೆಗೊಂಡಿದೆ ಆದರೆ, ಭ್ರಷ್ಟಾಚಾರದ ವಿರುದ್ಧ ಸಮರ ಮುಂದುವರೆಯಬೇಕಾಗಿದೆ

45 ವರ್ಷಗಳ ದೀರ್ಘ ಪ್ರಯತ್ನಗಳ ನಂತರ ಕೊನೆಗೂ ಲೋಕಪಾಲ ವ್ಯವಸ್ಥೆ ಸ್ಥಾಪನೆಗೊಳ್ಳುತ್ತಿದೆ. ಆದರೆ ಅದರಲ್ಲಿ ಕೆಲವು ಮಹತ್ವದ ನ್ಯೂನ್ಯತೆಗಳು ಇನ್ನೂ ಇವೆ. ಸದಾ ಬೆಳೆಯುತ್ತಿರುವ ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರದ ಪಿಡುಗನ್ನು ಎದುರಿಸುವ ಶಾಸನಕ್ಕಾಗಿ ಇನ್ನೂ ಬಹಳಷ್ಟು ಮಾಡಬೇಕಾಗಿದೆ., ಭ್ರಷ್ಟಾಚಾರದ ಮಟ್ಟಗಳಲ್ಲಿ ಪರಸ್ಪರ ಸ್ಪರ್ಧಿಗಿಳಿದಿರುವ ಕಾಂಗ್ರೆಸ್ ಮತ್ತು ಬಿಜೆಪಿ ಈ ಎರಡು ಪ್ರಧಾನ ರಾಜಕೀಯ ಗುಂಪುಗಳಿಗೆ ಒಂದು ರಾಜಕೀಯ ಪರ್ಯಾಯ ಬೇಕಾಗಿದೆ.

— ಸೀತಾರಾಮ್ ಯೆಚೂರಿ —

ಅಂತಿಮವಾಗಿ ಲೋಕಪಾಲ ಎಂಬ, ದೇಶದಲ್ಲಿ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಎದುರಿಸುವ ಸಾಂಸ್ಥಿಕ ವ್ಯವಸ್ಥೆ ಏರ್ಪಟ್ಟಿದೆ. ರಾಜ್ಯಸಭೆಯ ಆಯ್ಕೆ ಸಮಿತಿ ಸೂಚಿಸಿದ ಹೆಚ್ಚಿನ ತಿದ್ದುಪಡಿಗಳನ್ನು ಅಳವಡಿಸಿದ ಸಂಸತ್ತಿನ ಮಸೂದೆಯನ್ನು ರಾಜ್ಯಸಭೆ ಅಂಗೀಕರಿಸಿ, ಲೋಕಸಭೆಗೆ ಹಿಂದಿರುಗಿಸಿತು. ಲೋಕಸಭೆ ಅದನ್ನು ಅನುಮೋದಿಸುವುದರೊಂದಿಗೆ ಅಂತಿಮವಾಗಿ ಅದೀಗ ದೇಶದ ಕಾನೂನು ಆಗಿ ಬಿಟ್ಟಿದೆ.

ಇದು ಸಾಧ್ಯವಾಗಲು 45 ವರ್ಷಗಳಿಗಿಂತಲೂ ಹೆಚ್ಚಿನ ಸಮಯ ತಗೊಂಡಿದೆ. ಇಂತಹ ಒಂದು ವ್ಯವಸ್ಥೆ ಇರಬೇಕು ಎಂದು 1968ರಲ್ಲಿ ದಿವಂಗತ ಮೊರಾರ್ಜಿ ದೇಸಾಯಿ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗ ಸಲಹೆ ಮಾಡಿತ್ತು. ಅಂದಿನಿಂದ ಸಂಸತ್ತಿನ ಮುಂದೆ ಎಂಟು ಕರಡು ಶಾಸನಗಳು ಬಂದವು, ಆದರೆ ಯಾವುದೂ ಬೆಳಕು ಕಾಣಲಿಲ್ಲ. ಏಕೆಂದರೆ ಅವುಗಳಲ್ಲಿದ್ದ ಕೆಲವು ವಿವಾದಾತ್ಮಕ ಪ್ರಶ್ನೆಗಳ ಮೇಲೆ ಒಪ್ಪಿಗೆ ಸಾಧ್ಯವಾಗಿರಲಿಲ್ಲ. ಈಗಿನ ಶಾಸನ ಈ ಪಂಕ್ತಿಯಲ್ಲಿ ಒಂಭತ್ತನೆಯದು.

ಈ ಹಿಂದೆ, ಕಳೆದ ಮೂರು ದಶಕಗಳಲ್ಲಿ ಸಿಪಿಐ(ಎಂ) ಲೋಕಪಾಲ ವ್ಯವಸ್ಥೆಯನ್ನು ಸ್ಥಾಪಿಸಬೇಕು ಎಂದು ಆಗ್ರಹಿಸುವಲ್ಲಿ ಮುಂಚೂಣಿಯಲ್ಲಿತ್ತು. ಬೊಫೋರ್ಸ್ ಹಗರಣ ದೇಶವನ್ನು ಅಲುಗಾಡಿಸಿ ಸರಕಾರದ ರಾಜಕೀಯ ಮುಖಂಡತ್ವದಲ್ಲಿ ಬದಲಾವಣೆಗಳನ್ನು ತಂದಂದಿನಿಂದ ಸಿಪಿಐ(ಎಂ) ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ತಡೆಯಲು ಮತ್ತು ವ್ಯಾಪಾರಸ್ಥರು-ಅಧಿಕಾರಶಾಹಿಗಳು- ರಾಜಕಾರಣಿಗಳ ಅಪವಿತ್ರ ಕೂಟದ ಕಪಿಮುಷ್ಟಿಯನ್ನು ಮುರಿಯಲು ಒಂದು ಸಂಸ್ಥೆಯನ್ನು ಸ್ಥಾಪಿಸುವ ಶಾಸನವನ್ನು ತರುವಂತೆ ಪ್ರಯತ್ನಿಸುತ್ತ ಬಂದಿದೆ.

1989ರಲ್ಲಿ ವಿ.ಪಿ.ಸಿಂಗ್ ಸರಕಾರ ಉಳಿಯಲು ಸಿಪಿಐ(ಎಂ) ಬೆಂಬಲ ಬೇಕಾಗಿದ್ದುದರಿಂದ ಇಂತಹ ಶಾಸನ ತರಲು ಸಿಪಿಐ(ಎಂ) ಒತ್ತಡ ಹಾಕಿತ್ತು. ನಂತರವೂ ಎರಡು ಸಂದರ್ಭಗಳಲ್ಲಿ 1996 ಮತ್ತು 1997ರಲ್ಲಿ ಸಿಪಿಐ(ಎಂ)ನ ಬಾಹ್ಯ ಬೆಂಬಲದಿಂದ ಸಂಯುಕ್ತ ರಂಗ ಸರಕಾರ ರಚನೆಗೊಂಡಾಗಲೂ ಲೋಕಪಾಲ ಮಸೂದೆಯನ್ನು ಸಂಸತ್ತಿನ ಮುಂದೆ ತರಲಾಯಿತು. ಆದರೆ ಅದು ಕಾನೂನು ಆಗಲಿಲ್ಲ. 2004ರಲ್ಲಿ ಯುಪಿಎ-1 ಸಿಪಿಐ(ಎಂ) ಮತ್ತು ಎಡಪಕ್ಷಗಳ ಹೊರಗಣ ಬೆಂಬಲದೊಂದಿಗೆ ಸರಕಾರ ರಚಿಸಿದಾಗ ಲೋಕಪಾಲದ ಸ್ಥಾಪನೆ ಒಂದು ಗುರಿಯೆಂದು ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ಸೇರ್ಪಡೆ ಮಾಡಲಾಯಿತು. ಇದರ ಫಲಿತಾಂಶವೇ ಈಗಿದ್ದ ಕರಡು. ಅದೀಗ ಅಂತಿಮವಾಗಿ ಅಂಗೀಕಾರಗೊಂಡಿದೆ. ಹೀಗೆ ಸಿಪಿಐ(ಎಂ) ನಿರಂತರವಾಗಿ ಲೋಕಪಾಲ ವ್ಯವಸ್ಥೆಯನ್ನು ಮತ್ತು ರಾಜ್ಯಗಳಲ್ಲಿ ಲೋಕಾಯುಕ್ತ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಲೇ ಬಂದಿದೆ.

ಮಹತ್ವದ ನ್ಯೂನ್ಯತೆಗಳು

ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಸಂಬಂಧಪಟ್ಟ ಹಲವು ಪ್ರಶ್ನೆಗಳನ್ನು, ಈ ಸಾಂಸ್ಥಿಕ ವ್ಯವಸ್ಥೆ ಸ್ವತಂತ್ರವಾಗಿರುವುದರ ಬಗ್ಗೆ, ತನಿಖಾ ಸಂಸ್ಥೆ ಸಿಬಿಐನ ಸ್ವಾಯತ್ತ ಅಧಿಕಾರವ್ಯಾಪ್ತಿಯ ಬಗ್ಗೆ ಎದ್ದ ಪ್ರಶ್ನೆಗಳನ್ನು ಈ ಶಾಸನದಲ್ಲಿ ಬಹುಮಟ್ಟಿಗೆ ಪರಿಗಣಿಸಲಾಗಿದ್ದರೂ ಕೆಲವು ಮಹತ್ವದ ನ್ಯೂನ್ಯತೆಗಳು ಇನ್ನೂ ಇವೆ. ಅವನ್ನು ಭವಿಷ್ಯದಲ್ಲಿ ತುರ್ತಾಗಿ ನಿವಾರಿಸಬೇಕಾಗಿದೆ.

ಮೊದಲನೆಯದಾಗಿ, ಭ್ರಷ್ಟಾಚಾರದ ವಿರುದ್ಧ ಸಮರದಲ್ಲಿ ಯಶಸ್ವಿಯಾಗಬೇಕಾದರೆ, ಲೋಕಪಾಲ ವ್ಯವಸ್ಥೆಯ ಸ್ಥಾಪನೆಯ ಜೊತೆ-ಜೊತೆಯಾಗಿಯೇ ಇನ್ನೂ ಇತರ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂಬುದನ್ನು ಒತ್ತಿ ಹೇಳಬೇಕಾಗಿದೆ.

ಭ್ರಷ್ಟಾಚಾರ ಎಂದರೆ ಏನು ಎಂಬುದರ ನಿರೂಪಣೆ ಈಗ 1988ರ ಭ್ರಷ್ಟಾಚಾರ ನಿಗ್ರಹ ಕಾನೂನಿನಲ್ಲಿ ಖಾಸಗಿ ಗಳಿಕೆ ಅಥವ ಸಮೃದ್ಧಿಗಾಗಿ ಸಾರ್ವಜನಿಕ ಅಧಿಕಾರದ ದುರ್ಬಳಕೆ ಎಂದು ಬಹಳ ಸೀಮಿತವಾಗಿದೆ. ಅದನ್ನು ವಿಸ್ತರಿಸಲು ತಿದ್ದುಪಡಿ ತರಬೇಕಾಗಿದೆ.

ಹಲವು ಸಂದರ್ಭಗಳಲ್ಲಿ ಅಧಿಕಾರವನ್ನು ಒಂದು ಖಾಸಗಿ ಕಂಪನಿ ಮುಂತಾದವುಗಳಿಗೆ ಪ್ರಯೋಜನ ಒದಗಿಸಲು ದುರುಪಯೋಗ ಪಡಿಸಿಕೊಳ್ಳಲಾಗುತ್ತದೆ. ಆದರೆ ಇದು 1988ರ ಕಾನೂನಿನಲ್ಲಿ ನಿರೂಪಿಸಿರುವ 'ವ್ಯಕ್ತಿ'ಯ ವ್ಯಾಪ್ತಿಗೆ ಬರುವುದಿಲ್ಲ. ಬಹಳ ಸಲ, ಲಂಚ ಎಂಬುದನ್ನು, ಹಣ ನುಂಗಿ ಹಾಕಿದ್ದನ್ನು ಪತ್ತೆ ಹಚ್ಚಲು ಆಗುವುದಿಲ್ಲ. ಆದರೆ ದೇಶದ ಖಜಾನೆಗೆ ಅಪಾರ ನಷ್ಟವಾಗಿರುತ್ತದೆ ಮತ್ತು ಸಾರ್ವಜನಿಕ ವಿಶ್ವಾಸದ ಉಲ್ಲಂಘನೆಯಾಗಿರುತ್ತದೆ; ಉದಾ: ಅಧಿಕಾರವನ್ನು ಉದ್ದೇಶಪೂರ್ವಕವಾಗಿಯೇ ದುರುಪಯೋಗ ಪಡಿಸಿಕೊಂಡು ಸಾರ್ವಜನಿಕ ವಲಯದ ಘಟಕಗಳ ಮಾರಾಟದ ಮೂಲಕ.

ಭ್ರಷ್ಟಾಚಾರದ ನಿರೂಪಣೆಯನ್ನು "ಕಾನೂನುಗಳನ್ನು ಅಥವ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ವ್ಯಕ್ತಿ ಅಥವ ಕಾಯಕ್ಕೆ ಉದ್ದೇಶಪೂರ್ವಕವಾಗಿ ಅನರ್ಹ ಪ್ರಯೋಜನವನ್ನು ಕೊಡುವುದು ಅಥವ ಯಾವುದೇ ಸಾರ್ವಜನಿಕ ಸೇವಕನಿಂದ ಅನರ್ಹ ಪ್ರಯೋಜನವನ್ನು ಪಡೆಯುವುದು " ಎಂದು ವಿಸ್ತರಿಸಬೇಕಾಗಿದೆ.



ಕೃಪೆ: ಬಾಮುಲಾಹಿಜಾ.ಕಾಂ

ಭ್ರಷ್ಟಾಚಾರ ನಿಗ್ರಹ ಕಾನೂನಿಗೆ ತಿದ್ದುಪಡಿ ತರುವ ಒಂದು ಪ್ರತ್ಯೇಕ ಮಸೂದೆಯನ್ನು ತರುವುದು ಸಂಸತ್ತಿನ ಎರಡೂ ಸದನಗಳ ವ್ಯವಹಾರದ ಪಟ್ಟಿಯಲ್ಲಿ ಇದೆ ಎಂದು ಸದನದಲ್ಲಿ ಸರಕಾರ ಭರವಸೆ ನೀಡಿತು. ಆದರೆ ಸರಕಾರ ಇಂತಹ ಒಂದು ಅಗತ್ಯವನ್ನು ಒಪ್ಪಿಕೊಂಡಿರುವಾಗ ಪ್ರಸಕ್ತ ಲೋಕಪಾಲ ಮಸೂದೆಯನ್ನು ತಿದ್ದುಪಡಿ ಮಾಡಿ ಅದರ ವ್ಯಾಪ್ತಿಯಲ್ಲಿ ಒಂದು ಸರಕಾರಿ ಕಾಂಟ್ರಾಕ್ಟ್ ಪಡೆಯುವುದಕ್ಕಾಗಲೀ ಅಥವ ಟೆಂಡರ್ ಹಾಕುವುದಕ್ಕಾಗಲೀ ಭ್ರಷ್ಟ ವಿಧಾನಗಳನ್ನು ಅನುಸರಿಸಿರುವ ಆಪಾದನೆಗಳಿರುವ ಖಾಸಗಿ ಕಾಯಗಳನ್ನು ತರಬೇಕು ಎಂದು ತರ್ಕ ಮುಂದಿಟ್ಟಿತು.

ಹಣಬಲ, ಭುಜಬಲಕ್ಕೆ ತಡೆ

ಅಲ್ಲದೆ ಲಂಚದ ಫಲಿತಾಂಶ ಎಂದು ಕಾಣಲಾಗುವ ಸಾರ್ವಜನಿಕ ಖಾಸಗಿ ಪಾಲುದಾರಿಕೆ(ಪಿಪಿಪಿ)ಯ ಯೋಜನೆಗಳನ್ನು ಇದರ ವ್ಯಾಪ್ತಿಗೆ ತರಬೇಕು ಎಂದು ಸಿಪಿಐ(ಎಂ) ಒಂದು ನಿರ್ದಿಷ್ಟ ತಿದ್ದುಪಡಿಯನ್ನು ತಂದು ಅದರ ಮೇಲೆ ಮತದಾನ ನಡೆಯಬೇಕು ಎಂದು ಕೇಳಿತು. ಆದರೆ ಇದಕ್ಕೆ ಸೋಲುಂಟಾಯಿತು. ಏಕೆಂದರೆ ಸಂಸತ್ತಿನ ಎರಡೂ ಪ್ರಮುಖ ಪಕ್ಷಗಳು ತಮಗೆ ನಿಧಿಗಳನ್ನು ಪೂರೈಸುವ ಮೂಲಗಳನ್ನು ರಕ್ಷಿಸಿಕೊಳ್ಳಲು ಕೈಜೋಡಿಸಿದವು. ಹಣ ಪೂರೈಕೆಯ ಭಾಗವನ್ನು, ಅಂದರೆ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ನಿಧಿ ನೀಡಿಕೆಯನ್ನು ಲೋಕಪಾಲದ ಪರೀಕ್ಷಣೆಗೆ ಒಳಪಡಿಸದಿದ್ದರೆ ಭ್ರಷ್ಟಾಚಾರವನ್ನು ನಿಗ್ರಹಿಸುವುದು ಎಂದೂ ಸಾಧ್ಯವಿಲ್ಲ. ಲೋಕಪಾಲದ ಸ್ಥಾಪನೆಯೊಂದಿಗೇ ಚುನಾವಣೆಗಳಲ್ಲಿ ಹಣ ಬಲ ಮತ್ತು ಭುಜಬಲದ ವಿಪರೀತ ಬಳಕೆಯನ್ನು ನಿಗ್ರಹಿಸುವ ಗುರಿಯುಳ್ಳ ತೀವ್ರಗಾಮಿ ಚುನಾವಣಾ ಸುಧಾರಣೆಗಳನ್ನೂ ತರದೆ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ವಾದಿಸುತ್ತ ಬಂದಿದೆ.

ಸಿಪಿಐ(ಎಂ) ಒಂದು ನಿರ್ದಿಷ್ಟ ತಿದ್ದುಪಡಿಯನ್ನು ತಂದು ಅದರ ಮೇಲೆ ಮತದಾನ ನಡೆಯಬೇಕು ಎಂದು ಕೇಳಿತು. ಆದರೆ ಇದಕ್ಕೆ ಸೋಲುಂಟಾಯಿತು. ಏಕೆಂದರೆ ಸಂಸತ್ತಿನ ಎರಡೂ ಪ್ರಮುಖ ಪಕ್ಷಗಳು ತಮಗೆ ನಿಧಿಗಳನ್ನು ಪೂರೈಸುವ ಮೂಲಗಳನ್ನು ರಕ್ಷಿಸಿಕೊಳ್ಳಲು ಕೈಜೋಡಿಸಿದವು.

ಅಲ್ಲದೆ, ಸದ್ಯಕ್ಕೆ ಯಾವುದೇ ಭ್ರಷ್ಟ ಆಚರಣೆಗೆ ಸಂಬಂಧಪಟ್ಟಂತೆ ಸಂಸತ್ತಿನ ಸದಸ್ಯರ ತಪಾಸಣೆ ದುರ್ಬಲವಾಗಿದೆ ಮತ್ತು ಅತೃಪ್ತಿಕರವಾಗಿದೆ. ಸಂಸತ್ತಿನ ಸದಸ್ಯರಿಗೆ ಸಂವಿಧಾನದ ಕಲಮು 105 ವಾಕ್ ಸ್ವಾತಂತ್ರ್ಯ ಹಾಗೂ ಮತದಾನಕ್ಕೆ ಸಂಬಂಧಪಟ್ಟಂತೆ ರಕ್ಷಣೆ ನೀಡುತ್ತದೆ. ಇಲ್ಲಿರುವ ನಿಜವಾದ ಪ್ರಶ್ನೆ ಈ ಸ್ವಾತಂತ್ರ್ಯ ಮತ್ತು ರಕ್ಷಣೆಯನ್ನು ಸಂಸತ್ತಿನ ಸದಸ್ಯರ ಭ್ರಷ್ಟ ಕ್ರಿಯೆಗಳಿಗೆ ವಿಸ್ತರಿಸದಂತೆ ಮಾಡುವುದು ಹೇಗೆ ಎಂಬುದು.

ಕಲಮು 105ಕ್ಕೆ ಸಂವಿಧಾನದ ಕೆಲಸದ ಪರಾಮರ್ಶೆಯ ರಾಷ್ಟ್ರೀಯ ಆಯೋಗ ಶಿಫಾರಸು ಮಾಡಿರುವಂತೆ ಒಂದು ತಿದ್ದುಪಡಿ ತರುವ ಮೂಲಕ ಇದನ್ನು ಮಾಡಬಹುದು.

ಇನ್ನೊಂದು ಅಂಶವನ್ನು ಇಲ್ಲಿ ಪರಿಗಣಿಸಬೇಕಾಗಿದೆ. ಯಾವುದೇ ಸಂಸತ್ ಸದಸ್ಯ ಭ್ರಷ್ಟ ಕ್ರಿಯೆಯಲ್ಲಿ ತೊಡಗಿದ್ದು ಅದು ಸಂಸತ್ತಿನಲ್ಲಿ ಆತನ ಅಥವ ಆಕೆಯ ಕ್ರಿಯೆಗೆ(ಮತದಾನ, ಭಾಷಣ ಇತ್ಯಾದಿ) ಕಾರಣವಾಗಿದ್ದರೆ, ಆಗ ಈ ಕ್ರಿಯೆ ಭ್ರಷ್ಟಾಚಾರ ನಿಗ್ರಹ ಕಾನೂನಿನ ಮತ್ತು ಭಾರತೀಯ ದಂಡ ಸಂಹಿತೆ(ಐಪಿಸಿ)ಯ ಅಡಿಯಲ್ಲಿ ಬರಬೇಕು. 2008ರಲ್ಲಿ ಸಂಸತ್ತನ್ನು ನಡುಗಿಸಿದ 'ಓಟಿಗಾಗಿ ನೋಟು' ಹಗರಣದ ಹಿನ್ನೆಲೆಯಲ್ಲಿ ಇದು ಇನ್ನೂ ಹೆಚ್ಚು ಅಗತ್ಯವೆನಿಸಿದೆ. ಯುಪಿಎ-1 ಸರಕಾರ ಏಕಪಕ್ಷೀಯವಾಗಿ ಭಾರತ-ಅಮೆರಿಕಾ ಪರಮಾಣು ವ್ಯವಹಾರವನ್ನು ನಡೆಸಿದಾಗ ಎಡಪಕ್ಷಗಳು ಬೆಂಬಲವನ್ನು ಹಿಂದೆಗೆದುಕೊಂಡವು. ಅದನ್ನು ಅನುಸರಿಸಿ ಸರಕಾರ ಸಂಸತ್ತಿನಲ್ಲಿ ಎದುರಿಸಬೇಕಾಗಿ ಬಂದ ವಿಶ್ವಾಸ ಠರಾವನ್ನು ಖರೀದಿಸಿದ ಹಗರಣ ಅದು.

ಭ್ರಷ್ಟಾಚಾರವನ್ನು ಎದುರಿಸಬೇಕಾದರೆ ಕಾನೂನುಬಾಹಿರ ಚಟುವಟಿಕೆಗಳ ಮಾಹಿತಿ ನೀಡುವವರ ರಕ್ಷಣೆ ಅತ್ಯಗತ್ಯ. ಇಂತಹ ರಕ್ಷಣೆ ಲೋಕಪಾಲದ ಕೆಲಸದ ಒಂದು ಭಾಗವಾಗಬಹುದು. ಆದರೆ ಇದಕ್ಕೆ ಒಂದು ಸಮಗ್ರ ಕಾನೂನಿನ ಬೆಂಬಲ ಬೇಕಾಗುತ್ತದೆ. ಇಂತಹ ಒಂದು ಮಸೂದೆಯನ್ನು ರಾಜ್ಯಸಭೆ ಚರ್ಚಿಸಿ ಅಂಗೀಕರಿಸಬೇಕು ಎಂದು ಪಟ್ಟಿಯಲ್ಲಿ ಸೇರಿತ್ತು. ಆದರೆ ದುರದೃಷ್ಟವಶಾತ್ ಅದನ್ನು ಲೋಕಪಾಲ್ ಮಸೂದೆಯೊಂದಿಗೆ ಕೈಗೆತ್ತಿಕೊಳ್ಳಲಿಲ್ಲ. ಈ ಮಸೂದೆಯನ್ನು ತುರ್ತಾಗಿ ಶಾಸನವಾಗಿ ಮಾಡಬೇಕಾಗಿದೆ. ಅದೇ ವೇಳೆಗೆ ಸಾರ್ವಜನಿಕ ಹಿತಾಸಕ್ತಿ ಪ್ರಕಟಣೆ(ಮಾಹಿತಿ ರಕ್ಷಣೆ) ಮಸೂದೆ, 2010ನ್ನು ಬಲಪಡಿಸಿ ಬೇಗನೇ ಅಂಗೀಕರಿಸಬೇಕಾಗಿದೆ.

ಇನ್ನೂ ಬಹಳಷ್ಟು ಮಾಡಬೇಕು

ಒಂದು ಬಲಿಷ್ಟ, ಪರಿಣಾಮಕಾರಿ ಲೋಕಪಾಲದ ಸ್ಥಾಪನೆಯಲ್ಲದೆ, ಭ್ರಷ್ಟಾಚಾರದ ವಿರುದ್ಧ ಸಮರವನ್ನು ಪ್ರಾಮಾಣಿಕವಾಗಿ ಕೈಗೆತ್ತಿಕೊಳ್ಳಬೇಕಾದರೆ ಈ ಕೆಳಗಿನ ಆರು ಸಲಹೆಗಳನ್ನು ಜಾರಿ ಮಾಡಬೇಕಾಗಿದೆ ಎಂದು ಸಿಪಿಐ(ಎಂ) ಮುಂದಿಟ್ಟಿದೆ:

1. ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ರಚಿಸಿ ನ್ಯಾಯಾಂಗದ ವರ್ತನೆಯನ್ನು ಅದರ ವ್ಯಾಪ್ತಿಗೆ ತರಬೇಕು.
2. ಸಾರ್ವಜನಿಕ ದೂರು ಪರಿಹಾರಕ್ಕೆ ನಾಗರಿಕ ಸನ್ನದನ್ನು ರಕ್ಷಿಸುವ ಕಾನೂನು.
3. ಸಂಸತ್ ಸದಸ್ಯರನ್ನು ಭ್ರಷ್ಟಾಚಾರ-ವಿರೋಧಿ ತಪಾಸಣೆಯ ಅಡಿಗೆ ತರಲು ಸಂವಿಧಾನದ ಕಲಮು 105ರ ತಿದ್ದುಪಡಿ.
4. ಚುನಾವಣೆಗಳಲ್ಲಿ ಹಣಬಲ ಮತ್ತು ಕ್ರಿಮಿನಲ್‌ಗಳ ಪಾತ್ರವನ್ನು ತಡೆಯಲು ಚುನಾವಣಾ ಸುಧಾರಣೆಗಳು.
5. ರಾಜ್ಯಮಟ್ಟದಲ್ಲಿ ಸಾರ್ವಜನಿಕ ಸೇವಕರ

ಪುಟ 15 ಕ್ಕೆ

ದೇಶದ 12.5 ಕೋಟಿ ಅರ್ಜಿದಾರರಲ್ಲಿ ಶೇ. 33 ಜನರಿಗೆ ಮಾತ್ರ ಉದ್ಯೋಗ ರಾಜ್ಯದಲ್ಲಿ ಕೂಲಿಗೆ ನಿಗದಿಯಾದ ಹಣದ ಅರ್ಧದಷ್ಟು ಮಾತ್ರ ಕೂಲಿಗೆ ಕಾಯಕ ಗುಂಪುಗಳು ಮತ್ತು ಕಾಯಕ ಬಂಧುಗಳ ರಾಜ್ಯಮಟ್ಟದ ಸಮಾವೇಶದಲ್ಲಿ
– ಎ. ವಿಜಯ ರಾಘವನ್ ವಿಷಾದ

ಉದ್ಯೋಗ ಖಾತ್ರಿ: ಕಾಯಕ ಬಂಧುಗಳ ಸಮಾವೇಶ.



ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ಕಳೆದ ವರ್ಷ 1,440 ಕೋಟಿ ರೂ. ಕೊಡಲಾಗಿತ್ತು. ಈ ಮೊತ್ತ ಹಿಂದಿನ ವರ್ಷ 1,640 ಕೋಟಿ ಇತ್ತು. ಅಂದರೆ ಯೋಜನೆಗೆ ಹಣ ಹೆಚ್ಚುವ ಬದಲಿಗೆ 200 ಕೋಟಿ ಹಣವನ್ನು ಕೇಂದ್ರ ಸರ್ಕಾರ ಕಡಿಮೆ ಮಾಡಿತು. ಯೋಜನೆಯ ಮಾರ್ಗದರ್ಶಿ ನಿಯಮಗಳ ಪ್ರಕಾರ– ಒಟ್ಟು ಹಣದಲ್ಲಿ 60 ಶೇ. ಕೂಲಿಗಾಗಿಯೇ ವೆಚ್ಚ ಮಾಡಬೇಕು. ಆದರೆ ಕರ್ನಾಟಕದಲ್ಲಿ ಶೇ. 70 ರಷ್ಟು ಹಣ ಇತರ ಉದ್ದೇಶಗಳಿಗೆ ಖರ್ಚಾಗಿದೆ. ಕೂಲಿಕಾರರ ಕೂಲಿಗಾಗಿ ಕೇವಲ ಶೇ. 30 ರಷ್ಟು ಮಾತ್ರ ಹಣ ಖರ್ಚಾಗಿದೆ. ಕಳೆದ ವರ್ಷ ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಯೋಜನೆಗೆ 1.39 ಲಕ್ಷ ಕೋಟಿ ರೂಪಾಯಿಗಳನ್ನು ನೀಡಿರುವುದಾಗಿ ಪ್ರಕಟಿಸಿತ್ತು. ಆದರೆ ಇದರಲ್ಲಿ 53 ಸಾವಿರ ಕೋಟಿ ರೂಪಾಯಿಗಳನ್ನು ಬಳಸಲೇ ಇಲ್ಲ. ದೇಶದಲ್ಲಿ 12.5 ಕೋಟಿ ಜನ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಕೇಳಿ ಅರ್ಜಿ ಸಲ್ಲಿಸಿದ್ದರೆ ಅವರಲ್ಲಿ 4.16 ಕೋಟಿ ಜನರಿಗೆ ಮಾತ್ರ ಉದ್ಯೋಗ ಸಿಕ್ಕಿದೆ. ಅಂದರೆ ಶೇ. 33 ಜನರಿಗೆ ಮಾತ್ರ ಉದ್ಯೋಗ ದೊರೆತಿದೆ. ಕೆಲಸ ಸಿಕ್ಕವರಲ್ಲೂ ಕೂಡ ಸರಾಸರಿ 33 ದಿನಗಳಷ್ಟು ಉದ್ಯೋಗವನ್ನು ಮಾತ್ರ ಪಡೆದಿದ್ದಾರೆ ಎಂದು ಮಾಜಿ ರಾಜ್ಯಸಭಾ ಸದಸ್ಯರೂ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಎ. ವಿಜಯ ರಾಘವನ್ ಹೇಳಿದರು.



ಅವರು ಡಿಸೆಂಬರ್ 16 ರಂದು ಬೆಂಗಳೂರು ನಗರದ ಸೆನೆಟ್ ಹಾಲ್‌ನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದ ಕುರಿತು 'ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ'ದ ನೇತೃತ್ವದಲ್ಲಿ ನಡೆದ ಕಾಯಕ ಗುಂಪುಗಳು ಮತ್ತು ಕಾಯಕ ಬಂಧುಗಳ ರಾಜ್ಯಮಟ್ಟದ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಪಾರ್ಲಿಮೆಂಟಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಬಗೆಗೆ ಚರ್ಚೆಯಾಗುವಾಗ ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಯನ್ನು ಅಲ್ಲಿನ ರಾಜ್ಯ ಸರ್ಕಾರಗಳು ಘೋಷಿಸಿರುವ ಕನಿಷ್ಠ ಕೂಲಿಯಷ್ಟು ನೀಡಲಾಗುವುದು ಎಂದು ಹೇಳಿತ್ತು. ಆದರೆ ಸರ್ಕಾರ ಈ ನೀತಿಯನ್ನು ಜಾರಿ ಮಾಡದೇ ಹಿಂದಕ್ಕೆ ಸರಿದಿದೆ.

ಉದ್ಯೋಗ ಖಾತ್ರಿ ಯೋಜನೆ ಬೆಲೆ ಏರಿಕೆಗೆ ಕಾರಣವಾಗಿದೆ ಎಂಬ ಅಪಪ್ರಚಾರ ನಡೆಯುತ್ತಿದೆ. ಅವಶ್ಯಕ ವಸ್ತುಗಳ ಬೆಲೆ ಏರಿಕೆಯಾಗಲು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮುಂತಾದವುಗಳ ಬೆಲೆಯನ್ನು ಪದೇ ಪದೇ ಏರಿಸುವ ಮನಮೋಹನ್ ಸರ್ಕಾರದ ನೀತಿಗಳೇ ಕಾರಣ. ಮನಮೋಹನ ಸಿಂಗ್ ಅವರು ಮಾತೇ ಆಡುವುದಿಲ್ಲ. ಅವರನ್ನು 'ಮೌನ ಮೋಹನ ಸಿಂಗ್' ಎಂದೂ ಕರೆಯುತ್ತಾರೆ. ಇತ್ತೀಚೆಗೆ ನಾಲ್ಕು ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ಫಲಿತಾಂಶ ಬಂದಿದೆ. ಜನತೆ ಮನಮೋಹನ್ ಸರ್ಕಾರದ ನೀತಿಗಳ ಬಗೆಗೆ ತೀರ್ಪು ಕೊಟ್ಟಿದ್ದಾರೆ. ಈ ಬಗೆಗೆ ಸೋನಿಯಾ ಗಾಂಧಿ, ಪತ್ರ ಓದುತ್ತಾರೆ. ರಾಹುಲ್ ಗಾಂಧಿ ಪತ್ರ ಓದುತ್ತಾರೆ. ಆದರೆ ಮನಮೋಹನ ಸಿಂಗ್ ಮಾತನಾಡುವುದಿಲ್ಲ. ಡಿಸೆಲ್, ಪೆಟ್ರೋಲ್, ಬೆಲೆ ಏರಿಸುವ ಬಗೆಗೆ ಹೇಳಲು ಮಾತ್ರ ಅವರು ಬಾಯಿ ತೆರೆಯುತ್ತಾರೆ ಎಂದು ವಿಜಯ ರಾಘವನ್ ಕೇಂದ್ರ ಸರ್ಕಾರದ ನೀತಿಗಳನ್ನು ಟೀಕಿಸಿದರು.

ಭ್ರಷ್ಟತೆ–ವಂಚನೆ ಬಗೆಗೆ ಕ್ರಮ ವಹಿಸಿ
– ಜಿ.ಎನ್. ನಾಗರಾಜ್

ಆರಂಭದಲ್ಲಿ ಜಿ.ಎನ್. ನಾಗರಾಜ್ ಅವರು ಪ್ರಸ್ತಾವಿಕವಾಗಿ ಮಾತನಾಡಿ ಉದ್ಯೋಗ ಖಾತ್ರಿ ಯೋಜನೆಯನ್ನು ನಮ್ಮ ದೇಶದ ಅಭಿವೃದ್ಧಿ ಖಾತ್ರಿ ಯೋಜನೆ ಎಂದು ಗ್ರಾಮೀಣ ಅಭಿವೃದ್ಧಿ ಖಾತ್ರಿ ಯೋಜನೆಯೆಂದು ಪರಿಗಣಿಸಬೇಕಿತ್ತು. ಆದರೆ ಈ ವಿಷಯದಲ್ಲಿ ಕೂಲಿಕಾರರು ಉದ್ಯೋಗದ ಭಿಕ್ಷೆ ಕೇಳುವವರು, ಅಧಿಕಾರಿಗಳು ಉದ್ಯೋಗ ಭಿಕ್ಷೆ ನೀಡುವವರು ಎಂಬಂತಾಗಿದೆ.

ಉದ್ಯೋಗವನ್ನು ಹಕ್ಕು ಎನ್ನುವಂತಹ ಯಾವುದೇ ಕಾಯ್ದೆ ಹಿಂದೆ ಇರಲಿಲ್ಲ. ಉದ್ಯೋಗದ ಮೂಲಭೂತ ಹಕ್ಕು ಎನ್ನುವಂತಹ ಐತಿಹಾಸಿಕ ಕಾಯ್ದೆ ಇದು. ಮೊದಲ ಒಂದೆರೆಡು ವರ್ಷ ಅಧಿಕಾರಿಗಳು ಇದರಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲ ಎಂದುಕೊಂಡು ಅಷ್ಟಿಷ್ಟು ಜಾರಿಮಾಡುತ್ತಿದ್ದರು. ಯೋಜನೆಯ ಜಾರಿಯ ಅನುಭವ ಬಂದ ಮೇಲೆ ಕಾಯ್ದೆಯನ್ನು ಯಾವ ರೀತಿ ದುರುಪಯೋಗಪಡಿಸಿಕೊಳ್ಳಬಹುದು, ಭ್ರಷ್ಟಾಚಾರ ಮಾಡುವುದು ಹೇಗೆಂದು ಕಲಿತಿದ್ದಾರೆ. ಹಣ ವೆಚ್ಚವಾಗಿದೆ. ಆದರೆ ಯಂತ್ರೋಪಕರಣಗಳಿಗೆ ಮತ್ತು ಗುತ್ತಿಗೆದಾರರರಿಗೆ ಹಣ ಹೋಗುತ್ತಿದೆ. ಕೂಲಿಕಾರರು ಪ್ರಶ್ನೆ ಮಾಡದಂತೆ ಬೆದರಿಸುವುದು, ಕಾರ್ಡ್ ಕಿತ್ತಿಟ್ಟುಕೊಳ್ಳುವುದು ನಡೆದಿದೆ. ಜೊತೆಗೆ ಹಿಂದಿನ ಬಿಜೆಪಿ ಸರ್ಕಾರದ ಅಧಿಕಾರಸ್ಥರ ತಾತ್ಸಾರ ಮನೋಭಾವದಿಂದ ಯೋಜನೆ ಸಮರ್ಪಕವಾಗಿ ಜಾರಿಯಾಗಲಿಲ್ಲ. ಈಗ ಸರ್ಕಾರದ ಬದಲಾಗಿದೆ. ಈ ಯೋಜನೆಯನ್ನು ವ್ಯಾಪಕವಾಗಿ ಜಾರಿಗೊಳಿಸುವುದು ಹೇಗೆ ಎಂದು ಸರ್ಕಾರ ಗಂಭೀರವಾಗಿ ಗಮನ ನೀಡಬೇಕು ಎಂದು ಸಮಸ್ಯೆಗಳನ್ನು ವಿವರಿಸಿದರು.

ದಲಿತರು, ಮಹಿಳೆಯರಿಗೆ ವ್ಯಾಪಕ ಉದ್ಯೋ
ನೀಡಲು ಅವಕಾಶವಿರುವ ಯೋಜನೆ
ಜಾರಿಯಿಂದ ಆರ್ಥಿಕ ಪ್ರಗತಿ ಮಾತ್ರ
ಸಾಮಾಜಕ ಪ್ರಗತಿ ಕೂಡ ಸಾಧ್ಯ. ದಲಿತ
ಕೃಷಿಕೂಲಿಕಾರರ ಆರ್ಥಿಕ ಸಧೃತೆ ಸಾಧಿಸ
ಮೂಲಕ ಸಾಮಾಜಿಕ ಪರಿವರ್ತನೆಗೆ ಕಾ
ಣಗುತ್ತದೆ ಎಂಬ ನಿರೀಕ್ಷೆ ಇಟ್ಟುಕೊಳ್ಳಲಾಗಿರ
ಯೋಜನೆಯಲ್ಲಿ ಕೂಲಿಕಾರರು ಹತ್ತ
ಸಾರಿ ಹೋದರೂ ವಾಪಸ್ ಕಳಿಸುವು
ಕೆಲಸ ಕೊಡಲೇಬೇಕಾಗಿ ಬಂದರೆ, ಹೋ
ಜಾಗದಲ್ಲಿ ಕೆಲಸ ಕೊಡುವುದು, ಕಲ್ಲುಬ
ಒಡೆಯುವ ಕಠಿಣ ಕೆಲಸ ಕೊಡುವು
ಕೆಲಸ ಮಾಡಿದರೆ ಬೇಕೆಂತಲೇ ತಪ
ಅಳತೆ ಮಾಡುವುದು. ಅಳತೆ ಮಾಡ
ಇಂಜಿನೀಯರುಗಳು ಬರಲು ಸತಾಯಿಸುವು
ನಾಲ್ಕು ತಿಂಗಳು–ಆರು ತಿಂಗಳು ಕೆಲ
ಪ್ರಕರಣಗಳಲ್ಲಿ 2 ವರ್ಷವಾದರೂ ಕೂ
ಕೊಡದಿರುವುದು ನಡೆಯುತ್ತಿದೆ. ಪ್ರಯಾ
ಭತ್ಯೆ ಕೊಡದಿರುವುದು ನಡೆಯುತ್ತಿದೆ. ಬೇ
ಕಾಲದಲ್ಲಿ ಮಣ್ಣು ಗಟ್ಟಿಯಾಗುತ್ತದೆ.
ಕೆಲಸದ ಪ್ರಮಾಣ ರಿಯಾಯಿತಿ ನೀಡಬೇ
ನೀರಾವರಿ ಪ್ರದೇಶದಲ್ಲಿ ನೀರಾವರಿ ಕಾಲು
ಕೆರೆಗಳ ಹೂಳು ತೆಗೆಯುವ ಕೆಲಸ ತ
ಹಾಕಲಾಗಿದೆ. ಅರಣ್ಯ ಸಸಿ, ತೋಟಗ
ಸಂಬಂಧಿಸಿದ ಕೆಲಸಗಳನ್ನು ಯೋಜನೆಯ
ಸೇರಿಸಿ ಕೂಲಿಕಾರರಿಗೂ ಮತ್ತು ಅಂಗವಿಕಲರ
ಕೂಡ ಕೆಲಸ ಕೊಡಬೇಕು ಎಂದು ಜಿ.ಎ
ನಾಗರಾಜ್ ಬೇಡಿಕೆಗಳ ಕುರಿತು ವಿವರಿಸಿದರು

ಹೊಸ ಕೆರೆ ಕಟ್ಟುತ್ತವೆ ಎಂದರೂ ಅಧಿಕಾರಿಗ
ತಯಾರಾಗುತ್ತಿಲ್ಲ. ನೂರು ದಿನ ಕೆಲಸ ಕೊಡ
ಪಿಡಿಓಗಳ ಮೇಲೆ ಕೂಲಿ ನೀಡದ ಅಧಿಕಾರಿಗ
ಮೇಲೆ ಕ್ರಮವಹಿಸಬೇಕು. ಕೂಲಿಕಾರ
'ಸಹಾಯವಾಣಿ' ಸರಿಯಾಗಿ ಕೆಲಸ ಮಾಡುತ್ತಿ
ಅದು ಕೆಲಸ ಮಾಡುವಂತಾಗಬೇಕು. ದಿನ
ಕನಿಷ್ಠ 300 ರೂ. ಕೂಲಿ ನಿಗದಿ ಮಾಡಬೇ
ಎಂದು ಸರ್ಕಾರವನ್ನು ಜಿ. ಎನ್. ನಾಗರಾಜ
ಒತ್ತಾಯಿಸಿದರು.

ಕೃಷಿ ಕೂಲಿಕಾರರ ಸಂಘವು ತಾನ
ಸ್ಥಾಪನೆಯಾದ ಕಾಲದಿಂದಲೂ ಅಂ
ದರೆ 1982 ಇಸವಿಯಿಂದಲೂ ದೇಶದ
ಉದ್ಯೋಗ ಖಾತ್ರಿಗಾಗಿ ಪ್ರಶ್ನೆಯನ
ಎತ್ತುತ್ತಾ ಬಂದಿದೆ. 1996ರಲ್ಲಿ ಖಮ್ಮಂನ
ಅಖಿಲ ಭಾರತ ಸಮ್ಮೇಳನದಲ್ಲಿ ಸಹ
ವಿಷಯವಾಗಿ ವಿಶೇಷವಾದ ಚರ್ಚೆಯಾ
ಕೂಲಿಕಾರರು ಕೂಲಿಹೆಚ್ಚಳ ಮತ್ತಿತರ ಆರ್ಥಿ
ಬೇಡಿಕೆಗಳ ಜೊತೆಗೆ ಸರ್ಕಾರಗಳ ನೀತಿಗಳಿಗ
ಸಮಸ್ಯೆಗಳಿಗೂ ಇರುವ ಸಂಬಂಧವನ
ಅರ್ಥ ಮಾಡಿಕೊಂಡು ರಾಜಕೀಯ ಜಾಗೃ
ಬೆಳೆಸಿಕೊಳ್ಳಬೇಕು ಎಂದೂ ಜಿ.ಎನ್. ನಾಗರಾಜ
ಹೇಳಿದರು.

ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟನೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ
ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ
ಟಿ.ಎಂ. ವಿಜಯ ಭಾಸ್ಕರ್ ಅವರು ವೇದಿಕೆಯ
ಮೇಲೆ ಕುಂಡದಲ್ಲಿದ್ದ ಗಿಡಕ್ಕೆ ನೀರು ಹಾಕುವ
ಮೂಲಕ ಸಮಾವೇಶವನ್ನು ಉದ್ಘಾಟಿಸಿದರು
ಆ ನಂತರ ಸಮಾವೇಶವನ್ನು ಉದ್ದೇಶಿ
ಮಾತನಾಡಿದ ವಿಜಯ ಭಾಸ್ಕರನ್ ಅವರು
ಉದ್ಯೋಗ ಖಾತ್ರಿ ಯೋಜನೆಯಲ್ಲಿ ದಿನಕ್ಕೆ 174
ರೂ. ಕೂಲಿ ಕೊಡಲಾಗುತ್ತಿದೆ. ಗಂಡು–ಹೆಣ್ಣು
ಒಬ್ಬರಿಗೂ ಸಮಾನ ಕೂಲಿ ನೀಡಲಾಗು
ಸರ್ಕಾರ 62 ತಾಲ್ಲೂಕುಗಳನ್ನು ಬರಪೀ
ಪ್ರದೇಶವೆಂದು ಘೋಷಿಸಿದೆ. ಬರ ಇದ್ದೆಡೆ 150
ದಿನ ಕೆಲಸ ನೀಡಲಾಗುತ್ತದೆ. ಈ ವರ್ಷದಲ್ಲಿ

ವೈಯುಕ್ತಿಕ ಕಾಮಗಾರಿಗೂ ಅವಕಾಶ ಮಾಡಿಕೊಡಲಾಗಿದೆ. ಪಂಚಾಯ್ತಿಯು ಬಜೆಟ್ ಒಳಗೆ ಆಗದು ಎಂದು ಹೇಳುವಂತಿಲ್ಲ. ಹೊಲಗದ್ದೆಗಳ ಬದು, ಬಾವಿ, ಮಾವಿನ ಗಿಡ, ರೇಷ್ಮೆ ಗಿಡ ಹಾಕಿಸುವುದು ಮುಂತಾದವಕ್ಕೂ ಹೆಚ್ಚುವರಿಯಾಗಿ ಕ್ರಿಯಾ ಯೋಜನೆ ಮಾಡಿ ಎಂದು ಪಂಚಾಯ್ತಿಗಳಿಗೆ ಸೂಚಿಸಲಾಗಿದೆ. ತೋಟಗಾರಿಕೆ ಮಾಡಿದರೆ 3 ವರ್ಷ ನರ್ಸರಿಗಳ ಪೋಷಣೆ ಖರ್ಚು ನೀಡಲು, ಜಮೀನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶ ಸೃಷ್ಟಿಸಲಾಗಿದೆ. ಸಾಮೂಹಿಕ ಜಮೀನಿನಲ್ಲಿ 'ನಮ್ಮ ಹೊಲ-ನಮ್ಮ ದಾರಿ'ಗೆ, ಕಣ ನಿರ್ಮಾಣಕ್ಕೆ, ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2 ಕೆರೆ ನಿರ್ಮಾಣ ಮಾಡಲು ಅವಕಾಶ ನೀಡಲಾಗಿದೆ. ಕುರಿದೊಡ್ಡಿ, ದನದ ಕೊಟ್ಟಿಗೆ ಕಟ್ಟಿಕೊಳ್ಳಲು ಅವಕಾಶ ಮಾಡಲಾಗಿದೆ. ಪ್ರಸಕ್ತ ವರ್ಷ 1162 ಕೋಟಿ ಹಣ ವೆಚ್ಚವಾಗಿದೆ. ಪ್ರತಿದಿನ 13 ಕೋಟಿ ವೆಚ್ಚವಾಗುತ್ತಿದೆ. ಉದ್ಯೋಗ ಖಾತ್ರಿ ಯೋಜನೆಯ ಮೂಲಕ 6 ಲಕ್ಷ ಶೌಚಾಲಯ ನಿರ್ಮಾಣದ ಗುರಿ ಇದೆ. ಒಂದು ಶೌಚಾಲಯ ನಿರ್ಮಾಣದಲ್ಲಿ ಒಟ್ಟು 4500 ರೂ. ಕೂಲಿ ನೀಡಲು ಅವಕಾಶವಿದೆ. 2.60 ಶೌಚಾಲಯಗಳ ನಿರ್ಮಾಣ ಈಗಾಗಲೇ ಆಗಿವೆ. ರಾಜ್ಯದಲ್ಲಿ 53 ಲಕ್ಷ ಜಾಬ್ ಕಾರ್ಡ್‌ಗಳಿವೆ. ಪ್ರತಿದಿನ 5 ಲಕ್ಷ ಜನ ಕೆಲಸ ಮಾಡುತ್ತಿದ್ದಾರೆ. ಕಾಯಕ ಗುಂಪು, ಕಾಯಕ ಸಂಘ, ಕಾಯಕ ಬಂಧುವನ್ನು ನೇಮಿಸಿ. ಎಸ್. ಎಂ. ಎಸ್. ಮೂಲಕ ಎಷ್ಟು ಜನಕ್ಕೆ ಕೆಲಸಬೇಕು ಎಂಬ ಮಾಹಿತಿ ದಾಖಲೆ ಆಗುವಂತೆ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಹಲವೆಡೆ ಕೂಲಿಕಾರರಿಗೆ ಕೆಲಸ ಕೊಟ್ಟಿಲ್ಲ. ಸಮಯಕ್ಕೆ ಸರಿಯಾಗಿ ಕೂಲಿ ಕೊಟ್ಟಿಲ್ಲ. ಅವ್ಯವಹಾರ ಆಗಿದೆ. ಕೆಲಸ ಮಾಡದ ಕಡೆ ಕೂಲಿ ಪಾವತಿ ಮಾಡದಿರುವುದು, ಯಂತ್ರಗಳ ಮೂಲಕ ಕೆಲಸ ಮಾಡಿರುವುದು. ಹಣ ಸೋರಿಕೆ ಆಗಿರುವುದು ಮುಂತಾದವುಗಳ ಕುರಿತು ದೂರುಗಳಿವೆ. ಈ ಬಗೆಗೆ ಪರಿಶೀಲನೆ ಮಾಡುತ್ತೇವೆ. ನಿಮ್ಮ ಬೇಡಿಕೆಗಳಲ್ಲಿ ನೈಜ ಸಮಸ್ಯೆ ಇವೆ. ಕೂಲಿಕಾರರಿಗೆ ಪ್ರಯಾಣ ಭತ್ಯೆ ನೀಡಲು ಈಗಿನ ದೂರದ ಮಿತಿಯನ್ನು 5 ಕಿ.ಮೀ.ನಿಂದ 3 ಕಿ.ಮೀ.ಗೆ ಇಳಿಸುವ ಬಗೆಗೆ, ಕೆಲಸಗಳಲ್ಲಿ ಬಳಸಲಾಗುವ ಸಲಕರಣೆಗಳಿಗೆ ಭತ್ಯೆ ನೀಡುವ ಕುರಿತು ಪರಿಶೀಲಿಸಲಾಗುವುದು ಎಂದು ವಿಜಯ ಭಾಸ್ಕರ್ ಇದೇ ಸಂದರ್ಭದಲ್ಲಿ ಭರವಸೆ ನೀಡಿದರು. ಸಮಸ್ಯೆಗಳು ಮತ್ತು ಬೇಡಿಕೆಗಳ ಬಗೆಗೆ ಅಧಿಕಾರಿಗಳ ಮತ್ತು ಸಂಘದ ಪದಾಧಿಕಾರಿಗಳ ಸಭೆ ಕರೆದು ಮಾತನಾಡಿ ಇತ್ಯರ್ಥ ಪಡಿಸುತ್ತೇವೆ ಎಂದು ವಿಜಯ ಭಾಸ್ಕರ್ ಭರವಸೆ ನೀಡಿದರು.

ರಾಜ್ಯದ ನಾನಾ ಜಿಲ್ಲೆಗಳಿಂದ ಕಾಯಕ ಬಂಧುಗಳು ಮತ್ತು ಕಾಯಕ ಗುಂಪುಗಳ ಸದಸ್ಯರು ಹಾಗೂ ಕೃಷಿಕೂಲಿಕಾರರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಅವರು ವಿಜಯಭಾಸ್ಕರ್ ಅವರ ಸಮ್ಮುಖದಲ್ಲಿ ಉದ್ಯೋಗ ಖಾತ್ರಿ ವಿಷಯದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿವರಿಸಿದರು.

ಸಂಘಟನೆಯ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದ ಅಧಿಕಾರಗಳ ಮಟ್ಟದಲ್ಲಿ ಚರ್ಚೆ-ಮಾತುಕತೆಗಳ



ಮೂಲಕ ಪ್ರಯತ್ನಿಸುವಾಗಲೇ ಎಲ್ಲ ಸಮಸ್ಯೆಗಳು ಇಷ್ಟರಿಂದಲೇ ಬಗೆಹರಿಯುತ್ತವೆಂದು ಭಾವಿಸಬಾರದು. ಕೃಷಿ ಕೂಲಿಕಾರರ ಸಂಘವು ಹೋರಾಟದಲ್ಲಿ ನೆಂಬಿಕೆ ಇಟ್ಟಿರುವ ಸಂಘಟನೆ. ಸಂಘಟಿತರಾಗುವುದು ಮತ್ತು ನ್ಯಾಯಕ್ಕಾಗಿ ಹೋರಾಟ ಮಾಡುವುದರಿಂದ ಮಾತ್ರವೇ ಸಮಸ್ಯೆಗೆ ಪರಿಹಾರ ಸಿಗಲು ಸಾಧ್ಯ. ಚಳುವಳಿಯಲ್ಲಿ ಹೆಚ್ಚು ಹೆಚ್ಚು ಜನರು ಭಾಗವಹಿಸಿದಲ್ಲಿ ಸರ್ಕಾರಗಳು ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸುತ್ತವೆ, ಇಲ್ಲವಾದಲ್ಲಿ ಇಲ್ಲ. ಪ್ರತಿಯೊಂದು ನೊಂದಾಯಿತ ಕುಟುಂಬಕ್ಕೆ ವರ್ಷದಲ್ಲಿ 100 ದಿನ ಕಡ್ಡಾಯವಾಗಿ ಕೆಲಸ ಕೊಡಬೇಕು ಹಾಗೂ ಇದುವರೆಗೆ ಕೂಲಿ ಹಣ ಸಂದಾಯಮಾಡದೆ ಬಾಕಿ ಇರುವ ಎಲ್ಲ ಪ್ರಕರಣಗಳನ್ನು ಪರಿಶೀಲಿಸಿ ಎಲ್ಲ ಅರ್ಹ ಕೆಲಸಗಾರರಿಗೆ ಅವರ ಬಾಕಿ ಕೂಲಿ ಹಣವನ್ನು ಪಾವತಿ ಮಾಡಬೇಕೆಂದು ಒತ್ತಾಯಿಸಿ ಬರುವ ಜನವರಿ ತಿಂಗಳಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮತ್ತು ತಾಲೂಕು ಪಂಚಾಯತಿ ಮಟ್ಟದಲ್ಲಿ ಹೋರಾಟಗಳನ್ನು ಏರ್ಪಡಿಸುವ ಪ್ರಸ್ತಾವವನ್ನು ಅವರು ಸಭೆಯ ಮುಂದೆ ಇಟ್ಟಾಗ



ಎಲ್ಲರೂ ಕರತಾಡನದೊಂದಿಗೆ ಸರ್ವಾನುಮತದ ಅನುಮೋದನೆ ನೀಡಿದರು. ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ ಆರಂಭದಲ್ಲಿ ಸ್ವಾಗತಿಸಿದರು. ಉಪಾಧ್ಯಕ್ಷರುಗಳಾದ ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿದರು. ಎಂ. ಪುಟ್ಟಮಾದು ವಂದಿಸಿದರು.

ಮುಖ್ಯ ಹಕ್ಕೊತ್ತಾಯಗಳು

1982ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘವು ಕೃಷಿ ಕೂಲಿಕಾರರಿಗೆ ವರ್ಷದಲ್ಲಿ ಕನಿಷ್ಠ 150 ದಿನಗಳ ಕೆಲಸವನ್ನು ಸರ್ಕಾರವೇ ಒದಗಿಸಬೇಕೆಂಬ ಬೇಡಿಕೆಯನ್ನು ಎತ್ತಿದ ಮೊಟ್ಟ ಮೊದಲ ಸಂಘಟನೆಯಾಗಿದೆ. ಅದೊಂದು ಯೋಜನೆ ಮಾತ್ರ ಆಗಿರದೆ ಅದೊಂದು ಕಾಯ್ದೆಯಾಗಿ ಜಾರಿಗೆ ಬರಬೇಕೆಂದು ಹೋರಾಟ ಮಾಡುತ್ತಾ ಬಂದಿರುವ ನಮ್ಮ ಸಂಘಟನೆಯ ಬೇಡಿಕೆ ಈಡೇರಿದ್ದು 2006 ರಲ್ಲಿ.

ಕರ್ನಾಟಕದಲ್ಲಿ ಯೋಜನೆಯನ್ನು ಜಾರಿಗೆ ತರಲು ನಮ್ಮ ಸಂಘ ಆರಂಭದಿಂದಲೇ ವಿಶೇಷ ಗಮನ ಕೊಡುತ್ತಾ ಬಂದಿದೆ. ಯೋಜನೆಯನ್ನು ಅನುಷ್ಠಾನಗೊಳಿಸಲು ಶ್ರಮಿಸುತ್ತಿದ್ದ ಅನೇಕ ನಮ್ಮ ಕಾರ್ಯಕರ್ತರು ಗ್ರಾಮೀಣ ಪಟ್ಟಭದ್ರರಿಂದ ಅನೇಕ ಸಲ ಹಲ್ಲೆಗೊಳಗಾಗಿದ್ದಾರೆ. ಆದರೂ ನಮ್ಮ ಕಾರ್ಯಕರ್ತರು ಹಿಂದೆ ಸರಿಯದೆ, ತಾಳ್ಮೆಯಿಂದ ತಮ್ಮ ಕೆಲಸವನ್ನು ಮುಂದುವರೆಸಿದ್ದಾರೆ.

ಕಾಯಕ ಸಂಘಗಳಲ್ಲಿ ಸಂಘಟಿತರಾಗುತ್ತಿರುವ ಗ್ರಾಮೀಣ ಕೂಲಿಕಾರರು ಮತ್ತು ಅವರನ್ನು ಸಂಘಟಿಸುತ್ತಿರುವ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಎದುರಿಸುತ್ತಿರುವ ಕೆಲವು ಮುಖ್ಯ ಸಮಸ್ಯೆಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು.

1. ಕಾಯಕ ಸಂಘಗಳ ಕೂಲಿಕಾರರು ಫಾರ್ಮ ನಂ 6ರಲ್ಲಿ ಸಲ್ಲಿಸುವ ಅರ್ಜಿಯಲ್ಲಿ ಕೇಳಿಕೊಂಡ ದಿನದಿಂದ ಅವರಿಗೆ ಕೆಲಸ ಒದಗಿಸಲಾಗುವುದಿಲ್ಲ. ಕೆಲಸಕ್ಕಾಗಿ ಅನೇಕ ಬಾರಿ ಗ್ರಾಮ ಪಂಚಾಯತಿ ಆಫೀಸಿಗೆ ಅಲೆದಾಡ ಬೇಕಾಗುತ್ತದೆ. ಕೆಲಸಕ್ಕಾಗಿ ಗ್ರಾಮ ಪಂಚಾಯತಿ ಆಫೀಸ್ ಎದುರು ಧರಣಿ ಮುಷ್ಕರ ನಡೆಸಬೇಕಾಗುತ್ತದೆ. ಇಷ್ಟು ಮಾಡಿದ ನಂತರವೂ ಕೆಲಸ ಸಿಗದಿದ್ದರೆ ಕೂಲಿಕಾರರು ಸಹಜವಾಗಿ ಉದ್ಯೋಗ ಖಾತ್ರಿ ಯೋಜನೆಯ ವಿಷಯದಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಾರೆ. ಈ ಸಮಸ್ಯೆಗೆ ಪರಿಹಾರ ಇಲ್ಲವೇ?
2. ಕೆಲಸಕ್ಕಾಗಿ ಅರ್ಜಿಸಲ್ಲಿಸಲಾದ 15 ದಿನಗಳ ಒಳಗಾಗಿ ಕೆಲಸವನ್ನು ಒದಗಿಸದಿದ್ದರೆ ಕಾಯ್ದೆ ಪ್ರಕಾರ ಕೊಡಬೇಕಾದ ನಿರುದ್ಯೋಗ ಭತ್ಯೆ ಪಾವತಿಯಾಗುತ್ತಿಲ್ಲ. ಇದಕ್ಕಾಗಿ ಧರಣಿ ಸತ್ಯಾಗ್ರಹದಂತಹ ಹೋರಾಟಗಳನ್ನು ಮಾಡಿದರೂ ಪ್ರಯೋಜನವಾಗುತ್ತಿಲ್ಲ. ಇದರಿಂದಾಗಿ ಕೂಲಿಕಾರರಿಗೆ ಈ ಯೋಜನೆಯ ಕುರಿತು ವಿಶ್ವಾಸವೇ ಇಲ್ಲದಂತಾಗಿದೆ.
3. ಮಾಡಿದ ಕೆಲಸಕ್ಕೆ ಸರಿಯಾಗಿ ಕೂಲಿ ಹಣ ಸಂದಾಯ ಆಗುವುದಿಲ್ಲ. ಮಾಡಿದ ಕೆಲಸದ ಅಳತೆಯ ವಿಷಯದಲ್ಲಿ ತಕರಾರು ತೆಗೆದು ಕೂಲಿ ಹಣವನ್ನು ಕಡಿತ ಮಾಡಲಾಗುತ್ತದೆ. ಇದರಿಂದ ಕೂಲಿಕಾರರಿಗೆ ಉದ್ಯೋಗ ಖಾತ್ರಿ ಕೆಲಸದ ಬಗ್ಗೆ ಆಸಕ್ತಿ ಕಡಿಮೆಯಾಗುತ್ತದೆ.
4. ಮಾಡಿದ ಕೆಲಸಕ್ಕೆ ಸಕಾಲದಲ್ಲಿ ಕೂಲಿ ಹಣ ಸಂದಾಯ ಆಗುವುದಿಲ್ಲ. ಕೂಲಿ ಹಣ ತಡವಾಗಿ ಸಂದಾಯವಾದಾಗ ದಿನಕ್ಕೆ 20 ರೂ. ದರದಲ್ಲಿ ಪರಿಹಾರ ನೀಡಬೇಕೆಂಬ ನಿರ್ದೇಶನ ಜಾರಿಯಾಗಿಲ್ಲ.
5. ಮಾಡಿದ ಕೆಲಸಕ್ಕೆ ಕೂಲಿ ಹಣ ಸಂದಾಯವಾಗದೆ ಬಾಕಿ ಇರುವ ಇದುವರೆಗಿನ ಎಲ್ಲ ಪ್ರಕರಣಗಳನ್ನು ಪರಿಶೀಲನೆಗೆ ಒಳಪಡಿಸಿ ಅರ್ಹ ಕೆಲಸಗಾರರಿಗೆ ಅವರ ಕೂಲಿ ಹಣವನ್ನು ಸಂದಾಯ ಮಾಡಬೇಕು.
6. ದೂರದ ಕೆಲಸಕ್ಕೆ ಹೋಗಬೇಕಾಗುವ ಕೆಲಸಗಾರರಿಗೆ ಸರಿಯಾಗಿ ಪ್ರಯಾಣ ಭತ್ಯೆ ನೀಡಲಾಗುತ್ತಿಲ್ಲ. ದೂರದ ಮಿತಿಯನ್ನು 5 ಕಿ.ಮೀ. ಯಿಂದ 3 ಕಿ.ಮೀ.ಗೆ ಇಳಿಸಬೇಕು. ಸಲಕರಣೆಗಳ ಭತ್ಯೆ ಕೊಡುವುದನ್ನು ಮುಂದುವರೆಸಬೇಕು.



7. ಕಾಯಕ ಬಂಧುಗಳಿಗೆ ಹೆಚ್ಚುವರಿಯಾಗಿ ಕೊಡಬೇಕಾದ ಪ್ರೋತ್ಸಾಹಧನ ಇದುವರೆಗೂ ಪಾವತಿ ಮಾಡಿರುವುದಿಲ್ಲ.
8. ಕೆಲಸದ ಸಮಯದಲ್ಲಿ ಅಫಘಾತ ಸಂಭವಿಸಿದಾಗ ವೈಧ್ಯಕೀಯ ಚಿಕಿತ್ಸೆ ಪಡೆಯುವ ಬಗೆ ಹೇಗೆ? ಪರಿಹಾರ ಪಡೆಯುವುದು ಹೇಗೆ?
9. ಕೆಲಸಗಾರರಿಗೆ ನಿಗದಿಪಡಿಸಿದ ಕೆಲಸವನ್ನು ಅವರು ಮುಗಿಸಿದ ನಂತರ ಮನೆಗೆ ತೆರಳಲು ಕೆಲವು ಕಡೆ ಅನುಮತಿ ಕೊಡಲಾಗುತ್ತಿಲ್ಲ. ಇಂತಹ ಕಾರ್ಮಿಕ ವಿರೋಧಿ ಧೋರಣೆಯನ್ನು ನಿಲ್ಲಿಸಬೇಕು.
10. ಯೋಜನೆಯ ಅಡಿಯಲ್ಲಿ ಅಂಗವಿಕಲರಿಗೂ, ವಯೋವೃದ್ಧರಿಗೂ ಕೆಲಸ ಮಾಡಲು ಸಾಧ್ಯವಾಗುವಂತೆ ಸರಳವಾದ ಕೆಲಸಗಳನ್ನು ನಿಗದಿಪಡಿಸಬೇಕು.
11. ಬೇಸಿಗೆಯ ದಿನಗಳಲ್ಲಿ ಮಣ್ಣು ಗಟ್ಟಿಯಾಗಿರುವುದರಿಂದ ಕೆಲಸದ ಕನಿಷ್ಠ

ಪುಟ 14 ಕ್ಕೆ

ರಾಮನಗರ – ಬೆಂಗಳೂರು ಗ್ರಾಮಾಂತರ : ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು ನಿರಂತರ

ನಮ್ಮ ಸಮಾಜದಲ್ಲಿ ಹೆಣ್ಣಿನ ಮೇಲೆ ಎಷ್ಟೋ ಅನಾಗರೀಕ ದೌರ್ಜನ್ಯಗಳು ನಡೆಯುತ್ತಿವೆ. ಇದು ನಿಜಕ್ಕೂ ಮಾನವೀಯ ಸಮಾಜ ತಲೆತಗ್ಗಿಸುವಂತದ್ದು. ದೇಶ-ಭಾಷೆ-ಜಾತಿ-ಮತ-ಅಂತಸ್ತು ಯಾವುದೇ ಇರಲಿ ಅತ್ಯಾಚಾರ ಯಾವ ಹೆಣ್ಣಿನ ಮೇಲೂ ಆಗಬಾರದು. ಅದೊಂದು ಘೋರ ಅನ್ಯಾಯ.

ಅತ್ಯಾಚಾರ-ದೌರ್ಜನ್ಯಕ್ಕೆ ತುತ್ತಾದವರು ಬಡವರಾದರೆ ಸಾಮಾಜಿಕವಾಗಿ ಶೈಕ್ಷಣಿಕ ಅವಕಾಶವಂಚಿತ ಸಮುದಾಯದವರಾದರೆ ಎಷ್ಟೋ ಸಾರಿ ಅವರು ಆ ಬಗ್ಗೆ ಮಾತನಾಡುವುದೂ ಕಷ್ಟವಾಗುತ್ತದೆ. ಅವರು ನ್ಯಾಯ ಪಡೆಯಲು ನಾನಾ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗುತ್ತದೆ.

ದಲಿತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ:

ಸಿಗಲಿ-ಹೊಸ ಭವಿಷ್ಯ ರೂಪಿಸುವಂತಹ ಪರಿಹಾರ

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಕನ್ನಮಂಗಲ ಎಂಬ ಗ್ರಾಮದ ಬಡ ಬಾಲಕಿಯ ಮೇಲೆ 6 ಜನ ಯುವಕರು ನವೆಂಬರ್ 12, 2013 ರಂದು ಅತ್ಯಾಚಾರವೆಸಗಿದರು. ಘಟನೆಯು ಅತ್ಯಂತ ಮೊದಲೇ ಯೋಜಿಸಿದ್ದು ಎಂಬುದು ಸ್ಪಷ್ಟವಾಗಿತ್ತು.

ಅತ್ಯಾಚಾರಕ್ಕೆ ಒಳಗಾದ ವಿದ್ಯಾರ್ಥಿನಿಯು ಪರಿಶಿಷ್ಟ ಜಾತಿಗೆ ಸೇರಿದ ಅತ್ಯಂತ ಬಡ ಕೃಷಿ ಕಾರ್ಮಿಕರ ಕುಟುಂಬದ ಹೆಣ್ಣು ಮಗಳು. ಈ ಘಟನೆಯಿಂದ ದೈಹಿಕ ಮಾನಸಿಕ ಅಘಾತವಲ್ಲದೇ ಆಕೆಯ ವಿದ್ಯಾಭ್ಯಾಸಕ್ಕೆ ಅಡ್ಡಿಯಾಯಿತು. ಆಕೆ ಮತ್ತು ಆಕೆಯ ಕುಟುಂಬದವರು ಸಂಕಷ್ಟಕ್ಕೆ ಒಳಗಾದರು.

ಈ ಹಿನ್ನೆಲೆಯಲ್ಲಿ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಅತ್ಯಾಚಾರ ಘಟನೆ ಖಂಡಿಸಿ ಮತ್ತು ಸಂತ್ರಸ್ತ ಬಾಲಕಿ ತನ್ನ ಬದುಕನ್ನು ಉತ್ತಮ ರೂಪಿಸಿಕೊಳ್ಳಲು ಅಗತ್ಯವಾದ ನೆರವು ನೀಡಲು ಒತ್ತಾಯಿಸಿ ದೊಡ್ಡಬಳ್ಳಾಪುರದ .. .. ಬಳಿ .. ..ರಂದು ಪ್ರದರ್ಶನ ನಡೆಸಲಾಯಿತು. ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಆರ್. ಚಂದ್ರತೇಜಸ್ವಿ ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್ ಬೆಂಗಳೂರು ಜಿಲ್ಲಾಧ್ಯಕ್ಷ ಮುನಿರಾಜು.ಎಂ ಮಾತನಾಡಿದರು. ಸಿಪಿಐ(ಎಂ) ಪಕ್ಷದ ತಾಲ್ಲೂಕು ಸಮಿತಿ ಕಾರ್ಯದರ್ಶಿ ಹೇಮಂತ್‌ರಾಜ್, ದಲಿತ ಹಕ್ಕುಗಳ ಸಮಿತಿಯ ಅಧ್ಯಕ್ಷರಾದ ಅಂಜನಾಮೂರ್ತಿ ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಉಪಾಧ್ಯಕ್ಷ ಯುವರಾಜ್ ಹಾಜರಿದ್ದರು. ವಿದ್ಯಾರ್ಥಿನಿಯರು, ಗ್ರಾಮಸ್ಥರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪ್ರಕರಣದ ಸಂಬಂಧ 6ಜನ ಅತ್ಯಾಚಾರದ ಆರೋಪಿಗಳನ್ನು ಬಂಧಿಸಲಾಗಿದೆ. ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗುವುದಕ್ಕೆ ಬೇಕಾದ ಎಲ್ಲಾ ಸಾಕ್ಷ್ಯಾಧಾರಗಳನ್ನು ಕಲೆಹಾಕಿ ಕಾನೂನು ರೀತ್ಯ ಕ್ರಮಗಳನ್ನು ಬಿಗಿಯಾದ ಕೈಗೊಳ್ಳಲು ಈ ಸಂದರ್ಭದಲ್ಲಿ ಆಗ್ರಹಿಸಲಾಯಿತು.

ರಾಜ್ಯದಲ್ಲಿ ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳಲ್ಲಿ ಶೇ.3ರಷ್ಟು ಜನರಿಗೆ ಮಾತ್ರ ಶಿಕ್ಷೆಯಾಗಿರುತ್ತದೆ. ದಕ್ಷಿಣ ಭಾರತದಲ್ಲಿಯೇ ಕರ್ನಾಟಕದಲ್ಲಿ ದಲಿತರ



ಅತ್ಯಾಚಾರ-ದೌರ್ಜನ್ಯಕ್ಕೆ ತುತ್ತಾದವರು ಬಡವರಾದರೆ ಸಾಮಾಜಿಕವಾಗಿ ಶೈಕ್ಷಣಿಕ ಅವಕಾಶವಂಚಿತ ಸಮುದಾಯದವರಾದರೆ ಎಷ್ಟೋ ಸಾರಿ ಅವರು ಆ ಬಗ್ಗೆ ಮಾತನಾಡುವುದೂ ಕಷ್ಟವಾಗುತ್ತದೆ. ಅವರು ನ್ಯಾಯ ಪಡೆಯಲು ನಾನಾ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗುತ್ತದೆ.

ಮೇಲಿನ ದೌರ್ಜನ್ಯ ಪ್ರಕರಣಗಳು ಅತಿ ಹೆಚ್ಚು ನಡೆದಿವೆ ಎಂದು ರಾಜ್ಯ ಎಸ್.ಸಿ/ಎಸ್.ಟಿ. ಕಮೀಷನ್ ವರದಿ ಮಾಡಿದೆ. ಆದ್ದರಿಂದ ಮುಂದೆ ಇಂತಹ ಪ್ರಕರಣಗಳು ಮರುಕಳಿಸದ ರೀತಿಯಲ್ಲಿ ಪೋಲಿಸ್ ಇಲಾಖೆ ಜಾಗೃತೆ ವಹಿಸಬೇಕೆಂದು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪರಿಹಾರ ಕ್ರಮಗಳು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಕೇಂದ್ರ ಸರ್ಕಾರ ನೀಡುವ 1 ಲಕ್ಷ 20 ಸಾವಿರ ರೂಪಾಯಿಗಳನ್ನು ತಕ್ಷಣ ನೀಡಬೇಕು. ರಾಜ್ಯ ಸರ್ಕಾರ ಕನಿಷ್ಠ 5ಲಕ್ಷ ಪರಿಹಾರ ಘೋಷಿಸಬೇಕು. ದಲಿತರ ಮೇಲಿನ ದೌರ್ಜನ್ಯಗಳನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ಕಾಯ್ದೆಯನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಬೇಕು.

ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕೂಡಲೇ ಎಸ್.ಸಿ/ಎಸ್.ಟಿ ಕಾಯ್ದೆಯ ಪರಿಣಾಮಕಾರಿ ಜಾರಿಯ ಕುರಿತಾಗಿ ಚರ್ಚಿಸಲು ತಕ್ಷಣ ಸಭೆ ಕರೆಯಬೇಕು. ಇಂತಹ ಪ್ರಕರಣಗಳ ಮೊಕದ್ದಮೆಗಳನ್ನು ನಡೆಸಲು ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಎಂಬ ಬೇಡಿಕೆಗಳನ್ನು ಸಹ ಒತ್ತಾಯಿಸಲಾಗಿದೆ.

ನೆರವು:

ಸಂತ್ರಸ್ತ ಬಾಲಕಿಯ ವಿದ್ಯಾಭ್ಯಾಸಕ್ಕಾಗಿ ನೆರೆಯ ಪ್ರದೇಶದ ವಸತಿ ಶಾಲೆಯಲ್ಲಿ ಸೌಕರ್ಯ ಕಲ್ಪಿಸಲಾಗುವುದು ಎಂದು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ತಿಳಿಸಿದರು. ಬಾಲಕಿಯ ಮನೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿ ನೀಡಿದರು. ಬಾಲಕಿಯ ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಮಧ್ಯಂತರ ಪರಿಹಾರವಾಗಿ 60 ಸಾವಿರ ರೂಪಾಯಿಗಳನ್ನು ನೀಡಲಾಗಿದೆ ಎಂದು ವರದಿಯಾಗಿದೆ.

ಮಾಗಡಿ: ದಲಿತ ಮಹಿಳೆಯ ದೇವಸ್ಥಾನ ಪ್ರವೇಶ– ಮುಳ್ಳಿನ ರಾಶಿಯ ಮೇಲೆ ಉರುಳಾಡಿಸಿ ಶಿಕ್ಷೆ

ಇದು ಸುಮಾರು ಎರಡು ವರ್ಷಗಳ ಹಿಂದೆ ನಡೆದ ಘಟನೆ. ಆದರೆ ಇತ್ತೀಚೆಗೆ ಬಯಲಾಗಿದೆ. ದಲಿತರ ಮೇಲೆ ನಡೆಯುವ ಕ್ರೂರ ದೌರ್ಜನ್ಯಗಳನ್ನು ಹೇಗೆ ಮುಚ್ಚಿ ಹಾಕಲಾಗಿರುತ್ತದೆ ಎಂಬುದಕ್ಕೆ ಈ ಘಟನೆಯೇ ಒಂದು ಸಾಕ್ಷಿಯಾಗಿದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಸೋಲೂರು ಹೋಬಳಿಯಲ್ಲಿ ಮಲ್ಲಿಗುಂಟೆ ಅಂತ ಒಂದು ಊರು. ಅದರಲ್ಲಿ ತಿಮ್ಮಕ್ಕ ಅಂತ ಒಬ್ಬ ದಲಿತ ಮಹಿಳೆ. ಅವರ ಮಗ ರಾಮಾಂಜನಿಗೆ ಎರಡೂ ಮೂತ್ರಪಿಂಡಗಳೂ ವಿಫಲವಾಗಿ ತೊಂದರೆಯಲ್ಲಿದ್ದ. ಗ್ರಾಮದಿಂದ ಸು. ಐದಾರು ಕಿ.ಮೀ. ದೂರದಲ್ಲಿರುವ ಕಳ್ಳಿಪಾಳ್ಯ ಎಂಬ ಊರಿನ 'ಭಕ್ತ ಮುನೇಶ್ವರ' ದೇವಾಲಯದಲ್ಲಿ ಪೂಜೆ ಸಲ್ಲಿಸಿದರೆ ಮಗನ ಕಾಯಿಲೆ ವಾಸಿಯಾಗಬಹುದು ಎಂಬ ನಂಬಿಕೆಯಿಂದ ಮುಗ್ಧ ಭಕ್ತೆ ತಿಮ್ಮಕ್ಕ ಆ ದೇವಸ್ಥಾನಕ್ಕೆ ಹೋಗಿದ್ದಾರೆ. ಅಲ್ಲಿನ ಪೂಜಾರಿಯನ್ನು ದೇವಾಲಯದ ಒಳಗೆ ಹೋಗಿ ಪೂಜೆ ಮಾಡಬಹುದೇ ಎಂದು ಕೇಳಿದರಂತೆ. ಪೂಜಾರಿಯು ಆ ಮಹಿಳೆ ದೇವಾಲಯದ ಒಳಗೆ ಹೋಗಿ ಪೂಜೆ ಮಾಡಲು ಒಪ್ಪಿದನಂತೆ.

ನೊಂದ ಮಹಿಳೆ ಮತ್ತು ದೇವರ ನಡುವೆ ದೇವಾಲಯದೊಳಗೆ ಏನು ಸಂಭಾಷಣೆ ನಡೆದಿರಬಹುದು? ಬಹುಶಃ ತನ್ನ ಮಗನಿಗೆ ಯಾಕೆ ಇಂಥ ಶಿಕ್ಷೆ ಕೊಟ್ಟಿದ್ದೀಯಾ ಅಂತ ತಿಮ್ಮಕ್ಕ ದೇವರನ್ನು ಕೇಳಿರಬಹುದು. ಇಲ್ಲ ಮಗನಿಗೆ ಕಾಯಿಲೆ ವಾಸಿಯಾಗಲು ಏನು ಹರಕೆ ಹೊರುತ್ತೇನೆಂದು ಎಂದು ಹೇಳಿಕೊಂಡಿರಬಹುದು.

ತಿಮ್ಮಕ್ಕ ಪೂಜೆ ಮಾಡುವಾಗ ಪೂಜಾರಿ ಹೋಗಿ ಒಂದಷ್ಟು ಊರ ಜನರನ್ನು ಕ-ರೆದುಕೊಂಡು ಬಂದು ದಲಿತ ಮಹಿಳೆಯ ಜಾತಿ ನಿಂದನೆ ಮಾಡಿ ಮಹಿಳೆಯ ಕಪಾ[ಳಕ್ಕೆ] ಹೊಡೆದು ದೌರ್ಜನ್ಯ ನಡೆಸಿದ್ದಾನೆ.

ಮೊದಲೇ ಹತಾಶಳಾಗಿದ್ದ ನೊಂದ ಮ[ಹಿಳೆ] ರೋದಿಸಿ ಒಂದಷ್ಟು ಆವೇಶದ-ನೋವಿನ ಮಾತಾಡಿದರೆ ಮತ್ತೆ "ಮೈಮೇಲೆ ದೇವರು ಬಂತು ಅಂತ ನಾಟಕ ಮಾಡುತ್ತಿಯಾ? .. .. ಜಾತಿಯವಳು. ನಿನ್ನ ಮೈಮೇಲೆ ಯಾವ ದೇವರು ಬರುತ್ತದೆ" ಎಂದು ಮತ್ತೆ ಜಾತಿ ನಿಂದನೆ ಮಾಡಿದ್ದಾನೆ.

ಆ ನಂತರ ದಲಿತ ಮಹಿಳೆಯಾಗಿ ದೇವಸ್ಥಾನದೊಳಗೆ ಪ್ರವೇಶ ಮಾಡಿ ದೇವಸ್ಥಾನವನ್ನು 'ಅಮಂಗಳ'ಗೊಳಿಸಿದ ತಪ್ಪಿ[ಗೆ] ಶಿಕ್ಷೆಯನ್ನೂ ನೀಡಲಾಗಿದೆ.

ಎಂಥ ಶಿಕ್ಷೆ

ಈ ಭಾಗದಲ್ಲಿ ವ್ಯಾಪಕವಾಗಿ ಬೆಳೆಯುವ 'ದಂಡುಗಾರೆ' ಎಂಬ ಮುಳ್ಳು ತರಿಸಿ ಸು. [...]ರಿಂದ 20 ಅಡಿಗಳಷ್ಟು ಹರಡಿ ಅದರ ಮೇ[ಲೆ] ಮಹಿಳೆಯನ್ನು ಉರುಳಾಡಿಸಿದ್ದಾರೆ. ತಿಮ್ಮಕ್ಕನ ಮೈಯೆಲ್ಲಾ ಗಾಯವಾಗಿದೆ.

ಇವೆಲ್ಲಾ ನಡೆಯುವಾಗ ಇನ್ನಷ್ಟು ಜನ ಸೇರಿ ಏನಿದು? ಏನು ನಡೆಯುತ್ತಿದೆ ಇಲ್ಲಿ ? ಅಂತೆಲ್ಲಾ ಸ್ವಲ್ಪ ಅಸಹನೆ ತೋರಿದಾಗ ಏನೋ ಮಾತು ತೇಲಿಸಿ ಈ ದಲಿತ ಮಹಿಳೆ ಮಾಡಿರುವ ತಪ್ಪಿಗೆ ಬೆಂಕಿ ಕೆಂಡದ ಮೇಲೆ ನಡೆಸುವ ಶಿಕ್ಷೆಯನ್ನೇ ಕೊಡಬೇಕಿತ್ತು. ಸದ್ಯ ಇಷ್ಟಕ್ಕೆ ಮುಗಿಸುತ್ತಿದ್ದೇವೆ ಅಂತ ದೌರ್ಜನ್ಯದ ಮೇಲೆ ತೆರೆ ಎಳೆದಿದ್ದಾರೆ.

ಅಪಮಾನ-ದೌರ್ಜನ್ಯದ ಕುರಿತು ಉಸಿರೆತ್ತಲು ಬಲವಿಲ್ಲದ ಮಹಿಳೆಯ ಕುಟುಂ[ಬ] ನೋವು ನುಂಗಿಕೊಂಡು ಕಾಲದೂಡುತ್ತಾ ಬಂದಿದೆ. ಆದರೆ ಮನದೊಳಗೆ ಹೆಪ್ಪುಗಟ್ಟಿದ ನೋವು ಹೋಗೋ ಕೆಲವು ಸಹೃದಯರಿಗೆ ಗೊತ್ತಾಗಿ ವಿಷಯ ಬಹಿರಂಗವಾಗಿದೆ. ಮಾಧ್ಯಮಗಳಲ್ಲೂ ವರದಿಯಾಗಿದೆ. ದೌಜ[ರ್ನ್ಯದ] ವಿರುದ್ಧದ ಒಂದಷ್ಟು ಮಧ್ಯಪ್ರವೇಶ ಮಾಡಿ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಸಿಪಿಐ(ಎಂ) ಪಕ್ಷದ ಜಿಲ್ಲಾ ಮುಖಂಡರಾ[ದ] ಎನ್. ವೆಂಕಟಾಚಲಯ್ಯ, ಪ್ರಾಂತ ರೈತಸಂಘ[ದ] ಮುಖಂಡರಾದ ವನಜಾ, ಜನವಾದಿ ಮಹಿಳಾ ಸಂಘಟನೆಯ ಮತ್ತು ಸಿಪಿಐ(ಎಂ) ದಲಿತ ಹಕ್ಕು ಸಮಿತಿಯ ಮುಖಂಡರಾದ ಸುಜಾತ, ಎಸ್‌ಎಫ್‌ಐ ಜಿಲ್ಲಾ ಮುಖಂಡರಾದ ಚಿಕ್ಕರಾಜ[ು] ಮುಂತಾದವರು ಗ್ರಾಮಕ್ಕೆ ಭೇಟಿ ನೀಡಿ ನೊಂ[ದ] ದಲಿತ ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ.

ಇಂತಹದ್ದು ಇದೊಂದೇ ಪ್ರಕರಣವಲ್ಲ. ಆ ದೇವಾಲಯದ ಪೂಜಾರಿಯ ನಡವಳಿಕೆಯಲ್ಲಿ ಜಾತಿ ನಿಂದನೆ, ಜಾತಿದೌರ್ಜನ್ಯದ ಪ್ರವೃತ್ತಿಗಳಿವೆ ಎಂದು ದೂರುಗಳು ಕೇಳಿ ಬರುತ್ತಿವೆ. ಮುಗ್ಧ ದಲಿತ ಮಹಿಳೆಯನ್ನು ಅಪಮಾನಿಸಿ, ಮುಳ್ಳಿನ ಮೇಲೆ ಹೊರಳಾಡಿಸಿ ಅಮಾನವೀಯ ದೌರ್ಜನ್ಯಕ್ಕೆ ಈಡು ಮಾಡಿದವರಿಗೆ ಶಿಕ್ಷೆಯಾಗುವಂತೆ ಮಾಡಲು ಈಗ ಇರುವ ದಾರಿ ಏನು ಎಂಬ ಪರಿಶೀಲನೆ ನಡೆದಿದೆ.

ಅವರನ್ನು ಪಾರ್ಲಿಮೆಂಟ್‌ನತ್ತ ...
ಅವರ ಆಕ್ರೋಶಕ್ಕೆ [redacted] ಕಾರಣಗಳಿದ್ದವು. ಸಂಬಳದಲ್ಲಿ ಏರಿಕೆ ಇಲ್ಲ. ಆದರೆ ಬೆಲೆಗಳು ಮಾತ್ರ ಯದ್ವಾ ತದ್ವಾ ಏರುತ್ತಿವೆ. ದಿನ ನಿತ್ಯದ ಹೊಟ್ಟೆಪಾಡಿನ ಖರ್ಚುಗಳಿಗೂ ಸಂಬಳ ಏನೇನೂ ಸಾಲದು. ಬೆಲೆಗಳು ಏರಲು ಸರ್ಕಾರವೇ ಕಾರಣವಾಗಿದೆ. ಕನಿಷ್ಠ ಕೂಲಿಯನ್ನೂ ಕೊಡದಿರುವುದು ಸರ್ಕಾರದ ಮೇಲೆ ಅವರು ಕೆಂಡಕಾರುವಂತೆ ಮಾಡಿದೆ. ಸಾಮಾಜಿಕ ಭದ್ರತೆ ಯೋಜನೆಗಳನ್ನು ಕಡಿತಗೊಳಿಸಲಾಗಿದೆ. ಶಾಸನ ಬದ್ಧ ಕಾರ್ಮಿಕರ ಹಕ್ಕುಗಳು ಇದ್ದೂ ಇಲ್ಲದಂತಾಗಿವೆ. ಮನೇಸರದಲ್ಲಿರುವ ಮಾರುತಿ ಕಂಪೆನಿಯ 150 ಉದ್ಯೋಗಿಗಳು ಜಾಮೀನು ಇಲ್ಲದೆ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಆದರೆ,

'ಬಗ್ಗು ಎಂದರೆ ಎಲ್ಲಿಯವರೆಗೆ ಬಗ್ಗುವುದು ??
ಎಚ್ಚರ ..... ನೆಲ ತೋಡಿ ಬಗ್ಗಲಾಗದು !!!

ಪಾರ್ಲಿಮೆಂಟ್ ಮುಂದೆ ದುಡಿಯುವ ಜನರ ಘರ್ಜನೆ

ಆಳುವವರ ದಾಷ್ಟ್ಯಕ್ಕೆ ಮಿತಿಯೇ ಇಲ್ಲ. ಶ್ರೀಮಂತರ ಪರವಾದ ನೀತಿಗಳಿಗೆ ಅಂಕುಶವಿಲ್ಲ. ನಿಜವಾಗಿಯೂ ದೇಶದ ಸಂಪತ್ತು ಸೃಜಿಸುವ ದುಡಿಯುವ ಜನರ ದನಿ ಲೆಕ್ಕಕ್ಕೆ ಇಲ್ಲ. ಇಲ್ಲಿ ಆಡಳಿತವೆಂದರೆ ಭ್ರಷ್ಟತೆ–ನಿಸರ್ಗ ಸಂಪತ್ತಿನ ಲೂಟಿ– ಬಂಡವಾಳಗಾರರ ಓಲೈಸುವಿಕೆಯೇ ಎಲ್ಲ. ಪರಿಸ್ಥಿತಿ ಹೀಗಿರುವಾಗ ದೇಶದ ಕಾರ್ಮಿಕ ವರ್ಗ 'ಏನು ಮಾಡಬಹುದೋ' ಅದನ್ನು ಮಾಡುತ್ತೇನೆಂಬ ಸ್ಪಷ್ಟ ಸಂದೇಶವನ್ನು ಮುಟ್ಟಿದೆ ಈ ಪಾರ್ಲಿಮೆಂಟ್ ಮುತ್ತಿಗೆ.

ದೇಶದ ಹನ್ನೊಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗು ಅನೇಕ ಅಖಿಲ ಭಾರತ ಸಂಘಟನೆಗಳು ಡಿಸೆಂಬರ್ 12, 2013 ರಂದು ಪಾರ್ಲಿಮೆಂಟ್ ಚಲೋ ಕರೆ ಕೊಟ್ಟಿದ್ದವು. ಕಾರ್ಮಿಕರೂ ಸೇರಿದಂತೆ ಇಡೀ ಜನತೆಯ ಜೀವನವನ್ನು ಹಿಂಡುತ್ತಿರುವ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವಂತೆ ಸರ್ಕಾರದ ಗಮನ ಸೆಳೆಯಲು ಕಾರ್ಮಿಕ ಸಂಘಟನೆಗಳಾದ:



ಬಿಎಂಎಸ್, ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಲ್‌ಪಿಎಫ್, ಟಿಯುಸಿಸಿ, ಎಐಸಿಸಿಟಿಯು, ಎಐಯುಟಿಯುಸಿ, ಯುಟಿಯುಸಿ ಮತ್ತು ಸೇವಾರಂಗ, ಅಲ್ಲದೇ ಯಾವುದೇ ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಸೇರ್ಪಡೆ ಹೊಂದದ ಬ್ಯಾಂಕ್, ವಿಮಾ, ಕೇಂದ್ರ ಮತ್ತು ರಾಜ್ಯ ಸರಕಾರಗಳ ನೌಕರರು, ರಕ್ಷಣಾ ಇಲಾಖೆ ನೌಕರರು, ಅಂಚೆ, ವರಮಾನ ತೆರಿಗೆ, ಉಕ್ಕು, ಕಲ್ಲಿದ್ದಲು, ರೈಲ್ವೆ, ದೂರ ಸಂಪರ್ಕ, ಸಾರಿಗೆ ಇಂತಹ ಕ್ಷೇತ್ರಗಳಲ್ಲಿರುವ ಸಂಘಟನೆಗಳು ಒಟ್ಟಾಗಿ ಪಾರ್ಲಿಮೆಂಟ್ ಚಲೋ ಕರೆ ಕೊಟ್ಟಿದ್ದವು.

ಏನು ಕೇಳಿಕೆ

ಬೆಲೆ ಏರಿಕೆ ನಿಯಂತ್ರಣ, ಉದ್ಯೋಗ ಸೃಷ್ಟಿ, ಕಾರ್ಮಿಕ ಕಾನೂನುಗಳ ಅನುಷ್ಠಾನ, ಸಾಮಾಜಿಕ ಭದ್ರತೆ, ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಖಾಸಗಿಕರಣಕ್ಕೆ ವಿರೋಧ, ಖಾಯಂ ಕೆಲಸಗಳನ್ನು ಗುತ್ತಿಗೆ ನೀಡದಂತೆ ಮತ್ತು ಅಲ್ಲಿಯವರೆಗೆ ಗುತ್ತಿಗೆ ಕಾರ್ಮಿಕರಿಗೂ ಸಮಾನ



ವೇತನ, ತಿಂಗಳಿಗೆ 10,000 ರೂಪಾಯಿಗಳ ಕನಿಷ್ಠ ಕೂಲಿ, ಬೋನಸ್, ಭವಿಷ್ಯನಿಧಿ ಮತ್ತು ಗ್ರಾಚ್ಯುಟಿ ಮೊತ್ತದ ಏರಿಕೆ, ಎಲ್ಲರಿಗೂ ನಿವೃತ್ತಿ ವೇತನ, ಮತ್ತು ಕಾರ್ಮಿಕ ಸಂಘಟನೆಗಳ ಕಡ್ಡಾಯ ನೊಂದಣಿಯಂತಹ ಹತ್ತು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ಕಳೆದ ನಾಲ್ಕು ವರ್ಷಗಳಿಂದ ಹಲವಾರು ಹೋರಾಟಗಳು ನಡೆದಿವೆ. ಆದರೂ, ಕೇಂದ್ರ ಸರ್ಕಾರ ಈವರೆಗೆ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ.

ಬಹು ಬಣ್ಣವಣ್ಣ

ದೇಶದ ಎಲ್ಲಾ ರಾಜ್ಯಗಳ ಕಾರ್ಮಿಕರು– ಸಫಾಯಿ ಕರ್ಮಾಚಾರಿಗಳಿಂದ ಹಿಡಿದು ರಕ್ಷಣಾ ಇಲಾಖೆಯ ನೌಕರರವರೆಗೆ– ಮತ್ತು ಜನಸಾಮಾನ್ಯರೂ ಸೇರಿದಂತೆ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಆಕ್ರೋಶ ಪ್ರದರ್ಶಿಸಿದರು. ಅವರು ಕೆಂಪು, ಕೇಸರಿ, ನೀಲಿ, ತ್ರಿವರ್ಣಗಳ ಬಾವುಟ ಹಿಡಿದು ಜೊತೆ ಜೊತೆಗೆ ಹೆಜ್ಜೆ ಹಾಕುತ್ತಾ, ಕಣ್ಣಿಗೆ ಕಟ್ಟುವಂತೆ ಮೆರವಣಿಗೆಯಲ್ಲಿ ಸಾಗುತ್ತಿದ್ದ ದೃಶ್ಯವು, ಭೇದ ಭಾವಗಳನ್ನು ಮೆಟ್ಟಿನಿಂತ ಐಕ್ಯತೆಯ ಪ್ರದರ್ಶನವಾಗಿತ್ತು. ಅನೇಕ ಅಡಚಣೆಗಳಿದ್ದರೂ ಲೆಕ್ಕಿಸದೆ, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಮಹಿಳೆಯರ ಪೈಕಿ ಹಲವರು ಕಂಕುಳಲ್ಲಿ ತಮ್ಮ ಮಕ್ಕಳನ್ನು ಹೊತ್ತು ಮೆರವಣಿಗೆಯಲ್ಲಿ ತೆರಳುತ್ತಿದ್ದ ದೃಶ್ಯಗಳು ಮನ ಮುಟ್ಟುವಂತಿದ್ದವು. ಪ್ರಾದೇಶಿಕ ಸೊಗಡನ್ನು ಹೊತ್ತ ಅವರವರ ಬೇರೆ ಬೇರೆ–ಯಾದ ವೇಷ–ಭೂಷಣಗಳು, ಶೈಲಿ ಮತ್ತು ಭಾಷೆಗಳ ಮೇಳೈಕೆಯು ವೈವಿಧ್ಯತೆಯಲ್ಲಿ ಐಕ್ಯತೆ–ಯ ಜೀವಂತ ಅಭಿವ್ಯಕ್ತಿಯಾಗಿತ್ತು.

ನಡುಗಿಸುವ ಚಳಿಯೂ
ದುಡಿವವರ ಒಡಲ ಉರಿಯೂ

ನಾಗಾಲೋಟದಲ್ಲಿ ಓಡುತ್ತಿರುವ ಬೆಲೆಗಳು ಗಾಯದ ಮೇಲೆ ಬರೆ ಎಳೆದಂತೆ ಜನರನ್ನು



ತತ್ತರಗೊಳಿಸಿವೆ. ಮಡುಗಟ್ಟಿದ್ದ ಅವರ ಆಕ್ರೋಶವು ದೆಹಲಿಯ ಚಳಿಯನ್ನು ಭೇದಿಸಿ

ಈ ವರೆಗೆ ಕಾರ್ಮಿಕ ಕಾನೂನು ಉಲ್ಲಂಘನೆ ಮಾಡಿದ ಯಾವುದೇ ಮಾಲೀಕನನ್ನು ಶಿಕ್ಷಿಸಿಲ್ಲ.

ಬಂದೇವ, ಮತ್ತೆ ನಾವು ಬಂದೇವಾ

ತಮ್ಮ ಐಕ್ಯತೆ ಮತ್ತು ಹೋರಾಟಗಳ ಪರಂಪರೆಯಡಿ ನಡೆದ ಫೆಬ್ರವರಿ 20–21 ರ ಎರಡು ದಿನಗಳ ಅಭೂತಪೂರ್ವ ಮುಷ್ಕರದ ಮುಂದುವರಿಕೆಯಾಗಿ, ಪ್ರಧಾನ ಮಂತ್ರಿಯವರ ಗಮನವನ್ನು ಮತ್ತೊಮ್ಮೆ ಸೆಳೆಯಲು ಕಾರ್ಮಿಕರು ಪಾರ್ಲಿಮೆಂಟ್ ಚಲೋ ನಡೆಸಿದ್ದರು. ಪ್ರಧಾನ ಮಂತ್ರಿಗಳೇ ಉತ್ತರ ಕೊಡಿ ಎಂದು ಕೇಳುತ್ತಿದ್ದರು. ಏಕೆಂದರೆ, ಫೆಬ್ರವರಿ ಮುಷ್ಕರದ ತರುವಾಯ ಪ್ರಧಾನ ಮಂತ್ರಿಗಳು ಹೇಳಿದ್ದರು: "ಕಾರ್ಮಿಕರು ನಮ್ಮ ಗಮನ ಸೆಳೆಯಲು ನಮ್ಮ ಮುಂದಿಟ್ಟಿರುವ

ಪುಟ 15 ಕ್ಕೆ

ಕೇರಳ: ಮುಖ್ಯಮಂತ್ರಿ ರಾಜಿನಾಮೆಗಾಗಿ ತೀವ್ರಗೊಳ್ಳುತ್ತಿರುವ ಪ್ರತಿಭಟನೆ

ಕೇರಳದ ಅಧಿಕಾರರೂಢ ಕಾಂಗ್ರೆಸ್‌ನ ಮುಖ್ಯಮಂತ್ರಿ ಉಮ್ಮನ್‌ಚಾಂಡಿ ಸೋಲಾರ್ ಪ್ಯಾನಲ್ ಹಗರಣದಲ್ಲಿ ಸಿಲುಕನ್ನು ನ್ಯಾಯಯುತ ತನಿಖೆಗೆ ಸಹಕಾರಿಯಾಗಿ ಮುಖ್ಯಮಂತ್ರಿ ರಾಜಿನಾಮೆ ನೀಡಬೇಕೆಂದು ಮತ್ತು ಸರಿಯಾದ ತನಿಖೆಯಾಗಬೇಕೆಂದು ಹಲವು ದಿನಗಳಿಂದ ಕೇರಳದ ಪ್ರಧಾನ ವಿರೋಧ ಪಕ್ಷ ಸಿಪಿಐ(ಎಂ) ಮತ್ತು ವಿರೋಧಿ ರಂಗ-ಎಲ್‌ಡಿಎಫ್ ನೇತೃತ್ವದಲ್ಲಿ ವಿವಿಧ ಹಂತದ ಹೋರಾಟಗಳನ್ನು ನಡೆಸಿಕೊಂಡು ಬಂದಿದ್ದವು. ಬಹುಶಃ ಬೀಸುವ ದೊಣ್ಣೆ ಏಟು ತಪ್ಪಿಸಿಕೊಂಡರೆ ನೂರು ವರ್ಷ ಆಯಸ್ಸು ಎಂದು ನಂಬಿದ ಕಾಂಗ್ರೆಸ್ ಸುಳ್ಳು ಭರವಸೆ ನೀಡಿ ವಂಚಿಸಿ ಚಳುವಳಿಯನ್ನು ವಾಪಸ್ ಪಡೆಯುವಂತೆ ಮಾಡಿತ್ತು.

ಏನಾಗಿತ್ತು ?


ಅಂದು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಶಿಸ್ತುಬದ್ಧ ಕಾರ್ಯಕರ್ತರು ಸಚಿವಾಲಯದ ಮುತ್ತಿಗೆ ಹಾಕಿ ಪಟ್ಟು ಹಿಡಿದು ಕುಳಿತುಬಿಟ್ಟಿದ್ದರು. ಹೋರಾಟದ ಬಿಸಿಯೇರಿ ವಿಷಯ ಕುತ್ತಿಗೆಗೆ ಬಂದಾಗ ಸರ್ಕಾರ ಸೋಲಾರ್ ಹಗರಣದ ಕುರಿತು ನ್ಯಾಯಾಂಗ ತನಿಖೆ ನಡೆಸುವುದಾಗಿ ಮತ್ತು ಆ ತನಿಖೆಯನ್ನು ಹಾಲಿ ನ್ಯಾಯಾದೀಶರಿಂದ ತನಿಖೆ ಮಾಡಿಸುವುದಾಗಿಯೂ ಭರವಸೆ ನೀಡಿತು.

ಹಾವು ಬಿಟ್ಟು ಹುತ್ತವ ಬಡಿ ಎಂದರು

ಎಲ್‌ಡಿಎಫ್ ಚಳುವಳಿ ವಾಪಸ್ ಪಡೆದ ನಂತರ ಆಗಿದ್ದೇ ಬೇರೆ. ನ್ಯಾಯಾಂಗ ತನಿಖೆಗೆ ಆದೇಶಿಸಲಾಯಿತು. ಆದರೆ ತನಿಖೆಯ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಗಳು ಮತ್ತು ಅವರ ಕಚೇರಿಯು ಬರುವುದಿಲ್ಲ ಎಂದು ತನಿಖೆಯ ವ್ಯಾಪ್ತಿಯನ್ನು ಸರ್ಕಾರ ಸೀಮಿತಗೊಳಿಸಿತು. ಹಗರಣದ ಆರೋಪ ಇರುವುದೇ ಮುಖ್ಯಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ಸಹಾಯಕ ಕಚೇರಿ ಸಿಬ್ಬಂದಿಗಳ ಮೇಲೆ. ಹೀಗಿರುವಾಗ ಈ ಕಚೇರಿಯನ್ನು ಮತ್ತು ಹಗರಣಕೋರರನ್ನೆಲ್ಲಾ ಬಿಟ್ಟು ಇನ್ನು ತನಿಖೆ ನಡೆಯುವುದು ಯಾವುದರ ಬಗೆಗೆ !!! ಮತ್ತೂ ಒಂದು ವಂಚನೆ ಎಂದರೆ ಸರ್ಕಾರ ಹಾಲಿ ನ್ಯಾಯಾದೀಶರಿಂದ ತನಿಖೆ ಎಂದು ಒಪ್ಪಿತ್ತು. ಆದರೆ ಹಾಲಿ ನ್ಯಾಯಾದೀಶರು ಸಿಗುತ್ತಿಲ್ಲವೆಂದು ನೆಪ ಹೇಳಿ ಮಾಜಿ ನ್ಯಾಯಾದೀಶರಿಂದ ತನಿಖೆ ಎಂದಿತು. ಒಟ್ಟಾರೆ ಲಕ್ಷಾಂತರ ಚಳುವಳಿಕಾರರಿಗೆ ಬಹಿರಂಗವಾಗಿ ಕೊಟ್ಟ ಭರವಸೆಯ ನಿರ್ಲಜ್ಜ ಉಲ್ಲಂಘನೆ ನಡೆಯಿತು.

ಮತ್ತೆ ಚಳುವಳಿ

ಈಗ ಡಿಸೆಂಬರ್ 9ರಿಂದ



ತಿರುವನಂತಪುರದಲ್ಲಿರುವ ಮುಖ್ಯಮಂತ್ರಿಯ ಅಧಿಕೃತ ನಿವಾಸಕ್ಕೆ ಅನಿರ್ಧಿಷ್ಟಾವಧಿ ಮುತ್ತಿಗೆ ಹೋರಾಟ ಪ್ರಾರಂಭಿಸಲಾಯಿತು. ಕೂಡಲೇ ನೂರಾರು ಎಲ್‌ಡಿಎಫ್ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು.

ಪ್ರತಿಭಟನೆಯನ್ನು ಉಧ್ಘಾಟಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ವಿ.ಎಸ್. ಅಚ್ಚುತಾನಂದನ್ ಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿ ಕಚೇರಿಗಳನ್ನು ನ್ಯಾಯಾಂಗ ತನಿಖೆ ವ್ಯಾಪ್ತಿಗೆ ತರುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂಬ ಎಚ್ಚರಿಕೆಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯೂ-ರೋ ಸದಸ್ಯರಾದ ಕೋಡಿಯೇರಿ ಬಾಲಕೃಷ್ಣನ್ ನೇತೃತ್ವದಲ್ಲಿ ನೂರಾರು ಸ್ವಯಂಸೇವಕರು ರಾಜಭವನದಿಂದ ಪ್ರತಿಭಟನಾ ಸ್ಥಳಕ್ಕೆ ಮೆರವಣಿಗೆ ನಡೆಸಿದರು.

ಅಂದು ನಡೆದ ಮುತ್ತಿಗೆ ಸಂದರ್ಭದಲ್ಲಿ ಸಿಪಿಐನ ಸಿ.ದಿವಾಕರ್ ಮತ್ತು ಸಿಪಿಐ(ಎಂ)ನ ಕೋಡಿಯೇರಿ ಬಾಲಕೃಷ್ಣನ್ ಬಂಧನಕ್ಕೊಳಗಾದರು.

ಪಶ್ಚಿಮ ಬಂಗಾಳ ಮಾಜಿ ಮಂತ್ರಿ ಫಾರ್ವರ್ಡ್ ಬ್ಲಾಕ್ ಮುಖಂಡರ ಮೇಲೆ ಮಾರಣಾಂತಿಕ ಹಲ್ಲೆ

ವಿರೋಧ ಪಕ್ಷದವರ ಮೇಲಿನ ಅನಾಗರೀಕ ದಾಳಿಯನ್ನು ಪಶ್ಚಿಮ ಬಂಗಾಳದ ಆಡಳಿತರೂಢ ತೃಣಮೂಲ ಕಾಂಗ್ರೆಸ್ ಅವ್ಯಾಹತವಾಗಿ ಮುಂದುವರೆಸಿದೆ. ಡಿಸೆಂಬರ್ 8, 2013 ರಂದು ಹೂಗ್ಲಿ ಜಿಲ್ಲೆಯ ಧನಿಕಾಲಿ ಎಂಬ ಪ್ರದೇಶದಲ್ಲಿ ಫಾರ್ವರ್ಡ್ ಬ್ಲಾಕ್‌ನ ಮುಖಂಡರೂ, ಮಾಜಿ ಆಹಾರ ಸಚಿವರೂ ಆದ ನರೇನ್ ದೇ ರವರು ಸ್ಥಳಿಯ ಫಾರ್ವರ್ಡ್ ಬ್ಲಾಕ್ ಕಛೇರಿ ಆವರಣದಲ್ಲಿ ಕಾರ್ಯಕ್ರಮವೊಂದನ್ನು ನಡೆಸುತ್ತಿರುವಾಗ ತೃಣ ಮೂಲ ಕಾಂಗ್ರೆಸ್‌ನ ಗೂಂಡಾಗಳು ಇವರ ಮೇಲೆ ತೀವ್ರವಾಗಿ ಹಲ್ಲೆ ಮಾಡಿದ್ದಾರೆ. ಈ ಹಲ್ಲೆಯಲ್ಲಿ ಮಾಜಿ ಶಾಸಕರಾದ ಧನಿಕಾಲಿ ಆಜಿ ಪತ್ರರವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ತೃಣಮೂಲಕ್ಕೆ ಸೇರಿದ ಸ್ಥಳೀಯ ಕಾರ್ಯಕರ್ತರು ಕಾರ್ಯಕ್ರಮ ನಡೆ-ಯುತ್ತಿದ್ದ ಸ್ಥಳಕ್ಕೆ ನುಗ್ಗಿ ಚೈನು, ಲಾಠಿ ಮತ್ತು ಕಬ್ಬಿಣದ ಸಲಾಖೆಗಳಿಂದ ಹಲ್ಲೆ ಮಾಡಿದ್ದು 76 ವರ್ಷದ ನರೇನ್ ದೇರವರ ಎರಡೂ ಕಣ್ಣುಗಳು ಹಾನಿಗೊಳಗಾಗಿದ್ದು ದೇಹದ ಇತರೆ ಭಾಗಗಳಿಗೂ ತೀವ್ರ ಪೆಟ್ಟಾಗಿದೆ. ಅವರನ್ನು ಮೊದಲಿಗೆ ಚಿನ್‌ಸೂರ್‌ನ ಸರ್ಕಾರಿ ಆಸ್ಪತ್ರೆಗೆ ದಾಖಲಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕೊಲ್ಕತ್ತದ ಖ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಘಟನೆಗೆ ಸಂಬಂಧಿಸಿದ ಯಾ ಅಪರಾಧಿಗಳ ಮೇಲೆ ಸೂಕ್ತ ಕ್ರಮ ಕೈಗೊ ಪೋಲೀಸರು ನಿರಾಕರಿಸಿದ್ದಾರೆ. ಇನ್ನೊ ಹೇಸಿಗೆ ಹುಟ್ಟಿಸುವ ಘಟನೆ ಏನೆಂದರೆ ದೇ ರ ಮೊದಲಿಗೆ ದಾಖಲಾಗಿದ್ದ ಚಿನ್‌ಸುರ ಸರ್ ಆಸ್ಪತ್ರೆಯಲ್ಲಿ ಇವರನ್ನು ಪರೀಕ್ಷಿಸಿ ಎಕ್ಸರೇ ಗೆದ ಮೇಲೆ ಯಾವುದೇ ಗಾಯಗಳಾಗಿಲ್ಲವೆ ಆಡಳಿತ ಪಕ್ಷದ ಸೂಚನೆ ಮೇರೆಗೆ ಸ ವರದಿಯನ್ನು ನೀಡಲಾಗಿದೆ. ಆದರೆ ಅವ ಕೊಲ್ಕತ್ತಾದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಈ ವರದಿಗಳೆಲ್ಲ ಸುಳ್ಳು ಎಂದು ದೃಢಪಟ ಮಾತ್ರವಲ್ಲದೆ ದೇ ಅವರ ಆರೋಗ್ಯ ತೀರಾ ಗಂಭೀರವಾಗಿದೆ. ಈ ಘಟನೆಯ ಖಂಡಿಸಿರುವ ವಿರೋಧ ಪಕ್ಷದ ನಾಯಕರ ಸೂರ್ಯಕಾಂತ್ ಮಿಶ್ರ ಅಧಿಕಾರದಲ್ಲಿರುವ ಅಪರಾಧಿಗಳನ್ನು ಕಾಪಾಡಲು ವರದಿಗಳ ತಿರುಚಿಸುವ ಹೀನ ಕೆಲಸಕ್ಕೆ ಇಳಿದಿದೆ ಎಂ ಖಂಡಿಸಿದ್ದಾರೆ.

ಈ ಘಟನೆಯ ಕುರಿತು ಪಶ್ಚಿಮ ಬಂಗ ವಿಧಾನ ಸಭೆಯಲ್ಲಿ ಚರ್ಚಿಸಲು ಅವಕ ಕೇಳಿದರೆ ವಿಧಾನ ಸಭಾಧ್ಯಕ್ಷರು ನಿರಾಕರಿಸಿ ಮಾತ್ರವಲ್ಲದೆ ಎಡಪಕ್ಷದ ಸದಸ್ಯರು ಸದನ ಈ ವಿಷಯ ಕುರಿತು ಸದನದ ಗಮ ಸೆಳೆಯಲು ಎದ್ದು ನಿಂತರೆ ಮೈಕ್‌ಗಳನ್ನು ಬಂ ಮಾಡಲಾಗಿದೆ. ಇದರಿಂದ ಬೇಸತ್ತ ಎಡಪಕ್ಷ ಸದಸ್ಯರು ನಾಲ್ಕು ದಿನಗಳ ಕಾಲ ಅಧಿವೇಶನವ ಬಹಿಷ್ಕರಿಸಿದ್ದಾರೆ.

ಹಲ್ಲೆಯನ್ನು ತೀವ್ರವಾಗಿ ಖಂಡಿಸಿರ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಮ ಬಸು ಇದು ರಾಜ್ಯದಲ್ಲಿರುವ ಭಯೋತ್ಪಾದಕ ಯ ತೀವ್ರತೆಯನ್ನು ತೋರಿಸುತ್ತದೆ ಎಂದಿದ್ದಾ


ಕುಂದಾಪುರದಲ್ಲಿ ವಿದ್ಯಾರ್ಥಿಗಳ ಗಮನ ಸೆಳೆದ ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆ.

ವರದಿ : ಜಗದೀಶ್ ಸೂರ್ಯ

ಬೆರಗಾಗಿಸಿದ 'ಬೆರಗು' ವೇದಿಕೆ ಮೇಲೆ 3–4 ಹುಲಿಗಳು. ಇವುಗಳೊಂದಿಗೆ ನಡೆದುಕೊಂಡು ಬಂದು ಸೇರಿಕೊಂಡ ಮತ್ತೊಂದು ಹೆಬ್ಬುಲಿ, ಮದುವೆ ಮನೆಯಲ್ಲಿ, ಸಾವಿನ ಮನೆಯಲ್ಲಿ, ಆಪರೇಷನ್ ಥಿಯೇಟರ್‌ನಲ್ಲಿ ಕ್ಲಾಸು ರೂಮಿನಲ್ಲಿ ರಿಂಗಣಿಸುವ ಮೊಬೈಲ್ ಕರೆಗಳು, ಒನಕೆ ಒಬವ್ವ, ದಮಯಂತಿ, ಯಕ್ಷಗಾನ ಮುಂತಾದವುಗಳನ್ನು ಅಭಿನಯ ಮಾಡುವ ಮೂಲಕ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಜನಮನವನ್ನು ಸೂರೆಗೊಂಡರು. ಇದಕ್ಕೆ ವೇದಿಕೆ ಕಲ್ಪಿಸಿಕೊಟ್ಟದ್ದು ಎಸ್‌ಎಫ್‌ಐ ಕುಂದಾಪುರ ತಾಲ್ಲೂಕು ಸಮಿತಿ.

'ಬೆರಗು–2013' ಕಣ್ಣಂಚಿನ ಮಿಂಚಿಗೊಂದು ವೇದಿಕೆ ಎಂಬ ಶೀರ್ಷಿಕೆ ಅಡಿಯಲ್ಲಿ ಅಂತರ್ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮವನ್ನು ಡಿಸೆಂಬರ್ 14, 2013ರಂದು ಕುಂದಾಪುರ ವ್ಯಾಸರಾಯ ಕಲಾಮಂದಿರದಲ್ಲಿ ಆಯೋಜಿಸಿತು.

ಈ ಕಾರ್ಯಕ್ರಮವನ್ನು 'ಸುವರ್ಣ' ಸುದ್ದಿವಾಹಿನಿಯ ಉಪ ಸಂಪಾದಕರಾದ ಲಕ್ಷ್ಮಣ್ ಹೂಗಾರ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ವಿದ್ಯಾರ್ಥಿಗಳನ್ನು



ಸಂಘಟಿಸುವಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ. ಇಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಲ್ಲಿ ಕೋಮು ವಿಚಾರ, ಜಾತಿ ಭಾವನೆ ತುಂಬಲು ಬಳಸಿಕೊಳ್ಳಲಾಗುತ್ತಿದೆ. ನಾವು ಇಂದು ಇವುಗಳ ಮೂಲಕ ಪ್ರಗತಿಪರ ವಿಚಾರವನ್ನು ಹೇಳಬೇಕಾಗಿದೆ. ಇಂದು ಜಾತಿ ಬಿಟ್ಟು ಬರಲಾರದ ಸ್ಥಿತಿ ಉಂಟಾಗಿದೆ. ಅದಾಗ್ಯೂ ಜಾತಿಯನ್ನು ಮೀರುವ ಪ್ರಯತ್ನಗಳು ಆಗಬೇಕಾಗಿದೆ. ಇಂದು ಒಂದು ದೇಶ ಒಂದು ಧರ್ಮ ಎನ್ನುವ ಮೂಲಕ ದೇಶದಲ್ಲಿ ಸರ್ವಾಧಿಕಾರಿ ಧೋರಣೆಯನ್ನು ಹರಿಬಿಟ್ಟು ಪ್ರಜಾಪ್ರಭುತ್ವವನ್ನೇ ನಾಶಮಾಡಲು ಪ್ರಯತ್ನಿಸಲಾಗುತ್ತಿದೆ. ಇವನ್ನು ತಡೆಯಬೇಕಾದ ಮಹತ್ತರ ಜವಾಬ್ದಾರಿ ನಮ್ಮ ಮೇಲಿದೆ ಎಂದರು. ನಂತರ ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಅನಂತ್ ನಾಯಕ್ ಮಾತಾನಾಡಿ ವಿವಿಧ ವಿದ್ಯಾರ್ಥಿಗಳ ಸಮುದಾಯವನ್ನು ಬೆಸೆಯಲು ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಅನುಕೂಲವಾಗಿದೆ. ಬಹುದೊಡ್ಡ ಶಿಕ್ಷಣದ ವ್ಯಾಪಾರೀಕರಣದ ಈ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಒಂದೆಡೆ ಅಣಿನೆರೆಸಿ ಪ್ರಗತಿಪರ, ಸಮಾಜಮುಖಿ ವಿಚಾರ ತಿಳಿಸಲು ಸೂಕ್ತ ವೇದಿಕೆ ಎಂದರು. ವೇದಿಕೆಯಲ್ಲಿ ಸಿದ್ದತಾ ಸಮಿತಿ ಅಧ್ಯಕ್ಷರಾದ ಬಿ.ಎಂ.ನಾಸಿರ್, ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷ ಜಗದೀಶ್ ಸೂರ್ಯ, ತಾಲ್ಲೂಕು ಅಧ್ಯಕ್ಷ ಗಣೇ ದಾಸ್, ಕಾರ್ಯದರ್ಶಿ ಶ್ರೀಕಾಂತ್ ಹೆಮ್ಮಾ ಕಟ್ಟಡ ಕಾರ್ಮಿಕ ಸಂಘಟನೆಯ ಮುಖಂಡರಾ ಸುರೇಶ್ ಕಲಾಗಾರ್ ಇದ್ದರು. ನಂತರ ವಿ ಕಾಲೇಜುಗಳ ಸಾಂಸ್ಕೃತಿಕ ತಂಡಗಳಿಂ ಮೂಢನಂಬಿಕೆ ಮತ್ತು ಕಾನೂನು ಬಗ್ಗೆ ಭಾಷ ಯಕ್ಷಗಾನ, ಮಿಮಿಕ್ರಿ, ಜಾನಪದ ನೃತ್ಯ, ಮೂಕಾಭಿನಯ, ಛದ್ಮ ವೇಷ, ಲಘುಪ್ರಹ ಮುಂತಾದ ಕಾರ್ಯಕ್ರಮಗಳು ನಡೆದವು. ಪ್ರ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಸಂದೇಶಗಳನ ನೀಡುವುದರ ಜೊತೆಗೆ ಮನರಂಜನೆಯನ ನೀಡುವ ಮೂಲಕ ವಿದ್ಯಾರ್ಥಿಗಳ ಪ್ರತಿ ಹೊರತೆಗೆಯಲು ಸೂಕ್ತವೇದಿಕೆಯನ ಕಲ್ಪಿಸಿಕೊಟ್ಟಿತು. ವಿವಿಧ ಕಾಲೇಜುಗಳಿಂ ವಿದ್ಯಾರ್ಥಿಗಳು, ಅಧ್ಯಾಪಕರು, ಪೋಷಕರ ವಿದ್ಯಾರ್ಥಿ ಚಳುವಳಿಯ ಹಿತೈಷಿಗಳು ಹೆಚ್ಚಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ನಂತರ ಸಂಜೆ ಬಹುಮಾನ ವಿತರಣ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದ ಪುರಸಭಾ ಅಧ್ಯಕ್ಷರಾದ ಕಾಂ.ಕಲಾವತಿ, ಉದ್ಯ ದತ್ತಾನಂದ ಗಂಗೊಳ್ಳಿ, ಜಗದೀಶ್ ಸೂ ಜೀವವಿಮಾ ನೌಕರ ಸಂಘದ ಉಡು ಜಿಲ್ಲಾ ಕಾರ್ಯದರ್ಶಿ ಗುರುದತ್ ಇವರುಗ ಮಾತಾನಾಡಿದರು ಡಿವೈಎಫ್‌ಐನ ರಾ ಎಸ್‌ಎಫ್‌ಐ ತಾಲ್ಲೂಕು ಸಹಕಾರ್ಯ ಕಾಂ. ಅಫ್ರಿನಾ ಬೇಗಂ, ಮೀನಾಕ್ಷಿ ಇವರುಗ ಉಪಸ್ಥಿತರಿದ್ದರು

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಾಲಿ ಡಬ್ಲ್ಯುಟಿಒ ಸಭೆಯ ನಿರ್ಣಯ: "ಹೆಮ್ಮೆ ಪಡುವ ಸಂಗತಿಯಲ್ಲ, ವಿಷಾದದ ಸಂಗತಿ"

ಇಂಡೋನೇಸ್ಯಾದ ಬಾಲಿಯಲ್ಲಿ ನಡೆದ ಬ್ಲ್ಯುಟಿಒ ಮಂತ್ರಿಮಟ್ಟದ ಮಾತುಕತೆಗಳಲ್ಲಿ ಭಾರತ ಹಾವಿಜಯ ಗಳಿಸಿದೆ, ನಮ್ಮ ಆಹಾರ ಭದ್ರತಾ ನೂನಿಗೆ ಸಂಬಂಧಪಟ್ಟಂತೆ ಭಾರತ ಸರಕಾರದ ಢ ನಿಲುವಿನ ಕೈಮೇಲಾಗಿದೆ, ಡಬ್ಲ್ಯುಟಿಒ ಕ್ಷೇಪದಿಂದ ವಿನಾಯ್ತಿ ಪಡೆಯಲಾಗಿದೆ ಂದು ಯುಪಿಎ-2 ಸರಕಾರದ ವಕ್ತಾರರು ನ್ನು ತಟ್ಟಿಕೊಂಡರು. ಮಾಧ್ಯಮಗಳೂ ಅದರ ೇಪರಾಕು ಹಾಡಿದವು. ಆದರೆ ವಾಸ್ತವ ಮಾತ್ರ ವಿರುದ್ಧ ಎಂದಿದ್ದಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್(ಪೀಪಲ್ಸ್ ಡೆಮಾಕ್ರಸಿ, 15)

ಈ ಅಂಕಣದಲ್ಲಿ ಹಿಂದೆ ಎರಡು ಬಾರಿ (ಸಂಚಿಕೆ ಮತ್ತು ಸಂಚಿಕೆ 50) ಶಂಕಿಸಿದಂತೆ, ಭಾರತದ ಹಾರ ಭದ್ರತಾ ಶಾಸನಕ್ಕೆ ಸಂಬಂಧಪಟ್ಟಂತೆ ಾವ ರಾಜಿಯೂ ಸಾಧ್ಯವಿಲ್ಲ ಎಂಬ ಯುಪಿಎ-2 ಣಿಜ್ಯ ಮಂತ್ರಿಗಳ ಮಾತು ಹುಸಿಯಾಗಿದೆ. ನೆಗೂ ಭಾರತ 'ಮಧ್ಯಂತರ' ಎನ್ನಲಾದ ಂತಿ ಪರಿಚ್ಛೇದಕ್ಕೆ ಒಪ್ಪಿಕೊಂಡಿದೆ. ಮುಂದಿನ ವರ್ಷಗಳ ಕಾಲವಷ್ಟೇ ಡಬ್ಲ್ಯುಟಿಒ ರತದ ಆಹಾರ ಭದ್ರತೆ ಕಾನೂನಿನ ಬಗ್ಗೆ ಕ್ಷೇಪಗಳನ್ನು ಎತ್ತುವುದಿಲ್ಲ. ಅ ಮಧ್ಯಂತರದಲ್ಲಿ ಬಗ್ಗೆ ಮಾತುಕತೆಗಳು ನಡೆಯುತ್ತವೆ. ಅವುಗಳ ಧಾರದಲ್ಲಿ ಒಪ್ಪಂದವಾಗುತ್ತದೆ. ಇಂತಹ ಒಪ್ಪಂದ, ಬ್ಲ್ಯುಟಿಒದ ಮುಂದುವರೆದ ಪಾಶ್ಚಿಮಾತ್ಯ ೇಶಗಳು ಎತ್ತಿರುವ ಆಕ್ಷೇಪಗಳನ್ನು ಬದಿಗೊತ್ತುವ ಸಾಧ್ಯತೆ ಇಲ್ಲ, ಬದಲಿಗೆ ಡಬ್ಲ್ಯುಟಿಒ ನಿಯಮಗಳ ವಿವರಗಳನ್ನು, ಏನೆಲ್ಲ ಮಾಡಿದರೆ ಅವುಗಳ ಉಲ್ಲಂಘನೆಯಾಗುತ್ತದೆ ಎಂಬ ವಿವರಗಳನ್ನು ನಿರೂಪಿಸಬಹುದಷ್ಟೇ.

ಬಾಲಿ ಸಮ್ಮೇಳನದವರೆಗೆ ಭಾರತದ ಸರಕಾರದ ನಿಲುವು ಇದ್ದುದು, ಒಂದು ದೇಶ ತನ್ನ ಜನತೆಗೆ ಆಹಾರ ಭದ್ರತೆಯನ್ನು ಒದಗಿಸುವ ಹಕ್ಕು ಹೊಂದಿದೆ, ಅದನ್ನು ಡಬ್ಲ್ಯುಟಿಒ ನಿಯಮಗಳಿಗೆ ಒಳಪಡಿಸಲು ಸಾಧ್ಯವಿಲ್ಲ ಎಂದು. ಈ ಮೂಲ ನೀತಿಬದ್ಧ ನಿಲುವನ್ನು ಈಗ ಬಿಟ್ಟುಕೊಡಲಾಗಿದೆ ಎಂದು ಬಾಲಿ ಮಂತ್ರಿಮಟ್ಟದ ಸಮ್ಮೇಳನದ ನಿರ್ಣಯವನ್ನು ವಿಶ್ಲೇಷಿಸಿರುವ ಪ್ರೊ. ಪಟ್ನಾಯಕ್ ಹೇಳುತ್ತಾರೆ. **ಭಾರತವೇ ತಯಾರಿಸಿರುವ ಕರಡಿನಲ್ಲಿ ಈ ಮೂಲನೀತಿಯನ್ನೇ ಕೈಬಿಟ್ಟಿರುವುದು ಹೆಮ್ಮೆ ಪಡುವ ಸಂಗತಿಯಲ್ಲ, ವಿಷಾದದ ಸಂಗತಿ ಎಂದು ಅವರು ಟಿಪ್ಪಣಿ ಮಾಡಿದ್ದಾರೆ.**

ಆಹಾರ ಸಬ್ಸಿಡಿಗಳ ಹಕ್ಕನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ, ಇದು ಭಾರತದ ಅಧಿಕಾರಿಗಳ ಚಾಕಚಕ್ಯತೆಗೆ ಸಂದಿರುವ ಜಯ ಎಂಬ ಯುಪಿಎ-2 ವಾಣಿಜ್ಯ ಮಂತ್ರಿಗಳ ಹೇಳಿಕೆ ದಾರಿ ತಪ್ಪಿಸುವಂತದ್ದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಕೂಡ ಅಭಿಪ್ರಾಯ ಪಟ್ಟಿದೆ. ಭಾರತಕ್ಕೆ ಬಾಲಿಯಲ್ಲಿ ಸಿಕ್ಕಿರುವ ಏಕೈಕ ರಿಯಾಯ್ತಿ ಎಂದರೆ 'ತಾತ್ಕಾಲಿಕ'ದ ಬದಲು 'ಮಧ್ಯಂತರ' ಶಾಂತಿ ಪರಿಚ್ಛೇದ. ನಾಲ್ಕು ವರ್ಷಗಳಲ್ಲಿ ಒಂದು ಶಾಶ್ವತ ಇತ್ಯರ್ಥ ಆಗುವ ವರೆಗೆ ಇದು ಜಾರಿಯಲ್ಲಿರುತ್ತದೆ ಎಂದು ಸಿಪಿಐ(ಎಂ) ಟೀಕಿಸಿದೆ.

ವಾಣಿಜ್ಯ ಮಂತ್ರಿಗಳು ಸಾರ್ವಜನಿಕವಾಗಿ ತಳೆದಿರುವ ನಿಲುವು ಮತ್ತು ಬಾಲಿ ಸಭೆಯಲ್ಲಿ ಒಪ್ಪಿರುವ ಪಠ್ಯದ ನಡುವೆ ಭಿನ್ನತೆಗಳಿವೆ. ಮಂತ್ರಿಮಟ್ಟದ ಸಭೆಯ ನಿರ್ಣಯ ಭಾರತದ ಆಹಾರ ಭದ್ರತೆ ಮತ್ತು ರೈತರ ಜೀವನಾಧಾರದ ವಿಷಯದಲ್ಲಿ ಭಾರತ ಸರಕಾರ ಪ್ರತಿಕೂಲಕರ ರಾಜಿ ಮಾಡಿಕೊಂಡಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದಿರುವ ಸಿಪಿಐ(ಎಂ) ಈ ಒಪ್ಪಂದ ಆಹಾರಭದ್ರತೆಯ ಪ್ರಸಕ್ತ ಕಾರ್ಯಕ್ರಮವನ್ನು ವಿಸ್ತರಿಸಲು, ರೈತರಿಗೆ ಬೆಲೆ ಬೆಂಬಲ ನೀಡಲು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಲು ಅಡ್ಡಿಯಾಗುವ ರೀತಿಯಲ್ಲಿ ಇದೆ ಎಂದಿದೆ. ಈ ಒಪ್ಪಂದದ ಪ್ರಕಾರ ದೇಶಗಳು ತಮ್ಮ ಆಡಳಿತಾತ್ಮಕ ಬೆಲೆಗಳನ್ನು ಕುರಿತಂತೆ ಮತ್ತು ತಾವು ಖರೀದಿಸಿದ ದಾಸ್ತಾನುಗಳ ಪ್ರಮಾಣವನ್ನು ಕುರಿತಂತೆ ಮಾಹಿತಿಗಳನ್ನು ಒದಗಿಸಬೇಕು. ಇದು ಡಬ್ಲ್ಯುಟಿಒನ ಕೃಷಿ ಕುರಿತ ಸಮಿತಿಯಲ್ಲಿ ಭಾರತದ ಆಂತರಿಕ ಧೋರಣೆಗಳನ್ನು ಮತ್ತು ಆದ್ಯತೆಗಳನ್ನು ಪ್ರಶ್ನಿಸುವ ಮೂಲಕ ಅವನ್ನು ಅನವಶ್ಯಕವಾಗಿ ಕುಂಠಿತಗೊಳಿಸುತ್ತದೆ, ಆಮೂಲಕ ನಮ್ಮ ಸಾರ್ವಭೌಮತೆಯ ಹಕ್ಕನ್ನೂ ಕುಂಠಿತಗೊಳಿಸುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಈ ಬಾಲಿ ಸಭೆ, ಈ ಹಿಂದೆ ಈ ಅಂಕಣದಲ್ಲಿ ಹೇಳಿರುವಂತೆ, ಒಂದು ಸಮತೋಲನವಿಲ್ಲದ ವ್ಯಾಪಾರ ಪ್ಯಾಕೇಜನ್ನು ಮುಂದಿಟ್ಟಿದೆ. ಅದನ್ನು



ಎನ್.ಕೆ. ವೇದರಾಜ

ಒಪ್ಪಿಕೊಂಡರೆ ಅದರ ಪ್ರಕಾರ 'ವ್ಯಾಪಾರ ಸೌಲಭ್ಯ'ದ ಹೆಸರಿನಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಬಹಳ ಖರ್ಚುದಾಯಕವಾದ ಕಸ್ಟಮ್ಸ್ ಒಪ್ಪಂದಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇದು ಕೃಷಿ ವ್ಯಾಪಾರದ ಏಕಸ್ವಾಮ್ಯ ಹೊಂದಿರುವ ಸೂರೆಕೋರ ಕೃಷಿ-ವ್ಯಾಪಾರಿಗಳ ಹಿತಗಳನ್ನು ಈಡೇರಿಸುವುದಕ್ಕಾಗಿ ಮುಂದಿಟ್ಟಿರುವ ಕ್ರಮ ಎಂದು ಸಿಪಿಐ(ಎಂ) ಬಲವಾಗಿ ಟೀಕಿಸಿದೆ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಭಾರತ ಆಹಾರ ಭದ್ರತೆಯನ್ನು ತನ್ನ ಜನರಿಗೆ ಒದಗಿಸುವ ವಿಷಯದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಜಿ-33 ದೇಶಗಳ ನಾಯಕನಾಗಿ ಹೊಮ್ಮಿತ್ತು. ಇದು ಮೂರನೇ ಜಗತ್ತಿನ ದೇಶಗಳಿಗೆ ಸಂಬಂಧಪಟ್ಟಂತೆ ಡಬ್ಲ್ಯುಟಿಒ ಒಪ್ಪಂದದದಲ್ಲಿ ಇರುವ ಅಸಮಾನ ವ್ಯವಸ್ಥೆಯನ್ನು ಸರಿಪಡಿಸುವ ಒಂದು ಉತ್ತಮ ಅವಕಾಶವನ್ನು ಕೂಡ ಒದಗಿಸಿತ್ತು. ಆದರೆ ಭಾರತ ಸರಕಾರ ಪಾಶ್ಚಿಮಾತ್ಯ ದೇಶಗಳ ಒತ್ತಡಕ್ಕೆ ಮಣಿದು ಈ ಅವಕಾಶವನ್ನೂ ಕಳಕೊಂಡಂತಾಗಿದೆ ಎಂದು ಪ್ರೊ. ಪ್ರಭಾತ್ ಪಟ್ನಾಯಕ್ ಹೇಳುತ್ತಾರೆ.

ಬಾಲಿ ಮಂತ್ರಿಮಟ್ಟದ ಸಭೆಯ ನಿರ್ಣಯ ಈಗಾಗಲೇ ಆಹಾರ ಭದ್ರತೆ ಕಾನೂನನ್ನು ತಂದಿರುವ ಭಾರತ ಮತ್ತು ಇತರ ಕೆಲವೇ ದೇಶಗಳಿಗೆ ಮಾತ್ರ ಅನ್ವಯವಾಗುತ್ತದೆ. ಇತರ ಅಭಿವೃದ್ಧಿಶೀಲ ದೇಶಗಳಿಗೆ ಈ 'ಮಧ್ಯಂತರ' ನಿರ್ಣಯದಿಂದಲೂ ಏನೂ ಪ್ರಯೋಜನವಿಲ್ಲ.

ಡಬ್ಲ್ಯುಟಿಒ ಒಪ್ಪಂದ ಬರುವ ಮೊದಲು ಗ್ಯಾಟ್ ಎಂಬುದಿತ್ತು.- ಸುಂಕದರಗಳು ಮತ್ತು ವ್ಯಾಪಾರ ಕುರಿತಾದ ಸಾರ್ವತ್ರಿಕ ಒಪ್ಪಂದ. ಅದರಲ್ಲಿ ಸುಂಕದರಗಳನ್ನು ನಿರ್ಧರಿಸುವಲ್ಲಿ ವಿವಿಧ ದೇಶಗಳ ನಡುವೆ ಮಾತುಕತೆಗೆ ಅವಕಾಶವಿತ್ತು. ಅದು ಈಗ ಡಬ್ಲ್ಯುಟಿಒನಂತೆ ಯಾವುದೋ ನಿಯಮದ ಅಡಿಯಲ್ಲಿ ಯಾವುದೇ ದೇಶದ ಕೈಗಳನ್ನು ಕಟ್ಟಿ ಹಾಕಿರಲಿಲ್ಲ.

ಡಬ್ಲ್ಯುಟಿಒ ಈ ನಿಯಮಗಳನ್ನು ತಂದುದ್ದು 'ಮುಕ್ತ ವ್ಯಾಪಾರ' ಎಂಬ ತತ್ವದ ಅಡಿಯಲ್ಲಿ. ವಾಸ್ತವವಾಗಿ ಇದೊಂದು ಟೊಳ್ಳು ತತ್ವ ಎನ್ನುತ್ತಾರೆ ಪ್ರೊ. ಪಟ್ನಾಯಕ್. ಈ ವಸಾಹತುಶಾಹೀ ತತ್ವವನ್ನು ಕಾರ್ಲ್ ಮಾರ್ಕ್ಸ್ ಮಾತ್ರವಲ್ಲ, ಪ್ರಖ್ಯಾತ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞ ಕೀನ್ಸ್‌ರವರು ಕೂಡ ತಿರಸ್ಕರಿಸಿದ್ದರು ಎಂದು ಅವರು ನೆನಪಿಸುತ್ತಾರೆ. ಯಾವುದೇ ದೇಶದಲ್ಲಿ ಆದಾಯದಲ್ಲಿ ಅಸಮತೋಲನವಿದ್ದರೆ ಅದನ್ನು ಸರಿಪಡಿಸಲು ಸರಕಾರ ಮಧ್ಯಪ್ರವೇಶಿಸಬೇಕಾದ್ದು 'ನಗದು ವರ್ಗಾವಣೆ'ಯ ಮೂಲಕ ಮಾತ್ರ, ಏಕೆಂದರೆ ಇಂತಹ 'ನಗದು ವರ್ಗಾವಣೆ' 'ಮುಕ್ತ ವ್ಯಾಪಾರ'ದ ಮೇಲೆ ಪ್ರಭಾವ ಬೀರುವುದಿಲ್ಲ ಎಂಬ ನಂಬಿಕೆ ನವ-ಉದಾರವಾದಿಗಳದ್ದು.

ಆದ್ದರಿಂದಲೇ, ಈ ಹಿಂದೆ ಹೇಳಿರುವಂತೆ, ಅಮೆರಿಕಾ ಮತ್ತು ಯುರೋಪಿನ ಮುಂದುವರೆದ ದೇಶಗಳು ತಮ್ಮ ಕೃಷಿ ಜಿಡಿಪಿಯ 50ಶೇ.ದಷ್ಟು ಸಬ್ಸಿಡಿ ನೀಡಿದರೂ ಅದಕ್ಕೆ ಆಕ್ಷೇಪವೇನಿಲ್ಲ, ಆದರೆ ಭಾರತದಂತಹ ದೇಶ 10ಶೇ. ದಾಟಿದರೂ ಅದ-


ಪುಟ 13 ರಿಂದ

ಯುಪಿಎ-೨ ಸರಕಾರಕ್ಕೆ 'ಮಹಾಮಿತ್ರ' ತಂದ ಪೇಚು

ಅಮೆರಿಕಾದ ಆಳರಸರು ಮತ್ತೊಮ್ಮೆ ತಮ್ಮ ಜಮಾನಿಕೆಯ ಸ್ವರೂಪವನ್ನು ಪ್ರದರ್ಶಿಸಿದ್ದಾರೆ. ವರನ್ನು ತಮ್ಮ ಅತ್ಯಂತ ಘನಿಷ್ಟ 'ಆಯಕಟ್ಟಿನ ತ್ರ' ಎಂದು ಬಲವಾಗಿ ನಂಬಿರುವ, ಅವರೊಡನೆ ೆದ ಒಂದು ದಶಕದಲ್ಲಿ 'ವಿಶಿಷ್ಟ ಸಂಬಂಧ' ಳೆಸಿಕೊಂಡದ್ದೇ ತಮ್ಮ ಮಹತ್ಸಾಧನೆ ಎಂದು ಗೆದಿರುವ ಯುಪಿಎ-2 ಮುಖಂಡರು, ಅದರಲ್ಲೂ ಮ್ಮ ಪ್ರಧಾನ ಮಂತ್ರಿಗಳು ಕೂಡ ತಮ್ಮ ಎಂದಿನ ಮೌನ ಮುರಿದು ಕಳೆದ ವಾರ ನಮ್ಮ ಮಹಿಳಾ ರಾಜತಾಂತ್ರಿಕರೊಬ್ಬರಿಗೆ ಸಂಬಂಧಪಟ್ಟಂತೆ ಅಮೆರಿಕಾದಲ್ಲಿ ಪ್ರದರ್ಶಿಸಿದ ದುರ್ವರ್ತನೆಯನ್ನು ಖಂಡಿಸಬೇಕಾಗಿ ಬಂದಿದೆ.

ನ್ಯೂಯಾರ್ಕಿನಲ್ಲಿ ಭಾರತದ ರಾಯಭಾರ ಕಚೇರಿಯಲ್ಲಿ ಅಧಿಕಾರಿಯಾಗಿರುವ ದೇವಯಾನಿ ಖೋಬ್ರಗಡೆಯವರು ಭಾರತದಿಂದ ಕರೆದುಕೊಂಡು ಹೋದ ಮನೆಗೆಲಸದಾಕೆಗೆ ಸಂಬಂಧಪಟ್ಟಂತೆ ವೀಸಾ ಹೇಳಿಕೆಯನ್ನು ಮತ್ತು ಅಮೆರಿಕಾದ ಕನಿಷ್ಟ ಕೂಲಿ ಶಾಸನವನ್ನು ಉಲ್ಲಂಘಿಸಿದ್ದಾರೆ ಎಂಬ ಆಪಾದನೆಯ ಮೇಲೆ ಬಂಧಿಸಿದ್ದಷ್ಟೇ ಅಲ್ಲ, ಅವರ ರಾಜತಾಂತ್ರಿಕ ಸ್ಥಾನಮಾನವನ್ನು ಉಲ್ಲಂಘಿಸಿ ಅವರಿಗೆ ಕೈಕೋಳ ತೊಡಿಸಿ, ತನಿಖೆಯ ಹೆಸರಲ್ಲಿ ವಿವಸ್ತ್ರಗೊಳಿಸಿ ಮಾದಕ ದ್ರವ್ಯಗಳ ವ್ಯಸನಿಗಳ ಜತೆ ಕೂಡಿಡಲಾಯಿತು ಎಂಬ ಸುದ್ದಿ ದೇಶದಾದ್ಯಂತ ಆಕ್ರೋಶವನ್ನು ಉಂಟು ಮಾಡಿದೆ. ಬಹುಶಃ ಇಂತಹ ಸನ್ನಿವೇಶದಲ್ಲಿ ಅಮೆರಿಕಾದ ಆಳರಸರ ಬಗ್ಗೆ ಎಂತಹ 'ಪೂಜ್ಯ ಭಾವನೆ'ಯಿದ್ದರೂ ನಮ್ಮ ಆಳರಸರೂ ಈ ಆಕ್ರೋಶದಲ್ಲಿ ಭಾಗಿಯಾಗಬೇಕಾಗಿ ಬಂದಿದೆ.

ಇದು ಅಮೆರಿಕಾದ ಆಳರಸರು ಭಾರತವನ್ನು ಮತ್ತು ಅದರ ರಾಜತಾಂತ್ರಿಕರನ್ನು ಯಾವ ರೀತಿಯಲ್ಲಿ ನೋಡುತ್ತದೆ ಎಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಹೇಳಿದ್ದಾರೆ.



ನೀನು ಕೇವಲ ಚುನಾವಣಾ ನಂತರದ ಮಿತ್ರನಾಗುವಂತೆ ಕಾಣುತ್ತಿದೆ, ಅಂಕಲ್ ಸಾಮ್!
–ಇಂಡಿಯನ್ ಎಕ್ಸ್‌ಪ್ರೆಸ್ ನಲ್ಲಿ ಉನ್ನಿಯವರ ವ್ಯಂಗ್ಯ


ಭಾರತೀಯ ರಾಜತಾಂತ್ರಿಕರೊಂದಿಗೆ ಇಂತಹ ಅವಮಾನಕಾರಿ ವರ್ತನೆ ಮೊದಲ ಬಾರಿಯೇನಲ್ಲ. ಮೂರು ವರ್ಷಗಳ ಕೆಳಗೆ ಸ್ವತಃ ಭಾರತದ ರಾಯಭಾರಿ ಮೀರಾ ಶಂಕರ್ ಅವರನ್ನೂ ಭದ್ರತಾ ತಪಾಸಣೆಗೆ ಗುರಿಪಡಿಸಲಾಯಿತು. ಅದಕ್ಕೆ ಮೊದಲು ವಿಶ್ವಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿಯೊಂದಿಗೂ ಹೀಗೆ ಅವಮಾನಕಾರಿಯಾಗಿ ನಡೆದುಕೊಳ್ಳಲಾಯಿತು.

ಈ ಹಿನ್ನೆಲೆಯಲ್ಲಿ ಭಾರತ ಸರಕಾರ ದೃಢ ಪ್ರತಿಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಹಾಗೂ ಇತರ ಎಡಪಕ್ಷಗಳು ಆಗ್ರಹಿಸಿವೆ, ಅಮೆರಿಕಾ ರಾಜತಾಂತ್ರಿಕರಿಗೆ ಸಂಬಂಧಪಟ್ಟಂತೆ ವಿಯೆನ್ನಾ ಅಧಿನಿರ್ಣಯಕ್ಕೆ ಬದ್ಧವಾಗಿರುತ್ತದೆ ಎಂಬ ಭರವಸೆಯನ್ನು ಅಮೆರಿಕನ್ ಸರಕಾರದಿಂದ ಪಡೆಯಬೇಕು ಎಂದು ಸಿಪಿಐ(ಂ) ಒತ್ತಾಯಿಸಿದೆ.

ದೇಶದಾದ್ಯಂತ ವ್ಯಕ್ತಗೊಂಡ ಭಾರೀ ಆಕ್ರೋಶದ ಹಿನ್ನೆಲೆಯಲ್ಲಿ ಯುಪಿಎ-2 ಸರಕಾರ ಅಮೆರಿಕನ್ ರಾಜತಾಂತ್ರಿಕರಿಗೆ ಕೊಡಮಾಡಿದ್ದ ವಿಶೇಷ ಸೌಲಭ್ಯಗಳಲ್ಲಿ ಹಲವನ್ನು ಹಿಂತೆಗೆದುಕೊಂಡಿದೆ. ಇಂತಹ ಸೌಲಭ್ಯಗಳ ಪಟ್ಟಿಯೇ ಅಮೆರಿಕನ್ನರಿಗೆ ನಮ್ಮ ದೇಶದಲ್ಲಿ ಆಧುನಿಕ ದೊರೆಗಳ ಸ್ಥಾನಮಾನ ನೀಡಲಾಗಿತ್ತು ಎಂಬುದರ ಒಂದು ಇಣುಕುನೋಟ ಕೊಟ್ಟಿದೆ.


ಅಮೆರಿಕಾ ಸಂಯುಕ್ತ ಸಂಸ್ಥಾನ 1963ರ ವಿಯೆನ್ನಾ ಅಧಿನಿರ್ಣಯವನ್ನು ತನ್ನ ದೇಶದೊಳಗೆ ಪಾಲಿಸಬೇಕಾಗಿ ಬರುವಾಗ ಅದರ ವ್ಯಾಖ್ಯಾನದಲ್ಲಿ ತನಗೆ ಬೇಕೆನಿಸಿದ ಹಲವಾರು ಮಿತಿಗಳನ್ನು ಹಾಕುತ್ತದೆ. ಆದರೆ ಬೇರೆ ದೇಶಗಳಲ್ಲಿ ಅದರ ಅತ್ಯಂತ ಉದಾರ ವ್ಯಾಖ್ಯಾನ ಮಾಡುತ್ತ ತನ್ನ ಬೇಹುಗಾರರು ಮತ್ತು ಇಂತಹ ಕೃತ್ಯಗಳನ್ನು ನಡೆಸಲು ಅದು ಕಳಿಸುವ ಕಾಂಟ್ರಾಕ್ಟರುಗಳಿಗೂ ರಕ್ಷಣೆಯನ್ನು ಪಡೆಯುತ್ತದೆ ಎಂದಿದ್ದಾರೆ ಪ್ರಖ್ಯಾತ ರಾಜತಾಂತ್ರಿಕ ವಿಷಯಗಳ ಪರಿಣಿತರಾದ ಬ್ರಹ್ಮ ಚೆಲ್ಲನೆಯವರು.

'ಭಜರಂಗಿ' ಮೌಢ್ಯದ ಸುತ್ತ



ಶಿವಲಿಂಗೇಗೌಡ ಹೆಚ್.ಸಿ

ಅದು ಉತ್ತರ ಕರ್ನಾಟಕದ ಒಂದು ಪುಟ್ಟ ಗ್ರಾಮ ರಾಮದುರ್ಗ. 'ಅಲ್ಲಿ ಮಾಟ-ಮಂತ್ರ ಮಾಡುವವರು, ಅದಕ್ಕಾಗಿ ನರಬಲಿ ನೀಡುವ ನರರಾಕ್ಷಸರು, ಅವರಿಂದ ತಮ್ಮ ಮಾನ-ಪ್ರಾಣಗಳನ್ನು ಕಳೆದುಕೊಳ್ಳುವ ಮಹಿಳೆಯರು, ಈ ಸನ್ನಿವೇಶದಲ್ಲಿ ನಮ್ಮನ್ನು ಈ




ಕ್ರೂರಿಗಳಿಂದ ಕಾಪಾಡಲು ಯಾರೂ ಇಲ್ಲವೇ ಎಂಬ ಹೆಣ್ಣಿನ ಕೂಗು, ಇದಕ್ಕೆ ಉತ್ತರವಾಗಿ ನಮ್ಮನ್ನು ಕಾಪಾಡಲು ದೇವರು ಒಬ್ಬನನ್ನು ಸೃಷ್ಟಿಮಾಡಿದ್ದಾನೆ ಅವನು ಬರುವವರೆಗೂ ಕಾಯುತ್ತೇವೆಂದು ಕೂಗುವ ಮತ್ತೊಬ್ಬ ವ್ಯಕ್ತಿ. ಕೊನೆಗೆ ಈ ಕ್ರೌರ್ಯ ಸಾಮ್ರಾಜ್ಯವನ್ನು ನಾಶ ಮಾಡಲು ಬೆಂಗಳೂರಿನಿಂದ ರಾಮದುರ್ಗಕ್ಕೆ ನಾಯಕ ಜೀವ ಬರುತ್ತಾನೆ. ಕೊನೆಯಲ್ಲಿ ಶತ್ರು ಸಂಹಾರ, ನಾಯಕನಿಗೆ ವಿಜಯದ ಜೈಕಾರ. ಇದು ಚಿತ್ರದ ಸಂಕ್ಷಿಪ್ತ ಸ್ಟೋರಿ. ಆದರೆ ಕಥೆಯನ್ನು ಒಳಹೊಕ್ಕು ನೋಡಿದರೆ ನಮ್ಮ ಅಜ್ಜ-ಅಜ್ಜಿಯರು ಹೇಳುತ್ತಿದ್ದ ಮಂತ್ರವಾದಿಗಳ ಕಥೆಗೂ ಭಜರಂಗಿ ಕಥೆಗೂ ತಾಳೆ ಇದೆ ಅನಿಸುತ್ತಿದೆ. ಈ ರೀತಿಯ ಕಥೆಗಳುಳ್ಳ ಹಲವಾರು ಚಿತ್ರಗಳು ಬಂದಿರುವ ಉದಾಹರಣೆಗಳು ನಮ್ಮ ಮುಂದಿವೆ. ಆ ಚಿತ್ರಗಳಿಗೆ ಈ ಚಿತ್ರಕ್ಕೂ ಕಥೆಯಲ್ಲಿ ಹೇಳಿಕೊಳ್ಳುವ ವ್ಯತ್ಯಾಸವೇನು ಇಲ್ಲ. ಹಿಂದೆ ಬಂದ ಸಿನಿಮಾಗಳು ದೇವರು vs ಮಾಂತ್ರಿಕ, ಕೆಲವು ದೇವರು vs ಕ್ಷುದ್ರದೇವರುಗಳ ಮೇಲೆ ಚಿತ್ರಿತವಾಗುತ್ತಿದ್ದವು. ಮಾಂತ್ರಿಕ VS ಮಾನವ ಕಥೆಗಳು ಕಡಿಮೆ ಎನ್ನುವಂತಿದ್ದವು.

ಸುಮಾರು ವರ್ಷಗಳ ಹಿಂದೆ ಡಕಾಯಿತರ ದೊರೆಯಾಗಿ ಆಳಿದ ಭಜರಂಗಿಯೇ ಈ ಕಥೆಯ ಮೂಲ ಪುರುಷ. ಅವನ ಪುನರ್ಜನ್ಮವಾಗಿ ಹುಟ್ಟಿದ ಅವನ ಮೊಮ್ಮಗ ಜೀವ ಈ ಕಥೆಯ ಕೇಂದ್ರ ಪುರುಷ. ಇವರಿಬ್ಬರ ಕಡು ವೈರಿ ರಕ್ತಾಕ್ಷ ಎಂಬ ಮಂತ್ರವಾದಿ. ಇವರಿಬ್ಬರ ನೆಲೆಯೇ ರಾಮದುರ್ಗ ಎಂಬ ಹಳ್ಳಿ, ಇನ್ನೂ ಮುಂದೆ ಏನಾಗಬಹುದು ಎಂಬುದನ್ನು ನಾನು ಹೇಳಬೇಕಿಲ್ಲ. ನೀವೇ ಊಹಿಸಿಕೊಂಡರು ಕಥೆ ನಿಮ್ಮ ಮುಂದೆ ಪ್ರತ್ಯಕ್ಷವಾಗುತ್ತದೆ.

ದಿನ ನಿತ್ಯ ನಮ್ಮ ಟಿವಿಗಳ ಪರದೆ-ಯ ಮೇಲೆ ಪ್ರಸಾರವಾಗುವ ಮಾಟ-ಮಂತ್ರದ ಬಗೆಗಿನ (ಸ್ವಯಂಸೃಷ್ಟಿಯೂ ಸೇರಿ) ವರದಿಗಳನ್ನು, ಪೂರ್ವಜನ್ಮ ಎಂಬ ಶಬ್ಧವನ್ನೇ ಬಂಡವಾಳ ಮಾಡಿಕೊಂಡಿ ಬರುತ್ತಿರುವ ಸರಣಿ ಕಾರ್ಯಕ್ರಮಗಳಿಗೂ ಮೀರಿದ ಮತ್ತೊಂದು ಹೈಟೆಕ್ ಕಥೆಯೇ ಭಜರಂಗಿ. ಸಿನಿಮಾದುದ್ದಕ್ಕೂ ನಮಗೆ ನಿಮಗೆ ನೋಡಸಿಗುವುದು ಕೇವಲ ಪೂರ್ವಜನ್ಮ, ಪುನರ್ಜನ್ಮ, ಮಂತ್ರವಾದಿಯ ಉಗ್ರಯಾಗ, ಸ್ವಲ್ಪ ಹೆಚ್ಚೆನ್ನುವ ಭಜರಂಗಿಯ ವೈಭವದ, ಜೊತೆಗೆ ಕಥೆ ನಾಯಕನ ವೈಭವವೇನೂ ಕಡಿಮೆ ಇಲ್ಲ. ಒಂದು ಹಂತದಲ್ಲಿ ಕಥೆ ಮತ್ತು ಸಾಲು ಸಾಲು ಸಂಭಾಷಣೆಗಳು ನಾಯಕನಿಗಾಗಿಯೇ ಬರೆದಂತಿವೆ, ಒಟ್ಟಾರೆ ಕಥೆ ತನ್ನ ಸ್ವಂತಿಕೆಯನ್ನು ಕಳೆದುಕೊಂಡು ವಾಸ್ತವತೆಗೆ ದೂರವಾಗಿ ನಿಲ್ಲುತ್ತದೆ.

ಕಥೆಯನ್ನು ಬದಿಗೆ ಸರಿಸಿ ಚಿತ್ರವನ್ನು ನೋಡುವುದಾದರೆ ನಿರ್ದೇಶಕ ನೀಡಿದ ಪಾತ್ರಗಳಿಗೆ ಜೀವ ತುಂಬಲು ಮತ್ತು ಸತತ ಸೋಲುಗಳ ನಂತರ ಮತ್ತೊಮ್ಮೆ ಹಿಟ್ ಪಡೆಯಲು "ಸೆಂಚುರಿಸ್ಟಾರ್" ತನ್ನ 50ನೇ ವಯಸ್ಸಿನಲ್ಲಿಯೂ ದೇಹವನ್ನು ದಂಡಿಸಿ 'ಸಿಕ್‌ಪ್ಯಾಕ್ ಬಾಡಿ'ಯನ್ನು ಮಾಡಿಕೊಂಡಿದ್ದಾರೆ. ಉಳಿದಂತೆ ಶಿವರಾಜ್‌ಕುಮಾರ್ ಜೊತೆಯಲ್ಲಿ ಮೊದಲ ಬಾರಿಗೆ ನಾಯಕಿಯಾಗಿ ನಟಿಸಿದ ಐಂದ್ರಿತಾರೇ ಸಿಕ್ಕಾಪಟ್ಟೆ ಆಕ್ಷನ್‌ನಲ್ಲಿ ಮಿಂಚಿದ್ದಾ-ರೆ. ಕಥೆಯಲ್ಲಿ ನಾಯಕನಿಗೆ ಸರಿಸಾಟಿಯಾಗಿ ಇಬ್ಬರು ರಂಗಭೂಮಿಯಿಂದ ಬಂದ ಖಳನಟರು ಮಿಂಚಿದ್ದಾರೆ. ಅದರಲ್ಲೂ ರಾಣಾ ಪಾತ್ರ ಧಾರಿ ಸೌರವ್ ಲೋಕೇಶ್ ನಟನೆಯನ್ನು ಮರೆಯಲೂ



ಸಾಧ್ಯವೇ ಇಲ್ಲ. ಒಂದು ಹಂತದಲ್ಲಿ ಕಥೆ-ಯ ದಾರಿಯನ್ನೇ ಬದಲಿಸುವ ಈ ಪಾತ್ರವನ್ನು ಲೋಕೇಶ್ ನಿಭಾಯಿಸಿದ್ದಾರೆ. ಉಳಿದಂತೆ ಕೃಷ್ಣೆ ಪಾತ್ರದಲ್ಲಿ ರುಕ್ಮಿಣಿಯ ಅಭಿನಯವನ್ನು ಇಲ್ಲಿ ತಿರಸ್ಕರಿಸುವಂತಿಲ್ಲ. ಉಳಿದ ನಟರಾದ ಬುಲೆಟ್ ಪ್ರಕಾಶ್, ತಬಲಾ ನಾಣಿ, ಹರಿಣಿ, ಶಿವರಾಂ, ಗಿರಿಜಾ ಲೋಕೇಶ್ ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಗೆಳೆಯ ಚಿತ್ರದ ನಂತರ ಒಂದು 'ಹಿಟ್' ಚಿತ್ರ ನೀಡಬೇಕೆಂಬ ಆಸೆ ಮತ್ತು ಅತುರದಲ್ಲಿ ನಿರ್ದೇಶಕರು ತಮ್ಮ ಹಳೆಯ ತಪ್ಪನ್ನೇ ಇಲ್ಲಿಯೂ ಸಹ ಮಾಡಿದ್ದಾರೆ. ಛಾಯಾಗ್ರಹಣ ಮತ್ತು ಹಿನ್ನೆಲೆ ಸಂಗೀತ ವಿಭಾಗಗಳಲ್ಲಿ ಯಾವುದೇ ರಾಜಿಯನ್ನು ಮಾಡಿಕೊಂಡಿಲ್ಲದ ಚಿತ್ರತಂಡ ಈ ವಿಭಾಗಗ ಉತ್ತಮವಾಗಿ ಕೆಲಸಮಾಡಿದೆ.

ಆಶಯ :

ಇಂದಿನ ಸಮಾಜದ ನೈಜ ಮುಖವ ಜನರ ನೋವುಗಳನ್ನು ಬಿಂಬಿಸುವ, ಜ ಮನಸ್ಸಿನ ತಲ್ಲಣಗಳ ಬಗ್ಗೆ ಬೆಳಕು ಚೆ ಸಮಾಜ ಮುಖಿ ಚಿತ್ರಗಳು ಬರುತ್ತಿಲ್ಲವೆ ನೋವು ನಮ್ಮಲ್ಲಿ ಸದಾ ಕಾಡುತ್ತಿದೆ. ಕೆ ಬಾರೀ ಈ ರೀತಿಯ ಚಲನ ಚಿತ್ರ ಬಂದರೂ ಅವುಗಳು 'ಹೈ ಬಜೆಟ್' ಚಿತ್ರ ಸರಿಸಾಟಿಯಾಗಿ ಚಿತ್ರ ಮಂದಿರಗಳಲ್ಲಿ ನಿ ಹಂಚಿಕೆದಾರರು ಬಿಡುತ್ತಿಲ್ಲ. ಕಾರಣ ಮಂದಿರಗಳ ಸಮಸ್ಯೆ ಎಂಬುದು ಗೊ ವಿಷಯ. ಹಿಂದೆ ಬೆಂಗಳೂರಿನ ಮೆಜೆ ಪ್ರದೇಶದಲ್ಲಿ ಸುಮಾರು 22 ಚಿತ್ರಮಂತ್ರಿಗಳಿದ್ದ ಆದರೆ ಈಗ ಅಲ್ಲಿರುವುದು ಕೇವಲ ಮಾತ್ರ. ಇನ್ನು ಎರಡು ಚಿತ್ರ ಮಂದಿರ ಅದೇ ಹಾದಿಯಲ್ಲಿವೆ. ನಶಿಸಿಹೋದ ಹ ಚಿತ್ರಮಂದಿರಗಳು ಈಗ ದೊಡ್ಡ ಕಾಂಪ್ಲೆಕ್ಸ್‌ಗಳ ಮಲ್ಟಿಪ್ಲೇಕ್ಸ್‌ಗಳಾಗಿ ತಲೆಎತ್ತಿವೆ. ಜಾಗತೀಕ ಯಾವ ಕೇತ್ರವನ್ನೂ ತಟ್ಟದೇ ಬಿಟ್ಟಿಲ್ಲ. ಇ ಧೋರಣೆಗಳು ಮುಂದುವರೆದರೆ ಮು ಚಿತ್ರಮಂದಿರಗಳ ಸಮಸ್ಯೆಯಿಂದ ನಿರ್ಮಾಪಕರು, ನಿರ್ದೇಶಕರು ಸದಭಿರುಚಿ ಮತ್ತು ಪ್ರಯೋಗಾತ್ಮಕ ಚಿತ್ರಗಳನ್ನು ನಿರ್ಮಿಸ ಹಿಂಜರಿಯುತ್ತಾರೆಂಬ ಆಂತಕ ಮೂಡಿದೆ. ಬಗ್ಗೆ ರಾಜ್ಯ ಸರ್ಕಾರ ಮತ್ತು ವಾಣಿಜ್ಯ ಮಂ ಗಮನ ಹರಿಸಬೇಕಿದೆ. ಇದು ಸಕಾರ ಮತ್ತು ಜ ಎಲ್ಲರೂ ಗಮನಿಸಬೇಕಾದ ಸಮಸ್ಯೆಯಾಗಿದೆ.

ಸಿ.ಇ.ಟಿ..........

ಪುಟ 3 ರಿಂದ

ಪ್ರತಿಕೃತಿ ದಹನ

ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಟೌನ್‌ಹಾಲ್ ಮುಂಭಾಗದಲ್ಲಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ(ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಕಾಯ್ದೆ-2006 ವಿರೋಧಿಸಿ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರ ಪ್ರತಿಕೃತಿ ದಹನ ಮಾಡಲಾಯಿತು. ಈ ಕಾಯ್ದೆಯನ್ನು 2014-15ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲು ತೀರ್ಮಾನಿಸಿರುವ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯನ್ನುದ್ದೇಶಿಸಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್, ಜಿಲ್ಲಾ ಕಾರ್ಯದರ್ಶಿ ಚಿಕ್ಕರಾಜು. ಎಸ್. ಮಾತನಾಡಿದರು. ಜಿಲ್ಲಾ ಉಪಾಧ್ಯಕ್ಷರಾದ ಯುವರಾಜ್ ಎಂ.ಪಿ., ಮುಖಂಡರಾದ ಶೃತಿ, ಹನುಮಂತ್ ದುರ್ಗದ್, ಯತೀಶ್, ಕಿರಣ್ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೇಡಿಕೆಗಳು

1. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಕಾಯ್ದೆ 2006 ನ್ನು ತಿರಸ್ಕರಿಸಬೇಕು.
2. ಕಾಮೆಡ್-ಕೆ ಪರಿಕ್ಷೆಗಳನ್ನು ರದ್ದುಪಡಿಸಬೇಕು.
3. ಸರ್ಕಾರಿ ಸಿ.ಇ.ಟಿ ಮೂಲಕವೇ ಪ್ರವೇಶ ಪ್ರಕ್ರಿಯೆ ನಡೆಸಬೇಕು. ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ಮಾಡಲು ಖಾಸಗೀ ಕಾಲೇಜುಗಳಿಗೆ ಅಧಿಕಾರ ನೀಡುತ್ತಿರುವ ನ್ಯಾ.ಗುಂಜಾಳ, ನ್ಯಾ.ಜಗನಾಥ್ ವರದಿ ತಿರಸ್ಕರಿಸಬೇಕು.
4. ಸರ್ಕಾರಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಸೀಟುಹಂಚಿಕೆ ಸರ್ಕಾರಿ 75 : ಖಾಸಗಿ 25ರ ಅನುಪಾತದಲ್ಲಿರಬೇಕು.
5. ಸಿ.ಇ.ಟಿ. ಅಕ್ರಮ ಸೀಟು ಮಾರಾಟ ದಂಧೆಯ ಜಾಲವನ್ನು ತಕ್ಷಣ ಪತ್ತೆ ಹಚ್ಚಿ ತಪ್ಪಿತಸ್ಥರನ್ನು ಕಠಿಣ ಕಾನೂನು ಶಿಕ್ಷೆಗೊಳಪಡಿಸಿ.
6. ಇರುವ ಎಲ್ಲಾ ಸರ್ಕಾರಿ ಕಾಲೇಜುಗಳಿಗೆ ಅತ್ಯಾಧುನಿಕ ಮೂಲಸೌಕರ್ಯಗಳನ್ನು ಒದಗಿಸಿ.
7. ಹೊಸ ಇಂಜಿನಿಯರಿಂಗ್, ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಿ.
8. ಖಾಸಗೀ ವೃತ್ತಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿರುವ ಕೇಂದ್ರೀಯ ಶಾಸನವನ್ನು ಕೇಂದ್ರ ಸರ್ಕಾರ ಜಾರಿಗೆ ತರಬೇಕು.
9. ಈಗಾಗಲೇ ಏರಿಕೆ ಮಾಡಿರುವ ಶುಲ್ಕಗಳನ್ನು ತಕ್ಷಣ ಬಡ ವಿದ್ಯಾರ್ಥಿಗಳ ಕೈಗೆಟುಕುವಂತೆ ನಿಗದಿಗೊಳಿಸಿ.

ಕಾಯಕ ಬಂಧುಗಳ ಸಮಾವೇಶ........

ಪುಟ 9 ರಿಂದ

ಪ್ರಮಾಣವನ್ನು ಕಡಿಮೆಮಾಡಬೇಕು.

12. ನೀರಾವರಿ ಪ್ರದೇಶಗಳಲ್ಲಿ ಕಾಲುವೆಗಳ ಹೂಳೆತ್ತುವ ಕೆಲಸವನ್ನು ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಸೇರಿಸಬೇಕು.
13. ಅರಣ್ಯ ಸಸಿಗಳನ್ನು ಬೆಳೆಸುವ ನರ್ಸರಿಗಳಲ್ಲಿ ಉದ್ಯೋಗ ಖಾತ್ರಿ ಕೆಲಸಗಾರರಿಗೆ ಕೆಲಸ ಒದಗಿಸಬೇಕು.
14. ತೆರೆದ ಬಾವಿಯಿಂದ ಮಣ್ಣನ್ನು ಮೇಲೆತ್ತಿ ಹಾಕಲು ನೀಡುವ ಹೆಚ್ಚುವರಿ ದರದಲ್ಲಿಯೇ ಮದಗ ಕೆರೆ ಹೂಳೆತ್ತುವ ಕಾಮಗಾರಿಗಳಿಗೂ ಕೂಲಿ ಸಂದಾಯ ಮಾಡಬೇಕು.
15. ವಾರಕ್ಕೊಮ್ಮೆ ಕಾಯಕ ಬಂಧುವಿನಿಂದ ಫಾರ್ಮ ನಂ. 6 ರಲ್ಲಿ ಅರ್ಜಿಯನ್ನು ಪಡೆಯಬೇಕೆಂಬ ನಿಯಮವನ್ನು ಪಾಲಿಸಲು ಸಹಕರಿಸದಿರುವ ಪಿ.ಡಿ.ಓ.ಗಳ ವಿರುದ್ಧ ಕ್ರಮ ಜರಗಿಸಬೇಕು.
16. ಪ್ರತಿಯೊಂದು ನೊಂದಾಯಿತ ಕುಟುಂಬಕ್ಕೆ ವರ್ಷದಲ್ಲಿ ಕನಿಷ್ಠ 100 ದಿನ ಕೆ ಸಿಗುವುದನ್ನು ಖಚಿತಪಡಿಸಬೇಕು ನೂ ಹೆಚ್ಚು ದಿನ ಕೆಲಸ ಬಯಸುವ ಕುಟುಂಬಗಳ ಅವರ ಬೇಡಿಕೆಗೆ ಅನುಗುಣವಾಗಿ ಕೆಲ ಒದಗಿಸಬೇಕು.
17. ಉದ್ಯೋಗ ಖಾತ್ರಿ ಯೋಜನೆಯ ಅಡಿಯ ಭ್ರಷ್ಟಾಚಾರವನ್ನು ತಡೆಗಟ್ಟಲು ಕಠಿ ಕ್ರಮಗಳನ್ನು ಕೈಗೊಳ್ಳಬೇಕು.
18. ಉದ್ಯೋಗ ಖಾತ್ರಿ ಯೋಜನೆಯ ಅಡಿಯ ಕನಿಷ್ಠ ದಿನಗೂಲಿಯನ್ನು 300 ರೂ. ಗಳ ಹೆಚ್ಚಿಸಬೇಕು.
19. ಇಲಾಖೆಯಿಂದ ಒದಗಿಸಲಾ ಸಹಾಯವಾಣಿ-ಟೋಲ್ ಫ್ರೀ ಕರೆಯಿಂ ಕೂಲಿಕಾರರ ದೂರುಗಳು ದಾಖಲಾಗುತ್ತಿ ಎಲ್ಲಾ ದೂರುಗಳನ್ನೂ ಅದು ದಾಖಲ ಮಾಡಿಕೊಳ್ಳುವಂತಿರಬೇಕು.
20. ಯೋಜನೆಯ ಜಾರಿಗಾಗಿ ನಿಸ್ವಾರ್ಥದಿಂ ಕೆಲಸ ಮಾಡುತ್ತಿರುವ ಕರ್ನಾಟಕ ಪ್ರಾಂತ ಕೃ ಕೂಲಿಕಾರರ ಸಂಘದಂತಹ ಪ್ರಜಾ ಸಂಘಟನೆಗಳ ಕೆಲಸವನ್ನು ಸರ್ಕಾರ ಗೌರವಿ ಪ್ರೋತ್ಸಾಹಿಸಬೇಕು.

ರ್ಲಿಮೆಂಟ್......

11 ರಿಂದ

ಕೆ ಸಮಸ್ಯೆಗಳು ಕೇವಲ ಅವರಿಗೆ ಂಧಿಸಿಲ್ಲ; ಇಡೀ ಜನ ಸಮುದಾಯವನ್ನು ುಸಿವೆ. ಹಣದುಬ್ಬರ/ಬೆಲೆ ಏರಿಕೆ ತಡೆಗಟ್ಟಲು ್ಪ ಕ್ರಮ ಜರುಗಿಸಬೇಕೆಂಬುದು, ್ಯೋಗಾವಕಾಶ ನಿರ್ಮಿಸಬೇಕೆಂಬುದು, ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಳಿಸಬೇಕೆಂಬುದು ಅವರ ಒತ್ತಾಸೆ. ಈ ಬಗ್ಗೆ ಷ್ಟೂ ಭಿನ್ನಾಭಿಪ್ರಾಯ ಸಾಧ್ಯವಿಲ್ಲ". ಅವರ ತು, ತಲೆಮೇಲೆ ಎಣ್ಣೆ ಗಡಿಗೆ ಹೊತ್ತ ಗಾಣ– ಣತಲೆಯ ಮಗುವನ್ನು ನೋಡಿ 'ಅಯ್ಯೋ ರ, ಮಗುವಿನ ನೆತ್ತಿ ಒಣಗಿದೆ' ಎಂದಂತೆ– ಹಿಂದೆ ನಡೆದಿರುವ ಹಲವು ಇಂಡಿಯನ್ ುರ್ ಕಾನ್ಫರೆನ್ಸ್‌ನ ಶಿಫಾರಸುಗಳನ್ನು ಏಕೆ ುಗೊಳಿಸಿಲ್ಲವೆಂದು ಪ್ರಧಾನ ಮಂತ್ರಿಗಳು ್ತರಿಸಬೇಕಾಗಿದೆ. ಸರ್ಕಾರ ತನ್ನ ಕಂಪೆನಿಗಳನ್ನು ಸಗಿಯವರಿಗೆ ಮಾರಾಟ ಮಾಡುವಾಗ, ೇಶಿ ನೇರ ಬಂಡವಾಳ ಹೂಡಿಕೆಗೆ ಅನುವು ುಡುವಾಗ ಇರುವ ತರಾತುರಿ ಮತ್ತು ತ್ತೆ, ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಡಬೇಕಾದಾಗ ಇಲ್ಲದಿರುವುದು, ಗುತ್ತಿಗೆ ಕಾರ್ಮಿಕ ್ತಿ ರದ್ದುಪಡಿಸದಿರುವುದು, ಅಂಗನವಾಡಿ, ಾ, ಬಿಸಿಯೂಟ, ಸರ್ವಶಿಕ್ಷಣ ಅಭಿಯಾನ ಂತಾದ ಯೋಜನೆಗಳಲ್ಲಿ ದುಡಿಯುತ್ತಿರುವ ್ಷಾಂತರ ಕಾರ್ಯಕರ್ತರ ಸೇವಾ ಭದ್ರತೆ ಮತ್ತು ತನ ಹಾಗೂ ಸೌಲಭ್ಯಗಳನ್ನು ವಿಸ್ತರಿಸಲು ಏಕೆ ಸಾಧ್ಯವಾಗಿಲ್ಲದಿರುವುದು ಈ ಬಗೆಗೆ ಅವರು ಕೇಳುತ್ತಿದ್ದರು. ಅವರು ಹುಸಿ ಭರವಸೆಗಳಿಂದ ಸುಮ್ಮನಾಗುವವರಲ್ಲ. ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, ಸರ್ಕಾರ ನಡೆಸುತ್ತಿರುವ ಪಕ್ಷವು ಮುಂಬರುವ ಚುನಾವಣೆಗಳಲ್ಲಿ ದೆಹಲಿ ಚುನಾವಣೆ ಫಲಿತಾಂಶವನ್ನೇ ಎದುರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಮತ್ತೆ.. ಮತ್ತೆ ಮನವಿ.. ಮತ್ತು ಎಚ್ಚರಿಕೆ

ಪಾರ್ಲಿಮೆಂಟ್ ಚಲೋ ಸಂಘಟಿಸಿದ ಎಲ್ಲ ಕೇಂದ್ರ ಸಂಘಟನೆಗಳ ಮುಖಂಡರು ಮಾತನಾಡುತ್ತಾ ಯಾವ ಪಕ್ಷ ಅಧಿಕಾರಕ್ಕೆ ಬಂದರೂ, ಕಾರ್ಮಿಕರ ನ್ಯಾಯವಾದ ಬೇಡಿಕೆಗಳು ಈಡೇರುವವರೆಗೂ ಐಕ್ಯ ಹೋರಾಟಗಳು ಮುಂದುವರಿಯುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಎಲ್ಲ ಕೇಂದ್ರ ಸಂಘಟನೆಗಳ ಮುಖಂಡರುಗಳನ್ನೊಳಗೊಂಡ ಒಂದು ನಿಯೋಗವು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಕಾರ್ಮಿಕರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಕೋರಿತು. ಕೆಲವು ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವುದಾಗಿ ಅವರು ಭರವಸೆ ನೀಡಿದರು. ಅನಂತರ, ನಿಯೋಗವು ಮಂತ್ರಿಗಳ ಗುಂಪಿನ ಅಧ್ಯಕ್ಷರಾದ ಎ.ಕೆ.ಆಂಟೊನಿಯವರನ್ನು ಭೇಟಿಮಾಡಿತು. ಹಣಕಾಸು ಮಂತ್ರಾಲಯವು, ಇ.ಪಿ.ಎಫ್. ಪೆನ್ಷನ್ ಮತ್ತು ಕನಿಷ್ಠ ಕೂಲಿಯ ಬಗ್ಗೆ ಈ ಹಂತದಲ್ಲಾದರೂ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ನಿರೀಕ್ಷಿಸಲಾಗಿದೆ. ಇಲ್ಲದಿದ್ದಲ್ಲಿ.. .. ದುಡಿಯುವ ವರ್ಗ ತಾನು ಏನು ತನ್ನ ಶಕ್ತಿ ಏನು ಎಂದು ಆಳುವವರಿಗೆ ಪರಿಚಯಿಸುವ ದಾರಿಯಲ್ಲಿ ಮುಂದೆ ಹೋಗಬೇಕಾಗುತ್ತದೆ. ●

ಲೋಕಪಾಲ್......

ಪುಟ 7 ರಿಂದ

ತಪಾಸಣೆಗೆ ಲೋಕಾಯುಕ್ತಗಳ ರಚನೆ.

6. ಕಪ್ಪು ಹಣವನ್ನು ಹೊರತೆಗೆಯಲು ಕ್ರಮಗಳು ಮತ್ತು ದೂರದ ತೆರಿಗೆ ಧಾಮಗಳಲ್ಲಿ ಕಾನೂನುಬಾಹಿರವಾಗಿ ಪೇರಿಸಿಟ್ಟ ನಿಧಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು.

ಆದ್ದರಿಂದ, ಸಂಸತ್ತು ಲೋಕಪಾಲ ಸಂಸ್ಥೆಯನ್ನು ಕೊನೆಗೂ ಕಾನೂನುಬದ್ಧಗೊಳಿಸಿದರೂ, ಸದಾ ಬೆಳೆಯುತ್ತಿರುವ ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರದ ಪಿಡುಗನ್ನು ಎದುರಿಸುವ ಶಾಸನಕ್ಕಾಗಿ ಇನ್ನೂ ಬಹಳಷ್ಟು ಮಾಡಬೇಕಾಗಿದೆ.

ಅಂತಿಮವಾಗಿ ಹೇಳುವುದಾದರೆ, ಭ್ರಷ್ಟಾಚಾರದ ಪಿಡುಗನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾದರೆ ಅದು, ನಾವು ಜನತೆ ಸಾಮೂಹಿಕವಾಗಿ ನಮ್ಮ ಸಮಾಜದ ಸಾಮಾಜಿಕ ಪ್ರಜ್ಞೆಯ ಮಟ್ಟವನ್ನು ಎತ್ತರಿಸಿದರೆ ಮಾತ್ರ ಸಾಧ್ಯ. ಇದಕ್ಕೆ ಒಂದು ಮಟ್ಟದ ರಾಜಕೀಯ ನೈತಿಕತೆ ಬೇಕಾಗುತ್ತದೆ .ಆದರೆ ಈಗಿರುವ ಪ್ರಧಾನ ರಾಜಕೀಯ ಪಕ್ಷಗಳಲ್ಲಿ ಅದರದ್ದೇ ಅಭಾವವಿದೆ. ಎಡಪಕ್ಷಗಳು ಮಾತ್ರವೇ ಇದಕ್ಕೆ ಅಪವಾದ. ನಮ್ಮ ಸಮಾಜವನ್ನು ತ್ವರಿತವಾಗಿ ಅವನತಿ ಹೊಂದುತ್ತಿರುವ ರಾಜಕೀಯ ನೈತಿಕತೆ–ಯ ಕೆಸರಿನಿಂದ ಶುದ್ಧಗೊಳಿಸಲು ಭ್ರಷ್ಟಾಚಾರದ ಮಟ್ಟಗಳಲ್ಲಿ ಪರಸ್ಪರ ಸ್ಪರ್ಧೆಗಿಳಿದಿರುವ ಕಾಂಗ್ರೆಸ್ ಮತ್ತು ಬಿಜೆಪಿ ಈ ಎರಡು ಪ್ರಧಾನ ರಾಜಕೀಯ ಗುಂಪುಗಳಿಗೆ ಒಂದು ರಾಜಕೀಯ ಪರ್ಯಾಯ ಬೇಕಾಗಿದೆ. ●

ಯು.ಪಿ.ಎ ದರ್ಬಾರ್......

ಪುಟ 13 ರಿಂದ

ಕ್ಕೆ ಆಕ್ಷೇಪ ಬರುತ್ತದೆ. ಬೇಕಾದರೆ, ಪಾಶ್ಚಿಮಾತ್ಯ ದೇಶಗಳಲ್ಲಿ ಶ್ರೀಮಂತ ರೈತರಿಗೆ 'ನಗದು ವರ್ಗಾವಣೆ'ಯ ಮೂಲಕ ಸಬ್ಸಿಡಿ ಕೊಡುವಂತೆ ಕೊಡಿ ಎಂಬುದು ಅವರ ತರ್ಕ. ಭಾರತದ 12 ಕೋಟಿಗೂ ಮೀರಿದ ಬಡ ರೈತ ಕುಟುಂಬಗಳಿಗೆ ಈ ರೀತಿಯ 'ನೇರ ನಗದು ವರ್ಗಾವಣೆ'ಯ ಮೂಲಕ ಸಬ್ಸಿಡಿಗಳನ್ನು ಒದಗಿಸುವುದು ಸಾಧ್ಯವಿಲ್ಲ ಎಂಬುದು ಅವರಿಗೆ ಬೇಕಿಲ್ಲ.

ಆದರೆ ನವ–ಉದಾರವಾದವನ್ನು ಅಪ್ಪಿಕೊಂಡು 'ನೇರ ನಗದು ವರ್ಗಾವಣೆ'ಯ ಗೀಳು ಹಚ್ಚಿಸಿಕೊಂಡಿರುವ ಯುಪಿಎ–2 ಸರಕಾರ–ಕ್ಕೆ ಬಹಶಃ ಇದೇ ಬೇಕಾಗಿದೆ. ಆದ್ದರಿಂದಲೇ ಒಂದೆಡೆ ಬಾಲಿಯಲ್ಲಿ ತಾನು ಅದುವರೆಗೆ ತಳೆದ ನಿಲುವನ್ನು ತನ್ನದೇ ಕರಡಿನಲ್ಲಿ ಕೈಬಿಟ್ಟು, ಮತ್ತೊಂದೆಡೆ ಮುಂಬರುವ ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯಲ್ಲಿ, ತಾನೇ ಸಲ್ಲಿಸಿದ ಕರಡಿನ ಮೇಲೆ ಆಗಿರುವ ಒಪ್ಪಂದ ತನ್ನ ವಿಜಯ ಎಂದು ಬೆನ್ನು ತಟ್ಟಿಕೊಳ್ಳುತ್ತಿದೆ. ಇದು, ಪ್ರಭಾತ್ ಪಟ್ನಾಯಕ್ ಅವರು ಹೇಳುವಂತೆ ಹೆಮ್ಮೆ ಪಡಬೇಕಾದ ಸಂಗತಿಯಲ್ಲ, ಬದಲಿಗೆ, ದೇಶದ ಸಾರ್ವಭೌಮತೆ ಮತ್ತು ನಮ್ಮ ಚುನಾಯಿತ ಸಂಸತ್ತಿನ ಪರಮಾಧಿಕಾರವನ್ನು ಬಿಟ್ಟುಕೊಟ್ಟ, ಜತೆಗೆ ಮೂರನೇ ಜಗತ್ತಿನ ದೇಶಗಳ ಹಿತಗಳನ್ನು ಬಿಟ್ಟುಕೊಟ್ಟ ವಿಷಾದದ ಸಂಗತಿ. ●

ನ ನುಡಿ......

ಟ 16 ರಿಂದ

್ಟಿಗೂ ಸಾಂಸ್ಕೃತಿಕ ರಾಜಕೀಯ ಮಹತ್ವ ಂದಿದೆ. ಇದು ನಮ್ಮ ರಾಜ್ಯ ಮತ್ತು ಶದಲ್ಲಿ ಕೆಳಗಿನಿಂದ ಮೇಲಕ್ಕೆ ಹೊಮ್ಮುತ್ತಿರುವ –ಪರ ಪರ್ಯಾಯದ ಸಂಕೇತ. ಭಾರತದ ಜಕೀಯದ ಮೇಲೆ ಕಾಂಗ್ರೆಸ್ ಮತ್ತು ೆಪಿಗಳ ದ್ವಿ–ಸ್ವಾಮ್ಯವನ್ನು ಒಡೆಯಲು ಬೇಕಾದ –ಪ್ರಜಾಸತ್ತಾತ್ಮಕ ಬದಲಿಗೆ ಸಾಂಸ್ಕೃತಿಕ ಕೆ ಸಿದ್ಧವಾಗುತ್ತಿದೆ ಎಂಬ ಆಶಾಭಾವನೆ ೂಡಿಸುವಂತದ್ದು. ಇಂತಹ ಸಮಾವೇಶ ಘಟಿಸುವುದರಲ್ಲಿ ನಾಯಕತ್ವ ನೀಡಿದ ್.ಎಸ್.ಅನುಪಮ, ಮುನೀರ್ ಕಾಟಿಪಳ್ಳ ತ್ತು ನವೀನ್ ಸೂರಿಂಜೆ ಅವರುಗಳನ್ನೂ; ಮಿಮತ' ಕಟ್ಟಲು ಸಹಯೋಗ ನೀಡಿದ ಎಲ್ಲಾ ಘಟನೆಗಳನ್ನೂ ತಮ್ಮ ಚಾರಿತ್ರಿಕ ಜವಾಬ್ದಾರಿ ರ್ವಹಿಸಿದ್ದಕ್ಕೆ ಅಭಿನಂದಿಸಲೇಬೇಕು.

* * *

ನುಡಿ'ಯಲ್ಲಿ ಮಾರ್ದನಿಸಿದ ನುಡಿಗಳು

"ನಾನು ಕೋಮುವಾದಿ ವ್ಯಕ್ತಿ, ಸಂಘಟನೆ ತು ಸರ್ಕಾರಗಳ ಕಾರ್ಯಕ್ರಮ ಮತ್ತು ್ಯೋಜನೆಗಳಲ್ಲಿ ಭಾಗವಹಿಸುವುದಿಲ್ಲ. ಅವರ ಸ್ತಿ, ಪುರಸ್ಕಾರಗಳನ್ನು ಸ್ವೀಕರಿಸುವುದಿಲ್ಲ" ನುಪಮ);

"ಸಾಹಿತ್ಯ ಇಂದು ಅನುಸರಿಸಬೇಕಾದ್ದು ್ಯ ಹಿಂಸೆಗಳನ್ನು ವ್ಯಕ್ತಪಡಿಸುವಂತಹ ಬೇಡ್ಕರ್ ಮಾರ್ಗವನ್ನು. ಇಂದಿನ ್ತಿಯಲ್ಲೂ ಕಾವ್ಯ ಬುಡಮೇಲು (ಸಬ್ವರ್ಸಿವ್) ್ಣವನ್ನು ಉಳಿಸಿಕೊಳ್ಳಬೇಕು.. ನಮ್ಮೆದುರು ್ತಿಯುವ ವಿದ್ಯಮಾನಗಳನ್ನು ಅದರ ನಿಜವಾದ ್ಪದಲ್ಲಿ ಕರೆಯಬೇಕಾಗಿದೆ. ಗುಜರಾತ್‌ನಲ್ಲಿ ನಡೆದ 2002ರಲ್ಲಿ ನಡೆದ ನರಮೇಧವನ್ನು ನರಮೇಧ ಎಂದೇ ಕರೆಯಬೇಕು. ದಂಗೆಗಳು ಎಂದಲ್ಲ." (ಚೆನ್ನಿ);

"ಬಿಡಿಬಿಡಿಯಾಗಿ ಚದುರಿ ಹೋಗಿರುವ ಜನರ ಹೋರಾಟಗಳೂ ಸಂಘಟನೆಗಳು ಸೌಜನ್ಯ ಪ್ರಕರಣದಲ್ಲಿ ಆದಂತೆ ಒಂದಾಗಿ ಹೋರಾಡಬೇಕಾಗಿದೆ. ಜನರ ಹೋರಾಟಗಳೂ ಸಂಘಟನೆಗಳೂ ಸಿಗಿದು ಚೂರು ಚೂರು ಮಾಡಿದರೂ ಮತ್ತೆ ಮತ್ತೆ ಒಂದಾಗುವ ಜರಾಸಂಧನಂತೆ ಆಗಬೇಕಾಗಿದೆ." (ಸಬಿಹಾ);

'ಸಾಹಿತ್ಯ ಕಲೆಯಲ್ಲಿ ನವರಸಗಳು ಇರಬೇಕು ಅಂತಾರೆ. ಆದರೆ 'ಶ್ರಮ ರಸ' ಇಲ್ಲದೆ ಒಂಬತ್ತು ರಸಗಳಲ್ಲಿ ಯಾವುವು ಇರಲಾರವು..ವಿರಾಸತ್ ಎನ್ನುವುದೇ ಪಾಳೆಯಗಾರಿಯ ವಾಸನೆ ಹೊಡೆಯುವ ಶಬ್ದ."(ಮೀನಾಕ್ಷಿ);

"ಕರಾವಳಿ ಜಿಲ್ಲೆಗಳಲ್ಲಿ ಇತಿಹಾಸದ ಚಕ್ರವನ್ನು ಶಿಲಾಯುಗಕ್ಕೆ ಹಿಂದಕ್ಕೆ ತಿರುಗಿಸುವ ಪ್ರಯತ್ನ ನಡೆದಿದೆ. ಇಲ್ಲಿನ ಬಹುಸಂಸ್ಕೃತಿಗಳ ಸಹಬಾಳ್ವೆ, ಮಾತೃಪ್ರಧಾನ ಕುಟುಂಬದಲ್ಲಿ ವ್ಯಕ್ತವಾದ ಮಹಿಳೆಯರ ಸ್ವಾತಂತ್ರ್ಯ ಮತ್ತು ಆತ್ಮಗೌರವ; ಭೂಸುಧಾರಣೆ, ಸಾಮಾಜಿಕ ನ್ಯಾಯ, ಮಾನವ ಕೇಂದ್ರಿತ ಅಭಿವೃದ್ಧಿ ಮಾದರಿ – ಇವೆಲ್ಲವನ್ನು ಅಗೋಚರ ಸರ್ಕಾರವೊಂದು ಅದರ ವಿರುದ್ಧ ದಿಕ್ಕಿನಲ್ಲಿ ಬದಲಾಯಿಸಲು ಪ್ರಯತ್ನಿಸುತ್ತಿದೆ." (ಅಮೀನ್ ಮಟ್ಟು);

"ಇಲ್ಲಿನ ದೈವವಾದ ನಾಗಬ್ರಹ್ಮರಲ್ಲಿ ಹೆಣ್ಣು ಬೇಕೆಂದು ಕೇಳುವ ಏಕೈಕ ಪ್ರದೇಶ ಇದಾಗಿದೆ. ಇಲ್ಲಿನ ಇತಿಹಾಸದಲ್ಲಿ ಹೆಣ್ಣಿನ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಒಂದು ಉದಾಹರಣೆ ಇಲ್ಲಿ ಇಲ್ಲ. ಆದರೆ ಕಳೆದ ಕೆಲವು ದಶಕಗಳಿಂದ ನೇತ್ರಾವತಿ ಹೆಣ್ಣು ಮಕ್ಕಳ ರಕ್ತ ಮತ್ತು ಕಣ್ಣೀರಿನಿಂದ ಕೆಂಪಾಗಿದೆ. ಸೌಜನ್ಯ ಪ್ರಕರಣ ಇಡೀ ತುಳುನಾಡಿನ ಮನಸ್ಸಿನ ಮೇಲೆ ಎಸಗಿದ ಅತ್ಯಾಚಾರ. ನಮ್ಮ ಸಹನೆ ಕಟ್ಟೊಡೆದಿದೆ. ಇನ್ನೊಂದು ಇಂತಹ ಪ್ರಕರಣ ನಡೆಯಬಾರದು ಎಂದು ನಾವು ಹೋರಾಟ ನಡೆಸುತ್ತಿದ್ದೇವೆ. ಈ ಹೋರಾಟದಲ್ಲಿ ನಮ್ಮೊಂದಿಗೆ ಗಟ್ಟಿಯಾಗಿ ನಿಂತ ಏಕೈಕ ಪಕ್ಷ ಎಂದರೆ ಸಿಪಿಎಂ." (ಅತ್ರಾಡಿ ಅಮೃತಾ ಶೆಟ್ಟಿ);

'ಬಿಜೆಪಿಗೆ ಮೋದಿ ಎಂಬ 'ಫಿಟ್ಸ್' ಬಂದಿದೆ. ಅದಕ್ಕೆ ಕಬ್ಬಿಣ ಬೇಡುತ್ತಿದೆ. ಈ 'ಫಿಟ್ಸ್'ನ್ನು ಬಿಡಿಸುವತ್ತ ನಾವು ಎಡ–ಪ್ರಜಾಸತ್ತಾತ್ಮಕ ಬದ್ಧಲಿ ತರಬೇಕಾಗಿದೆ." (ಮಾವಳ್ಳಿ ಶಂಕರ್);

"ಜನನುಡಿ ನುಡಿಸಿರಿಗೆ ಪರ್ಯಾಯವಾಗಿ ಮೂಡಿಬಂದಿದೆ. ನಮ್ಮ ಸಂಖ್ಯೆ ಇಲ್ಲಿ ಕಡಿಮೆ ಇರಬಹುದು. ಆದರೆ ಬುದ್ಧ, ಬಸವ ಮುಂತಾದವರು ಆರಂಭಿಸಿದ ಎಲ್ಲಾ ದೊಡ್ಡ ಬದಲಾವಣೆಗಳೂ ಆರಂಭವಾಗಿದ್ದು ಇಂತಹ ಸಣ್ಣ ಸಂಖ್ಯೆಯ ಜನರಿಂದಲೇ."(ನೀಲಾ);

"ಕರಾವಳಿಯಲ್ಲಿ ಹೆಂಚು, ಗೇರುಬೀಜ, ಬೀಡಿ ಮುಂತಾದ ಕೈಗಾರಿಕೆಗಳು ಜಾಗತೀಕರಣದ ದಾಳಿಗೆ ಸಿಕ್ಕು ಜರ್ಝರಿತವಾಗಿ ವ್ಯಾಪಕ ನಿರುದ್ಯೋಗ ಉಂಟಾದ ಪರಿಸರ ಕೋಮುವಾದ ಬೆಳೆಯಲು ಪ್ರಶಸ್ತವಾದ ಭೂಮಿಕೆ ನಿರ್ಮಿಸಿತು ಎಂಬುದನ್ನು ಮರೆಯಬಾರದು." (ವಿಮಲಾ);

"ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಹಲವು ದಿನಗಳ ಕಾಲ ಚಳಿಗಾಳಿ ಲೆಕ್ಕಿಸದೆ ಧರಣಿ ಕೂತ ಸಾವಿರಾರು ಅಕ್ಷರ ದಾಸೋಹ ಮಹಿಳಾ ಕಾರ್ಮಿಕರನ್ನು ಎಷ್ಟು ಜನ ಲೇಖಕರು ಕಲಾವಿದರು ಚಿಂತಕರು ಹೋಗಿ ಮಾತನಾಡಿಸಿದರು ? ಅದ–ಕ್ಕೆ ಅವರಿಗೆ ಆಹ್ವಾನ ಬೇಕೆ ? ಅದು ಅವರ ಜವಾಬ್ದಾರಿ ಅಲ್ಲವೆ ?"(ವಿಠ್ಠಲ)

"ಒಂದು ಕೋಮುವಾದ ಎದುರಿಸಲು ಪ್ರಗತಿಪರರೆನಿಸಿಕೊಂಡವರು ಇನ್ನೊಂದು ಕೋಮಿನ ಮೂಲಭೂತವಾದ ಬೆಂಬಲಿಸಿ ಕೋಮುವಾದದ ವಿರುದ್ಧ ಹೋರಾಟಕ್ಕೆ ಪೆಟ್ಟು ಕೊಟ್ಟಿದ್ದಾರೆ. ಬಡ ಮುಸ್ಲಿಂ ಮಹಿಳೆಗೆ ನೆರವು ನೀಡಿದನೆಂಬ ಕಾರಣಕ್ಕೆ ವಿಟ್ಲದ ಪತ್ರಕರ್ತನೊಬ್ಬನ ಮೇಲೆ ಕೋಮುವಾದಿ ಸಂಘಟನೆಯೊಂದು ದಾಳಿ ಮಾಡಿದೆ. ಅದನ್ನೂ ನಾವು ಖಂಡಿಸುತ್ತೇವೆ." (ಜೀವನ್)

"ಆಳ್ವಾಸ್ ನುಡಿಸಿರಿಗೆ ಇಷ್ಟೆಲ್ಲಾ ಖರ್ಚು ಮಾಡುವುದು ಹೇಗೆ ಸಾಧ್ಯವಾಗುತ್ತದೆ... ಆಳ್ವಾಸ್ ಶಿಕ್ಷಣ ಸಂಸ್ಥೆಗಳಲ್ಲಿ 16 ಸಾವಿರ ವಿದ್ಯಾರ್ಥಿಗಳಿದ್ದಾರೆ. ಪ್ರತಿಯೊಬ್ಬರಿಂದ ಒಂದುವರೆ ಲಕ್ಷ ಬರುತ್ತದೆ. ಅಂದರೆ ಸುಮಾರು 200ಕೋಟಿ.ರೂ. ಇದರ ಮಿಗುತೆ ಹಣದಲ್ಲೇ ಇಂತಹ ಅದ್ದೂರಿ ಸಮ್ಮೇಳನ ನಡೆಸಲಾಗುತ್ತಿದೆ."(ಪ್ರಶಾಂತ್);

* * *

ಜನನುಡಿಯ ನಿರ್ಣಯಗಳು

1. ಪಂಕ್ತಿಭೇಧ, ಪಲ್ಲಕಿ ಸಂಸ್ಕೃತಿಯು ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಸಂವಿಧಾನ ವಿರೋಧಿ ನಡೆಯಾಗಿದ್ದರಿಂದ ಎಲ್ಲ ಸ್ವರೂಪಗಳಲ್ಲೂ ಅದನ್ನು ವಿರೋಧಿಸುತ್ತದೆ
2. ಸಾಹಿತ್ಯ, ಸಂಸ್ಕೃತಿಯನ್ನು ಕೋಮುವಾದಿ ರಾಜಕಾರಣ, ಧಾರ್ಮಿಕ ವ್ಯಕ್ತಿಗಳು ಹಾಗೂ ಬಂಡವಾಳಶಾಹಿಯು ಭ್ರಷ್ಟಗೊಳಿಸುವುದನ್ನು ವಿರೋಧಿಸುವುದು
3. ಮಹಿಳೆಯರ ಮೇಲಿನ ಎಲ್ಲಾ ತರದ ದೌರ್ಜನ್ಯಗಳನ್ನು ಖಂಡಿಸುತ್ತದೆ
4. ಆಚರಣೆ,ನಂಬಿಕೆ ಹೆಸರಲ್ಲಿ ತಳಸಮುದಾಯದ ಆತ್ಮಘನತೆ ನಾಶಗೊಳಿಸುವುದನ್ನು ವಿರೋಧಿಸುತ್ತದೆ. ಮುಂದುವರೆದು ಮೌಢ್ಯ–ವಿರೋಧಿ ಮಸೂದೆಯನ್ನು ಮಂಡಿಸಿ ಜಾರಿಗೊಳಿಸಬೇಕೆಂದು ಆಗ್ರಹಿಸುತ್ತದೆ.
5. ಈ ಮುಂದೆಯೂ ನಾಡು–ನುಡಿ–ಸಮುದಾಯವನ್ನು ದಮನಿಸುವ ಪ್ರಯತ್ನ ನಡೆದಾಗೆಲ್ಲಾ ಒಗ್ಗಟ್ಟಾಗಿ ಹೋರಾಡುತ್ತದೆ.

JANASHAKTHI KANNADA VARA PATRIKE DEC 29, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Satu...
Licensed to Post without prepayment License No. WPP-28...

'ನುಡಿಸಿರಿ'ಗೆ ಪರ್ಯಾಯವಾದ 'ಜನನುಡಿ' ಹೊಮ್ಮುತ್ತಿರುವ ಜನ-ಪರ ಪರ್ಯಾಯದ ಸಂಕೇತ

– ವಸಂತ

'ನುಡಿಯು ಸಿರಿಯಲ್ಲ, ಜನರು' ಎಂಬ ಘೋಷವಾಕ್ಯದೊಂದಿಗೆ ಡಿಸೆಂಬರ್ 14, 15 2013 ರಂದು ಮಂಗಳೂರಿನಲ್ಲಿ ನಡೆದ 'ಜನನುಡಿ', ಅದರಲ್ಲಿ ಭಾಗವಹಿಸಿದ್ದ ಕೆಲವರಿಗೆ 1980ರ ದಶಕದ ಬಂಡಾಯದ ಸ್ಥಾಪನಾ ಸಮ್ಮೇಳನವನ್ನು ನೆನಪಿಸಿದರೆ, ಇನ್ನೂ ಕೆಲವರಿಗೆ 12ನೇ ಶತಮಾನದ ಅನುಭವ ಮಂಟಪವನ್ನು ನೆನಪಿಸಿತಂತೆ. ಹಲವರಿಗೆ ಒಂದು 'ಚಾರಿತ್ರಿಕ' ಘಟನೆಯಲ್ಲಿ ಭಾಗವಹಿಸಿದ ರೋಮಾಂಚನವನ್ನು ಉಂಟು ಮಾಡಿತಂತೆ.

ರಾಜ್ಯದ ನಾಲ್ಕೂ ಮೂಲೆಗಳಿಂದ ಬಂದ ಹಲವು ಪ್ರಗತಿಪರ ಲೇಖಕರು, ಕಲಾವಿದರು, ಚಿಂತಕರು ಮತ್ತು ಸಾಹಿತ್ಯ-ಕಲಾಸಕ್ತರು ಅಲ್ಲಿ ನೆರೆದಿದ್ದರು. ವೇದಿಕೆಯ ಮೇಲೂ ಕೆಳಗೂ ಮಹಿಳೆಯರೂ ಯುವಜನರೂ ಅರ್ಧಕ್ಕಿಂತಲೂ ಹೆಚ್ಚು ಇದ್ದರು. ದಲಿತ, ತಳಸಮುದಾಯದ ಲೇಖಕರೂ ಹೋರಾಟಗಾರರು, ಹಲವು ಜನವಿಭಾಗಗಳ ನಿಜವಾದ ಪ್ರತಿನಿಧಿಗಳು ದೊಡ್ಡ ಸಂಖ್ಯೆಯಲ್ಲಿ ಇದ್ದಿದ್ದು ಎದ್ದು ಕಾಣುತ್ತಿತ್ತು. ಮಾತ್ರವಲ್ಲ, ಸಮಾವೇಶದಲ್ಲಿ ನಡೆದ ಚರ್ಚೆಗಳು ಜನರನ್ನು ಬಾಧಿಸುವ ವಿಷಯಗಳ ಬಗ್ಗೆ ಇತ್ತು. ಸಾಮಾನ್ಯವಾಗಿ ಕೊನೆಗೆ ಇರುವ (ಅಥವಾ ಇಲ್ಲದೇನೇ ಹೋಗುವ) ಮಹಿಳೆಯ ಬಗೆಗಿನ ಮೊದಲ ಗೋಷ್ಠಿಯಾಗಿತ್ತು. 'ಸಮಕಾಲೀನ ಸವಾಲುಗಳು-ಸಾಧ್ಯತೆಗಳು', 'ಜನಸಂಸ್ಕೃತಿ ಮತ್ತು ಮಾರುಕಟ್ಟೆ', 'ಕರಾವಳಿಯ ತಲ್ಲಣಗಳು' ಇವೆಲ್ಲ ವಿಷಯಗಳು ಸಾಹಿತ್ಯಕ-ಸಾಂಸ್ಕೃತಿಕ




ಸಮಾವೇಶದಲ್ಲಿ ಗೋಷ್ಠಿಗಳ ವಿಷಯವಾಗುವುದು ಅಪರೂಪ. ಇವೆಲ್ಲಾ ಇಂತಹ ನೆನಪುಗಳಿಗೆ, ಅನಿಸಿಕೆಗಳಿಗೆ ಕಾರಣವಾಗಿರಬಹುದು.

'ನುಡಿಸಿರಿ' ಒಂದು 'ಸಾಂಸ್ಕೃತಿಕ ಮುಖವಾಡ'

ಡಾ. ಮೋಹನ್ ಆಳ್ವಾ ಅವರು ಕಳೆದ 10 ವರ್ಷಗಳಿಂದ ಅದ್ದೂರಿಯಾಗಿ ಸಂಘಟಿಸುತ್ತಿರುವ 'ಆಳ್ವಾಸ್ ವಿಶ್ವ ನುಡಿಸಿರಿ ವಿರಾಸತ್'ನ ನಿಜವಾದ ಉದ್ದೇಶ ಹಲವು ಲೇಖಕ-ಕಲಾವಿದರಾಗಿ ಅರಿವಾಗಲಾರಂಭಿಸಿದಾತೆ ಅದರ ವಿರುದ್ಧ ಭಾವನೆ ಹೊಗೆಯಾಡಲಾರಂಭಿಸಿತ್ತು. 10ನೇ ನುಡಿಸಿರಿಯನ್ನು ವೀರೇಂದ್ರ ಹೆಗಡೆಯವರು ಉದ್ಘಾಟಿಸುತ್ತಾರೆ ಎಂದು ತಿಳಿದಾಗ ಅದು ಭುಗಿಲೆದ್ದಿತು. ಧರ್ಮಸ್ಥಳದಲ್ಲಿ ಸೌಜನ್ಯ ಮತ್ತು ನೂರಾರು ಹೆಣ್ಣುಮಕ್ಕಳ ಕೊಲೆಗಳ ವಿರುದ್ಧ ಇತ್ತೀಚಿಗೆ ವ್ಯಕ್ತವಾದ ರೊಚ್ಚಿಗೆ ಮತ್ತು ಇತರ ಯಾವುದೇ ಜನತೆಯ ತಲ್ಲಣಗಳಿಗೆ 'ನುಡಿಸಿರಿ' ಸಕಾರಾತ್ಮಕವಾಗಿ ಸ್ಪಂದಿಸುವುದಿಲ್ಲ. ಮಾತ್ರವಲ್ಲ ಅವನ್ನು ಮರೆಮಾಚುವುದೇ ಇಂತಹ ಸಂಭ್ರಮಗಳ ಗುರಿ. 'ನುಡಿಸಿರಿ' ಪಾಳೆಯಗಾರಿ, ಬಂಡವಾಳಶಾಹಿ ಮತ್ತು ಕೋಮುವಾದಿ ಶಕ್ತಿಗಳ 'ಸಾಂಸ್ಕೃತಿಕ ಮುಖವಾಡ' ಎಂಬುದು ಹೆಚ್ಚೆಚ್ಚು ಲೇಖಕ-ಕಲಾವಿದರಿಗೆ ಸ್ಪಷ್ಟವಾಗುತ್ತಿದ್ದಂತೆ ಅದಕ್ಕೆ ಪರ್ಯಾಯ ಕಟ್ಟಬೇಕು. ಬಂಡವಾಳಗಾರ, ಧರ್ಮಗುರು, ಒಡೆಯ ಇವರನ್ನೆಲ್ಲಾ ಸಾಹಿತ್ಯ-ಸಂಸ್ಕೃತಿ ಪ್ರವೇಶಿಸಿ ಭ್ರಷ್ಟಗೊಳಿಸಲು ಬಿಡಬಾರದು ಎಂಬ ಭಾವನೆ ಗಟ್ಟಿಯಾಗತೊಡಗಿ 'ಜನನುಡಿ' ಮೂಡಿಬಂತು. ಸಮುದಾಯ, ಕರಾವಳಿ ಲೇಖಕಿಯರ ಸಂಘ, ಚಿಂತನ, ಜನಸಾಹಿತ್ಯ ಸಂಘಟನೆ, ಸಹಮತ್, ಇಪ್ಟಾ, ನಾವು-ನಮ್ಮಲ್ಲಿ, ಆದಿಮ ಮುಂತಾದ ಹಲವು ಸಮಾನ-ಮನಸ್ಕ ಪ್ರಗತಿಪರ ಸಾಂಸ್ಕೃತಿಕ ಸಂಘಟನೆಗಳು ಜನ-ಪರ ಸಂಘಟನೆಗಳ ಸಹಕಾರದಿಂದ ಕಟ್ಟಿಕೊಂಡ 'ಅಭಿಮತ' ಈ ಸಮಾವೇಶವನ್ನು ಸಂಘಟಿಸಿತ್ತು. 'ನುಡಿಸಿರಿ'ಗೆ ಪರ್ಯಾಯವಾಗಿ 'ಜನನುಡಿ' ಮೂಡಿ ಬಂದಿದ್ದರೂ ಅದರ ಉದ್ದೇಶಗಳು ಇನ್ನೂ ವ್ಯಾಪಕವಾದದ್ದು ಅಂತಾರೆ ಅದರ ಸಂಘಟಕರು.

ಬಿಚ್ಚುಮನಸ್ಸಿನ ಪ್ರಬುದ್ಧ ಚರ್ಚೆ

ಉದ್ಘಾಟನೆ, ಸಮಾರೋಪಗಳಲ್ಲದೆ ಮೇಲೆ ಹೇಳಿದ ಹಲವು ಗೋಷ್ಠಿಗಳಲ್ಲಿ ಚಿಂತನ-ಮಂಥನ ನಡೆಯಿತು. ಧರ್ಮಸ್ಥಳದಲ್ಲಿ ಹೆಣ್ಣುಮಕ್ಕಳ ಅಸಹಜ ಸಾವು ಮತ್ತು ಅದರ ವಿರುದ್ಧ ಭುಗಿಲೆದ್ದ ಚಳುವಳಿ, ಕಾರ್ಮಿಕ ಚಳುವಳಿಯ ಕೋಟೆ ಮತ್ತು ಬಹುಸಂಸ್ಕೃತಿಯ ಬೀಡಾಗಿದ್ದ ಕರಾವಳಿ 'ಹಿಂದುತ್ವದ ಪ್ರಯೋಗಶಾಲೆ' ಆಗಲು ಕಾರಣಗಳು, ಮೋದಿ ಪ್ರತಿನಿಧಿಸುವ ಶ್ರೀಮಂತ-ಪರ ಕೋಮುವಾದಿ ಫ್ಯಾಸಿಸ್ಟ್ ನಾಯಕತ್ವಕ್ಕೆ ವಿರೋಧ, ಮಡೆಸ್ನಾನ-ಪಂಕ್ತಿಬೇಧ-ಪಲ್ಲಕಿ



ಮೆರವಣಿಗೆಗಳ ಖಂಡನೆ, ಮೂಢನಂಬಿಕೆಗಳ ವಿರುದ್ಧ ಕಾನೂನಿಗೆ ಬೆಂಬಲ, ಮಹಿಳೆಯರ ಮೇಲೆ ದೌರ್ಜನ್ಯಗಳ ವಿವಿಧ ರೂಪಗಳು, ಮಹಿಳಾ ಚಳುವಳಿಯ ಸಮೀಕ್ಷೆ/ವಿಮರ್ಶೆ, ಜಾಗತೀಕರಣದ ಸಂದರ್ಭದಲ್ಲಿ ಕಾವ್ಯದ ಪಾತ್ರ, ಸಾಹಿತ್ಯದ ಕಾರ್ಪೋರೇಟೀಕರಣ, ಮಾಧ್ಯಮಗಳಲ್ಲಿ ಬುದ್ಧಿಜೀವಿ-ವಿರೋಧಿ ಧೋರಣೆಗಳು, ಉದ್ಯಮ ಮತ್ತು ಜಾಹೀರಾತು ಜನಸಂಸ್ಕೃತಿಯನ್ನು ಬಳಸಿಕೊಂಡ ಬಗೆ, ಕನ್ನಡ ಕಾವ್ಯ ಮಹಿಳಾ ಸಮಸ್ಯೆಗೆ ಸ್ಪಂದಿಸಿದ ರೀತಿ, ಶ್ರಮದ ಮೇಲೆ ಬಂಡವಾಳದ ದಾಳಿ, ಜಾಗತೀಕರಣಕ್ಕೂ ಕೋಮುವಾದಕ್ಕೂ ಇರುವ ಸಂಬಂಧ, ಸರ್ಕಾರ ಮತ್ತು ಉದ್ಯಮಿಗಳು ಉತ್ಸವಗಳನ್ನು ಸಂಘಟಿಸುವ ಹಿಂದಿನ ಹುನ್ನಾರಗಳು; ಕೋಮುವಾದ, ಫ್ಯಾಸಿಸಂನಂತಹ 'ರೋಗ ಲಕ್ಷಣ'ಗಳ ಬದಲು ಬಂಡವಾಳಶಾಹಿ, ಸಾಮ್ರಾಜ್ಯಶಾಹಿಯಂತಹ 'ರೋಗ'ಗಳಿಗೆ ಔಷಧಿ ಹುಡುಕುವ ಅಗತ್ಯ; ಕೊರಗ, ಕುಡುಬಿ, ಮಲೆಕುಡಿಯ ಮುಂತಾದ ಮೂಲನಿವಾಸಿಗಳ ತಲ್ಲಣಗಳು, ಜನ ಚಳುವಳಿಗಳು ಬಿಡಿಬಿಡಿಯಾಗಿ ದ್ವೀಪಗಳಾಗದೆ ಐಕ್ಯತೆ ಸಾಧಿಸಿ ವ್ಯವಸ್ಥೆ ಬದಲಿಸುವತ್ತ ಸಾಗುವ ಬಗೆ, ಮೆಗಾ ಪ್ರಾಜೆಕ್ಟುಗಳಿಂದ ಒಕ್ಕಲೆಬ್ಬಿಸಿದ ಜನರ ಸಮಸ್ಯೆಗಳು, ಪ್ರಜಾಸತ್ತೆಯ ಅಂಗಗಳ ಪಾಳೆಯಗಾರೀಕರಣ, ಐಸಿಡಿಎಸ್ ಖಾಸಗೀಕರಣ, ಮೈಸೂರು ಒಡೆಯರ್ ನಿಧನದ ಸಂದರ್ಭದಲ್ಲಿ ಮಾಧ್ಯಮಗಳ ಪಾಳೆಯಗಾರಿಯ ಪೂಜೆ; ಜನಸಂಸ್ಕೃತಿಯ ಯಜಮಾನ, ಪೂಜಾರಿ, ಪುರುಷ ಶ... ಶಕ್ತಿ ರಾಜಕಾರಣದ ಪ್ರಭಾವ; ಕಾಂಗ್ರೆಸ್ ... ಬಿಜೆಪಿ ಎರಡಕ್ಕೂ ರಾಜಕೀಯ ಪರ್ಯಾ... ಹೀಗೆ ಹತ್ತು ಹಲವು ವಿಷಯಗಳ ... ಬಿಚ್ಚುಮನಸ್ಸಿನ ಪ್ರಬುದ್ಧವಾದ ಆಳವಾದ ಚ... ನಡೆಯಿತು. ತಮ್ಮ ಮಾತುಗಳ ಮೂಲಕ ಚ... ಆರಂಭಿಸಿದವರಲ್ಲಿ, ಪ್ರತಿಕ್ರಿಯಿಸಿದವರಲ್ಲಿ ... ರಾಜೇಂದ್ರ ಚೆನ್ನಿ, ಎಸ್.ಜಿ. ಸಿದ್ಧರಾಮ... ರಹಮತ್ ತರೀಕೆರೆ, ದಿನೇಶ್ ಅಮಿನ್‌ಮ... ಆರ್.ಪೂರ್ಣಿಮಾ, ಎಚ್.ಎಸ್.ಅನುಪ... ಕೆ.ನೀಲಾ, ವಿನಯಾ ಒಕ್ಕುಂದ, ಮಾ... ಶಂಕರ್, ಎನ್. ಗಾಯತ್ರಿ, ಜಿ.ಪಿ.ಬಸವರಾ... ಕೆ.ಎಸ್.ವಿಮಲ, ಸಬಿಹಾ ಭೂಮಿಗೌಡ, ಪ... ಭಂಡಾರಿ, ಎಂ.ಡಿ.ಒಕ್ಕುಂದ, ಸನತ್ ಕುಮ... ಬೆಳಗಲಿ, ರವಿಕೃಷ್ಣಾ ರೆಡ್ಡಿ, ವಸುಂಧ... ಭೂಪತಿ, ಮೀನಾಕ್ಷಿ ಬಾಳಿ, ಪಿಚ್ಚಳ್ಳಿ ಶ್ರೀನಿವಾ... – ಸೇರಿದ್ದರು. ಒಟ್ಟು 48 ಜನ ವೇದಿಕೆಯಿ... ಮಾತನಾಡಿದರು. 16 ಕವಿಗಳು ತಮ್ಮ ಕ... ಓದಿದರು.

ಇಂತಹ ವ್ಯಾಪಕವಾದ ಆಳವಾದ ಚರ್ಚೆಗ... ಸಾರಾಂಶವನ್ನು ಸ್ವಲ್ಪದರಲ್ಲಿ ಹೇಳುವುದು ಕ... ಈ ಚರ್ಚೆಗಳಲ್ಲಿ ಹೇಳಲ್ಪಟ್ಟು ಸಮಾವೇ... ಉದ್ದಕ್ಕೂ ಮಾರ್ದನಿಸಿದ ಕ... ನುಡಿಗಳನ್ನು ಜತೆಗೆ ನೀಡಿದ ಬಾಕ್ಸ... ಸಂಗ್ರಹಿಸಲಾಗಿದೆ. ಅವು ಚರ್ಚೆ... 'ರುಚಿ' ಕೊಡಬಹುದು. ಸಮಾವೇಶ... ನಿರ್ಣಯಗಳನ್ನೂ ಬಾಕ್ಸ... ಕೊಡಲಾಗಿದೆ. 'ಜನನುಡಿ'ಯ... ಕವಿಗೋಷ್ಠಿ, ಹೋರಾಟ... ಹಾಡುಗಳು, ಕೋಲಾಟ ಮ... ಕೆಲವರ ವಿಷಯ ಮಂಡನೆಯ... ಬಿಟ್ಟರೆ ಸಾಹಿತ್ಯಕ-ಸಾಂಸ್ಕೃತಿಕ ಭಾ... ಕಡಿಮೆ ಇತ್ತು ಎಂಬುದು ಒಂ... ಕೊರತೆ. ಇದು ಸಮಯ ಸಂಪನ್ಮೂಲಗ... ಮಿತಿಯಿಂದ ಆಗಿರುವಂತಹದ್ದು. ಆದರ... 'ಜನನುಡಿ'ಯ ಮುಂದಿನ ಅವತರಣಿಕೆಗಳ... ಗಮನಿಸಬೇಕಾದ್ದು.

ಸಾಂಸ್ಕೃತಿಕ ರಾಜಕೀಯ ಮಹತ್ವ

ಆದರೆ 'ಜನನುಡಿ'ಯ ಮಹತ್ವ ಇರುವುದ... ಅಲ್ಲಿ ಏನು ಹೇಳಲಾಯಿತು, ಮಾಡಲಾಯಿ... ಎಂಬುದರಲ್ಲಿ ಅಲ್ಲ. ಇಂತಹ ಒಂದು ಜನ... ಪರ ಪರ್ಯಾಯ ಸಾಹಿತ್ಯಕ-ಸಾಂಸ... ಸಮಾವೇಶವನ್ನು ಸಂಘಟಿಸಲಾಯಿ... ವೈವಿಧ್ಯಮಯ ಚಟುವಟಿಕೆಯಲ್ಲಿ ತ... ಡಗಿದ ಹಲವು ಸಾಂಸ್ಕೃತಿಕ ಸಂಘಟನೆಗ... ಒಂದೇ ವೇದಿಕೆಯಲ್ಲಿ ಒಗ್ಗೂಡಿ 'ನುಡಿಸಿ... ಪ್ರತಿನಿಧಿಸಿದ ಪಾಳೆಯಗಾರಿ, ಬಂಡವಾಳಶಾ... ಮತ್ತು ಕೋಮುವಾದಿ ಶಕ್ತಿಗಳ 'ಸಾಂಸ್ಕೃ... ಮುಖವಾಡ'ವನ್ನು ಕಿತ್ತೊಗೆದು ಅವರನ... ಬಯಲು ಮಾಡಿತು ಎಂಬುದೇ 'ಜನನುಡಿ'ಯ... ಮಹತ್ವ. ಮಹಿಳಾ ದೌರ್ಜನ್ಯ ವಿರೋ... ವೇದಿಕೆ, ಮಡೆಸ್ನಾನ-ಪಂಕ್ತಿಬೇಧದ ವಿರು... ಹೋರಾಟ, ಬಿಜೆಪಿಯ ರಾಜಕೀಯ ಸೋಲ... ಸೌಜನ್ಯ ಚಳುವಳಿಗಳ ಬೆನ್ನಲ್ಲೇ ಇದು ಬಂದಿದ... ಕರಾವಳಿಯಲ್ಲಿ ಬಲವಾದ ಬದಲಾವಣೆಯ... ಗಾಳಿ ಬೀಸುತ್ತಿರುವುದರ ಸಂಕೇತ. ಇದ... ಕರಾವಳಿಯ ತಲ್ಲಣಗಳ ನಿರ್ದಿಷ್ಟ ಸನ್ನಿವೇಶದ... ಮೂಡಿಬಂದರೂ, ಇಡೀ ರಾಜ್ಯದ ದೇಶ...

ಪುಟ 15

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 1... Sangrama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, M... BANGALORE-560086 Editor NITHYANANDASWAMI EMS Bhavana, No 37/A, 8th C...